ಸರಂಗಿಲ್ಲಾ



ಡಾ॥ ಆರ್. ಸರೋಜಿನಿ

ಸರಂಗೇಕ್

(ಬಾನುಲಿ ರೂಪಕಗಳು)

ಡಾ. ಆರ್. ಸರೋಜಿನಿ

ವಿವೇಕ ಪ್ರಕಾಶನ,
ಹುಬ್ಬಳ್ಳಿ
೧೯೯೭

SARANGEL : Collection of Radio Features

Writeen by : **Dr. R. SAROJINi** (Chawalar)

Published by : **VIVEK PRAKASHAN**
'Sankalpa' 150
Jayaprakash Nagar,
Hubli - 580 030.
Karnataka ☎ : 331287

Pages : 64 + VI

Price : Rs. 45/-

ಹಕ್ಕುಗಳು ಲೇಖಕರ ಸ್ವಾಧೀನ

ಪ್ರಥಮ ಮುದ್ರಣ : ೧೯೯೭
೧೦೦೦ ಪ್ರತಿಗಳು

ಅಕ್ಷರ ಜೋಡಣೆ :
ಮತ್ತು ಮುದ್ರಣ ಸಿದ್ಧಾರ್ಥ ಡಿ.ಟಿ.ಪಿ. ಸೆಂಟರ್
ನಂ. ೪, ತಾಂಬೆ ಬೆಂಬರ್ಸ್, ಕಾರ್ಪೊರೇಶನ್ ಬಿಲ್ಡಿಂಗ್,
ಮ್ಯಾದಾರ ಓಣಿ, ಹುಬ್ಬಳ್ಳಿ - 580 020. ☎ : 36515

ನನ್ನ ನುಡಿ

ಸೇವಾದಳದ ಹರ್ಡೀಕರರು, ಕಿತ್ತೂರು ಚೆನ್ನಮ್ಮ, ವಸಂತ ಋತು, ಬಿಡುಗಡೆಗಾಗಿ ದುಡಿದವರು ಈ ನಾಲ್ಕು ರೂಪಕಗಳು ಸೇರಿ 'ಸರಂಗೇಳ್' ರೂಪುಗೊಂಡಿದೆ. ಈ ರೂಪಕಗಳು ಧಾರವಾಡದ ಬಾನುಲಿ ಕೇಂದ್ರದಿಂದ ಪ್ರಸಾರವಾಗಿರುತ್ತವೆ. ಪ್ರಸಾರದ ಅವಧಿಗೆ ತಕ್ಕಂತೆ ಕೆಲಮಟ್ಟಿಗೆ ಸಂಕ್ಷಿಪ್ತಗೊಂಡಿರುವದೂ ಉಂಟು.

ನನ್ನ ಬರವಣಿಗೆಯ ಹಸ್ತಪ್ರತಿಗಳನ್ನು ಜೋಡಿಸುವಾಗ ಈ ರೂಪಕಗಳು ಕೈಗೆ ಬಂದವು. ಮತ್ತೊಮ್ಮೆ ಪರಿಶೀಲಿಸಿದೆ. ಪುಸ್ತಕ ರೂಪದಲ್ಲಿ ಪ್ರಕಟಿಸುವ ಅಗತ್ಯ ಎಂದಿಗಿಂತಲೂ ಇಂದು ಹೆಚ್ಚಾಗಿದೆ ಅನಿಸಿತು. ಸಾಮಾಜಿಕರ ಅರಿವಿಗಾಗಿ ಮತ್ತು ಅವರ ಹಿತಾಸಕ್ತಿಗಾಗಿ ವಿಶೇಷವಾಗಿ ವಿದ್ಯಾರ್ಥಿ ವೃಂದದ ಒಳಿತಿಗಾಗಿ ಈ ರೂಪಕಗಳನ್ನು 'ಸರಂಗೇಳ್' ಹೆಸರಿನಲ್ಲಿ ಪ್ರಕಟಿಸುತ್ತಿದ್ದೇನೆ.

ಈ ರೂಪಕಗಳಲ್ಲಿನ ಕೇಂದ್ರ ವ್ಯಕ್ತಿಗಳು ತಮ್ಮ ಜೀವನದಲ್ಲಿ ಅನುಭವಿಸಿದ ಕಷ್ಟ ಕೋಟಲೆಗಳು, ಯಾತನೆಗಳು, ಒಡನಾಡಿದ ಹಿತಶತ್ರುಗಳ ಪ್ರತಿಚ್ಛಾಯೆ ನನ್ನ ವೃತ್ತಿ ಜೀವನದ ಇತ್ತೀಚಿನ ದಿನಗಳಲ್ಲಿ ಪಡೆಮೂಡಿದ್ದು ಒಂದು ಆಕಸ್ಮಿಕವಾದರೂ ಅದು ವಾಸ್ತವಿಕತೆ. ಮೊನ್ನೆ ಮೊನ್ನೆಯವರೆಗೆ ನನ್ನೊಡನೆ ಆತ್ಮೀಯವಾಗಿ ನಡೆದುಕೊಳ್ಳುತ್ತಿದ್ದ (ಅಥವಾ ನಟಿಸುತ್ತಿದ್ದ?) ನನ್ನ ಹಿತಚಿಂತಕರಿಂದಲೇ ಹೊನ್ನಶೂಲಕ್ಕೇರಿಸಲ್ಪಟ್ಟಾಗ- ಬ್ರೂಟಸ್‌ನಿಂದ ಇರಿತಕ್ಕೊಳಗಾದ ಸೀಝರನಂತೆ ನರಳಿದೆ. ಸೀಝರನ 'You too Brutes' ಧ್ವನಿಯಲ್ಲಿ ನನ್ನ ಕೂಗು ಸಮ್ಮಿಳಿತವಾಯ್ತು. ನಡೆದು ಹೋದ ಬದುಕಿನ ಈ ಚಿತ್ರಗಳ ಬಣ್ಣಗಳು ಇನ್ನೂ ಆರದೇ ಹಸಿ ಹಸಿಯಾಗಿರುವಾಗಲೇ- ಅಂತರಂಗ ಕೂಗುತ್ತದೆ. ಈ ಚಿತ್ರಮಾಲೆ ಇಂದಿನ ಮುಂದಿನ ನಾಗರಿಕರಿಗೆ ಆದರ್ಶದ ಧ್ವನಿಯಾಗಲಿ- ಅದೇ ಈ 'ಸರಂಗೇಳ್'.

ಇಲ್ಲಿನ ಕೇಂದ್ರ ವ್ಯಕ್ತಿಗಳ ವ್ಯಕ್ತಿತ್ವದ ಎತ್ತರ ಮೇರುಪರ್ವತದಷ್ಟು, ಅದು ನನ್ನ ಪರಿಧಿ-ಅಳವಿಗೆ ಮೀರಿದ್ದು. ಕೇವಲ ಕಲ್ಪಿಸಿಕೊಳ್ಳಬಲ್ಲಿ ಮಾತ್ರ- ಎಂಬುದು ನನ್ನ ಪ್ರಾಂಜಲ ಅನಿಸಿಕೆ. ಆದರೆ ನನ್ನ ಶಕ್ತಿ ಸಾಮರ್ಥ್ಯಗಳ ಪರಿಹಾನಲ್ಲಿ ಪ್ರಾಮಾಣಿಕತೆಯಿಂದ ನನ್ನ ಕರ್ಮಭೂಮಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದೇನೆಂದು ಮಾತ್ರ ಆತ್ಮಸಾಕ್ಷಿಯಾಗಿ ಹೇಳಬಲ್ಲೆ.

ಸುಮಾರು ಮೂವತ್ತು ವರ್ಷಗಳಷ್ಟು ದೀರ್ಘ ಕಾಲ ಒಂದು ಸಂಸ್ಥೆಯಲ್ಲಿನ ಅಧ್ಯಾಪನದ ಕೈಂಕರ್ಯ ನನ್ನದಾಗಿದೆ. ದುರ್ದೈವವಶಾತ್, ಕುಂಠಿತಗೊಂಡ ಅಧ್ಯಯನ- ಅಧ್ಯಾಪನಗಳ ಸರ್ವತೋಮುಖ ಏಳ್ಗೆ ನನ್ನ ಹೆಬ್ಬಯಕೆಯಾಗಿತ್ತು. ನನ್ನ ಕರ್ಮಭೂಮಿಯ ಸರ್ವಾಂಗೀಣ ಅಭಿವೃದ್ಧಿ ನನ್ನ ಗುರಿಯಾಗಿತ್ತು. ಇವುಗಳನ್ನು ಕಾರ್ಯರೂಪಕ್ಕೆ ತರಬೇಕೆಂಬ ಹಂಬಲದಿಂದ ಸಂಸ್ಥೆಯ ಕರ್ಣಧಾರತ್ವಕ್ಕೆ ಹೆಗಲಿತ್ತೆ. ಆತ್ಯಗತ್ಯವಾದ ಶಿಸ್ತು ಸಂಸ್ಥೆಯಲ್ಲಿ ಒಡಮೂಡಬೇಕಿತ್ತು. ಸಂಸ್ಥೆಯ ಆದಾಯ, ಸಂಸ್ಥೆಯ ಅಭಿವೃದ್ಧಿಗೆ ಮಾತ್ರ ಮೀಸಲಿರಬೇಕಿತ್ತು. ಕರ್ಮಭೂಮಿಯ ತುಂಬೆಲ್ಲ ಸುಮಧುರ ಸೌಗಂಧ ಹೊರಸೂಸಬೇಕಿತ್ತು. ಮೊರಡಿಯೊಳು ಮಾದುಫಲವನರಸಿದಂತಾಯ್ತು. ಒಂಬತ್ತು ತಿಂಗಳ ಕಾಲ ನನ್ನ ಕಾರ್ಯವೈಖರಿಯನ್ನು ಮೆಚ್ಚಿಕೊಂಡವರು ರಾತ್ರಿ ಕಳೆದು ಬೆಳಗಾಗುವಷ್ಟರಲ್ಲಿ ತಮ್ಮ ವೇಷ ಬದಲಿಸಿದರು. (ಅಥವಾ ಅವರ ನಿಜವೇಷವೇ ಆದಾಗಿತ್ತೊ?) ನನ್ನ ಅಹರ್ನಿಶಿ ದುಡಿತಕ್ಕೆ, ಪ್ರಾಮಾಣಿಕತೆಗೆ ದೊರೆತ ಬಳುವಳಿಯಾದರೂ ಎಂಥದು? ಸಂಕಲನದಲ್ಲಿನ ಒಂದೆರಡು ರೂಪಕಗಳಲ್ಲಿಯೇ ಅದಕ್ಕುತ್ತರವುಂಟು. ಸಹೃದಯತೆಯಿಂದ ಓದಿದವರಿಗೆ ಅರ್ಥವಾದೀತು ಎಂದು ಹೇಳಬಲ್ಲೆ.

ಈ ಒಂದು ಆಕಸ್ಮಿಕವೇ ಈ ರೂಪಕಗಳ ಸಂಕಲನ ಹೊರಬರುತ್ತಿರುವುದಕ್ಕೆ ಹಿನ್ನೆಲೆ. 'ಸೇವಾದಲದ ಡಾ॥ ಹರ್ಡೀಕರರು' ಮತ್ತು 'ಬಿಡುಗಡೆಗಾಗಿ ದುಡಿದವರು' ಇವೆರಡೂ ರೂಪಕಗಳ ಸಿದ್ಧತೆಯ ಹಿಂದೆ ಆಕಾಶವಾಣಿ ಕಾರ್ಯನಿರ್ವಾಹಕ ಶ್ರೀ ಜಿ. ಬಿ. ಮಂಗಳಗಟ್ಟಿ ಇವರ ಶ್ರಮ ಮತ್ತು ಸಲಹೆಗಳು ಸೇರಿವೆ. ಡಾ॥ ಹರ್ಡೀಕರರ ಸಂಪರ್ಕ ಬಂದವರು, ಸೇವಾದಲದ ಕಾರ್ಯಕರ್ತರಾಗಿದ್ದವರು ಇಂದು ಕೆಲವರೇ ಬದುಕಿದ್ದಾರೆ. ಅವರನ್ನು ಆಹ್ವಾನಿಸಿ ಅವರ ಅನಿಸಿಕೆಗಳನ್ನು ಧ್ವನಿಮುದ್ರಿಸಿಕೊಳ್ಳಲು ಅನುಕೂಲ ಮಾಡಿಕೊಟ್ಟ

ಡಾ॥ ಗಂಗೂಬಾಯಿ ಹಾನಗಲ್ಲ ಅವರನ್ನು ಇಲ್ಲಿ ಸ್ಮರಿಸುತ್ತೇನೆ. ಡಾಕ್ಟರರ ಭಾವಚಿತ್ರವನ್ನು ಒದಗಿಸಿದ ಶ್ರೀ ಶೇವಡೆ ಅವರನ್ನೂ ನೆನೆಸುತ್ತೇನೆ. ಬಿಡುಗಡೆಗಾಗಿ ದುಡಿದವರು ಬಹಳಷ್ಟು ಜನರಿರುವರಾದರೂ ಎಲ್ಲರನ್ನೂ ಸಂಪರ್ಕಿಸುವದು ದುಃಸಾಧ್ಯ. ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಸಮರ ಬರೆಯುವಾಗ ಪರಿಚಯವಾದ ಬೆಳಗಾವಿ ಮತ್ತು ಧಾರವಾಡ ಜಿಲ್ಲೆಯ ಕೆಲವು ಸ್ವಾತಂತ್ರ್ಯಯೋಧರನ್ನು ಸಂಪರ್ಕಿಸಿ ಹುಬ್ಬಳ್ಳಿಯ ಬೆಂಗೇರಿಯಲ್ಲಿರುವ ಖಾದಿ ಫೆಡರೇಶನ್‌ದ ಆವರಣಕ್ಕೆ ಆಮಂತ್ರಿಸಿ ಧ್ವನಿಮುದ್ರಿಸಿಕೊಳ್ಳಲು ಸಹಕರಿಸಿದ ಶ್ರೀ ವಿ. ಜಿ. ಅಂಗಡಿ. ಫೆಡರೇಶನ್ನಿನ ಆಂದಿನ ಚೇರಮನ್ ಶ್ರೀ ದ್ಯಾಮಣ್ಣ ಮತ್ತಿಕೊಪ್ಪ ಅವರನ್ನು ಇಲ್ಲಿ ಸ್ಮರಿಸುತ್ತೇನೆ. ಕಿತ್ತೂರು ಚೆನ್ನಮ್ಮ ರೂಪಕ ರೂಪುಗೊಳ್ಳಲು ಶ್ರೀ ಜಿ. ಕೆ. ರವೀಂದ್ರಕುಮಾರ ಅವರ ಪ್ರೇರಣೆ ಕಾರಣ. ಅವರಿಗೆ ಸ್ಮರಣೆಗಳು. ವಸಂತ ಋತು ರೂಪಕ ನನ್ನ ಮೊದಲ ಪ್ರಯತ್ನ ಶ್ರೀಮತಿ ವಿಜಯಾ ಲಿಂಗಸೂರ ಅವರು ಈ ಕುರಿತು ಬರೆಯಲು ಕೇಳಿದಾಗ ನಿರಾಕರಿಸಿದ್ದೆ. ಕಾರಣ, ನಾನು ವಿದ್ಯಾರ್ಥಿನಿಯಾಗಿದ್ದಾಗ (೧೯೬೩-೬೪ರಲ್ಲಿ) 'ಋಷ್ಯಶೃಂಗ' ಎಂಬ ವಿಷಯದ ಮೇಲೆ ರೇಡಿಯೊ ನಾಟಕವೊಂದನ್ನು ಬರೆದು ಕಳಿಸಿದಾಗ ಆದರ ಸ್ವೀಕೃತಿಯ ಬಗೆಗೆ ತಿಳಿಯಲೇ ಇಲ್ಲ. ಆಂದಿನಿಂದ ನಾಟಕ ಬರೆಯುವ ಹವ್ಯಾಸಕ್ಕೆ ಕೈಹಾಕಲೇ ಇಲ್ಲ. ಬಹುಶಃ ನನಗೆ ಬರೆಯುವುದಕ್ಕಾಗುವುದಿಲ್ಲವೆಂಬ ಹಿಂಜರಿಕೆಯಿತ್ತು. ಶ್ರೀಮತಿ ವಿಜಯಾರ ಜೊತೆ ಚರ್ಚಿಸಿದಾಗ ನನ್ನ ಹಿಂಜರಿಕೆ ದೂರವಾಯಿತು. ಬರೆಯಲು ತೊಡಗಿದೆ. ಈ ವಿಷಯದಲ್ಲಿ ಮರಾಠಿ ಸಾಹಿತ್ಯದಿಂದ ಬಹಳಷ್ಟು ಪ್ರಯೋಜನವಾಗಿದೆ.

ಪ್ರಾಸಂಗಿಕವಾಗಿ ನನ್ನ ಕಾರ್ಯಗಳಲ್ಲಿ ಸಹಕರಿಸಿದ ಎಲ್ಲರನ್ನೂ ಸ್ಮರಿಸುತ್ತೇನೆ.

೨೩-೧-೧೯೯೭
ಸುಭಾಸಚಂದ್ರ ಬೋಸ ಜನ್ಮಶತಮಾನ ದಿನ

ಡಾ॥ ಆರ್. ಸರೋಜಿನಿ

ಪ್ರಕಾಶಕರ ನುಡಿ

ಕಳೆದ ಹದಿನೇಳು ವರ್ಷಗಳಿಂದ ನಗರದಲ್ಲಿ ಸಾಂಸ್ಕೃತಿಕ, ಸಾಮಾಜಿಕ ಮತ್ತು ಸಾಹಿತ್ಯಿಕ ಕಾರ್ಯಗಳನ್ನು ಜರುಗಿಸುತ್ತ ಬಂದ ಸಂಸ್ಥೆ ಸ್ಪಂದನ ಸಾಂಸ್ಕೃತಿಕ ಆಂದೋಲನ (ರಿ). ಇದರ ಅಂಗವೇ ವಿವೇಕ ಪ್ರಕಾಶನ. 'ಸರಂಗೇಳ್' ಪುಸ್ತಕವು ನಮ್ಮ ಪ್ರಕಾಶನದ ೨೧ನೆಯ ಕೃತಿ. ಲೇಖಕಿಯರಾದ ಡಾ॥ಆರ್. ಸರೋಜಿನಿ (ಚವಲಾರ) ಅವರು ಆನನ್ಯವಾದ ಸಾಮಾಜಿಕ ಕಳಕಳಿ. ವಿದ್ಯಾರ್ಥಿ ವೃಂದದ ಕಾಳಜಿ ಹೊಂದಿದವರು.

ನಮ್ಮ ಪ್ರಕಾಶನದ ಸಲಹಾ ಮಂಡಳಿಯ ಸದಸ್ಯರು ಎಂದಿನಂತೆ ಈ ಕೃತಿಯ ಪ್ರಕಟಣೆಯಲ್ಲಿ ಸಹಕಾರವನ್ನು ಇತ್ತಿದ್ದಾರೆ. ಈ ಕೃತಿಯನ್ನು ಪ್ರಕಟಿಸಲು ನೆರವಾದ ಎಲ್ಲರಿಗೂ ನಮ್ಮ ಪ್ರಕಾಶನ ಕೃತಜ್ಞವಾಗಿದೆ.

ಸಂಕಲ್ಪ
ಜಯಪ್ರಕಾಶನಗರ. ಹುಬ್ಬಳ್ಳಿ-೫೮೦ ೦೩೦

ಪ್ರಕಾಶಕರು
ವಿವೇಕ ಪ್ರಕಾಶನ

ಒಳಗು

ಸೇವಾದಳದ ಹಡ್ರ್ಕರರು ೧
ಕಿತ್ತೂರು ಚೆನ್ನಮ್ಮ ೧೫
ವಸಂತ ಋತು ೨೫
ಬಿಡುಗಡೆಗಾಗಿ ದುಡಿದವರು ೪೩

ಸೇವಾದಳದ ಡಾ. ಹಡ್ರ್ಕರರು

ಈ ಅಂತಿಮ ಹೋರಾಟದಲ್ಲಿ ಶಾಂತಿ, ಸತ್ಯ, ಅಹಿಂಸೆಗಳಿಗೆ ಅಂಟಿಕೊಳ್ಳುವಂಥ ಧೀರ ಸತ್ಯಾಗ್ರಹಿಗಳ ತಂಡಗಳನ್ನು ತರಬೇತು ಗೊಳಿಸುವುದಕ್ಕಾಗಿ ಸ್ವಯಂಸೇವಕರ ಶಿಬಿರಗಳನ್ನು ಹಿಂದುಸ್ತಾನಿ ಸೇವಾದಳವು ದೇಶದ ತುಂಬೆಲ್ಲ ಸಂಘಟಿಸುತ್ತಿತ್ತು. ಸೇವಾದಳದಲ್ಲಿ ತರಬೇತಿ ಹೊಂದಿದ ಸ್ವಯಂಸೇವಕರ ಘಟಕಗಳ ಅಧಿಕಾರಿಗಳು ದೇಶದ ತುಂಬೆಲ್ಲ ಪಸರಿಸಿಕೊಂಡಿದ್ದರು. ಸೇವಾದಳವು, ತರಬೇತಿ ಹೊಂದಿದ ಹದಿನೈದು ಸಾವಿರ ಸ್ವಯಂಸೇವಕರನ್ನು ಈ ಸತ್ಯಾಗ್ರಹ ಆಂದೋಲನಕ್ಕೆ ಅಣಿ ಮಾಡುವ ಗುರಿ ಇಟ್ಟುಕೊಂಡಿತ್ತು. ಸಂಯುಕ್ತ ಪ್ರಾಂತ, ಬಿಹಾರ, ಬಂಗಾಲ, ಮುಂಬೈ, ಆಂಧ್ರ, ದಿಲ್ಲಿ, ಕರ್ನಾಟಕ ಪ್ರಾಂತಗಳಿಂದ ಬೇರೆ ಭಾಗಗಳಲ್ಲಿಯೂ ತುಂಬುವಷ್ಟು ಸತ್ಯಾಗ್ರಹಿ ಸ್ವಯಂಸೇವಕರು ಮುಂದೆ ಬಂದಿದ್ದರು. ಈ ಧರ್ಮಯುದ್ಧದಲ್ಲಿ ಭಾಗವಹಿಸುವದಕ್ಕಾಗಿ ಸಹಸ್ರ ಸಂಖ್ಯೆಯಲ್ಲಿ ಭಾರತೀಯ ಮಹಿಳೆಯರೂ ಮುಂದೆ ಬಂದಿದ್ದರು. ಆರಂಭದಲ್ಲಿ, ಉಪ್ಪಿನ ಸತ್ಯಾಗ್ರಹವು ಸವಿನಯ ಕಾಯ್ದೆ ಭಂಗ ಚಳುವಳಿಯ ಒಂದು ಪ್ರತೀಕದಂತೆ ಇದ್ದು ಕ್ರಮೇಣ ವಿರಾಟ್ ಸ್ವರೂಪ ತಳೆಯತೊಡಗಿತ್ತು. ಹಿಂದುಸ್ತಾನೀ ಸೇವಾದಳದ ಸ್ವಯಂಸೇವಕರು ಸಂಚಾಲಕರ ಮಾರ್ಗದರ್ಶನದಲ್ಲಿ ಲಕ್ಷೋಪಲಕ್ಷ ಸಂಖ್ಯೆಯಲ್ಲಿ ಜನರು ಸತ್ಯಾಗ್ರಹ ಮಾಡಲು ಮುಂದೆ ಬಂದಿದ್ದರು.

ಗಂಡುಧ್ವನಿ: ಅಕ್ಕ ಇದು ಯಾರ ಭಾಷಣ? ಇತ್ತೀಚೆಗೆ ಎಲ್ಲೂ ಕೇಳಿದ್ದಾಂಗದ ಅಲ್ಲಕ.

ಅಕ್ಕ: ಚಂದ್ರು ನೀ ಕೇಳಿರೋ ಸಾಧ್ಯತಾನಕ ಇಲ್ಲ. ಇದು ರಾಷ್ಟ್ರನಾಯಕರಲ್ಲಿ ಒಬ್ಬರೆಂದು ಹೆಸರಾದ ಡಾ. ನಾ. ಸು. ಹಡ್ರ್ಕರರದ್ದು.

ಚಂದ್ರು: ಹೌದಕ ಆ ಮಹಾಯಾತ್ರಿಕನ ಮಂತ್ರಶಕ್ತಿ ಸೇವಾದಳದ ಸ್ಥಾಪನೆಗೂ, ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಲು ಸಹಕರಿಸಿತಲ್ಲ. ಅವರದು ಅದ್ಭುತವಾದ ಸಾಧನೆ ನೋಡು.

ಅಕ್ಕ : ಅಲ್ಲೀನ ಮತ್ತ. ಹುಬ್ಬಳ್ಳಿಯನ್ನ ದೇಶದ ನಕಾಶದಲ್ಲಿ ಗುರುತಿಸುವ್ಹಂಗ ಮಾಡಿದ ಶ್ರೇಯಸ್ಸು ಅವರಿಗೆ ಸಲ್ಲತದ.

ತಮ್ಮ : ಹಾಂ, ಹರ್ಡೀಕರರು ಹುಬ್ಬಳ್ಳಿಯವರs ?

ಅಕ್ಕ : ಹುಂ, ಅವರ ಜೀವನದ ಬಹುಭಾಗ ಹುಬ್ಬಳ್ಳಿಯ ಕಾರ್ಯಕ್ಷೇತ್ರದಲ್ಲಿ ಕಳದದ. ರತ್ನಾಗಿರಿ ಜಿಲ್ಲೆಯ ಚಿಪಳೂಣ ತಾಲೂಕಿನ ಹರ್ಡಿ ಮನೆತನದ ಸುಬ್ರಾಯ-ಯಮುನಾಬಾಯಿಯ ಏಳನೇ ಮಗನಾಗಿ ಅವರು ಹುಟ್ಟಿದರು, ಹೆಸರು ನಾರಾಯಣ ಅಂತಾ. ಸಾಮಾನ್ಯ ನೌಕರರಾಗಿದ್ದ ಅವರ ತಂದೆ ಹನ್ನೆರಡು ಮಕ್ಕಳನ್ನು ಬಿಟ್ಟು ಕಣ್ಣು ಮುಚ್ಚಿದರು. ಅವರ ಮನೆತನದಲ್ಲಿ ಬಡತನ, ಸಾಲುಸಾಲಾಗಿ ಅಂಟಿಕೊಂಡಿತ್ತು. ನಾರಾಯಣ ಇಬ್ಬರು ಅಣ್ಣಂದಿರನ್ನು ಮತ್ತು ನಂತರ ತಾಯಿಯನ್ನು ಕಳೆದುಕೊಂಡು ಬಾಲ್ಯದಲ್ಲಿಯೇ ದುಃಖದಿಂದ ಬಳಲಿದನು.

ಚಂದ್ರು : ಅವರದೊಂದು ಕರುಣಾಜನಕವಾದ ಕಥೆ ನೋಡು, ಚಿಕ್ಕಂದಿನಿಂದಲೆ ಇಂಥ ವ್ಯಥೆಯನ್ನು ಸಹಿಸಿ ಅವರು ಬೆಳೆದದ್ದಾದರು ಹೆಂಗ ಅಂತೀನಿ. ಹುಬ್ಬಳ್ಳಿಗೆ ಹೇಗೆ ಬಂದರು ?

ಅಕ್ಕ : ಸತ್ವಶಾಲಿಯಾದ ವ್ಯಕ್ತಿ ತನ್ನ ಪ್ರತಿಕೂಲದ ಪ್ರಸಂಗಗಳನ್ನೂ ತನಗ ಅನುಕೂಲವಾಗುವ ಹಾಗೆ ತಿರುಗಿಸಿಕೊಳ್ಳಲು ಶಕ್ತನಾಗುತ್ತಾನೆ. ನಾರಾಯಣ ಬಾಲ್ಯದೊಳಗ ತಾಯಿಯ ಸೋದರಿಯಾದ ಹುಬ್ಬಳ್ಳಿಯ ಶೇವಡೆಯವರ ಮನೆಗೆ ಬಂದು ಶಾಲಾಬಾಲಕನಾಗಿ ಮುಂದೆ ದೇಶಸೇವಕನಾಗಿ ಬೆಳೆದನು.

ಚಂದ್ರು : ಹುಬ್ಬಳ್ಳಿಯ ಪರಿಸರದಲ್ಲಿ ದೇಶಸೇವೆಯ ಕಳಕಳಿ ಆಗ ಹಬ್ಬಿತ್ತೇನು? ಜಾಗೃತಿ ಉಂಟಾಗಿತ್ತೇನು ?

ಅಕ್ಕ : ಹೌದು, ಕೇಸರಿ ಪತ್ರಿಕೆ ಓದುವವರಲ್ಲಿ ಶೇವಡೆಯವರೂ ಒಬ್ಬರು. ಲೋಕಮಾನ್ಯ ತಿಳಕರ ಪ್ರಖರ ವಿಚಾರಧಾರೆಯ ಸೆಳವಿಗೆ ಸಿಕ್ಕು ನಾರಾಯಣ ಅಪ್ರತಿಭನಾದನು, ಕಾರ್ಯತತ್ಪರನಾದನು. ತನ್ನ ಸಮವಯಸ್ಕರನ್ನು ಕೂಡಿಕೊಂಡು ''ಆರ್ಯಬಾಲಸಭಾ'' ಎಂಬ ಗುಂಪನ್ನು ಕಟ್ಟಿಕೊಂಡನು. ಅಂದು 'ಖಾದಿ' ಒಂದು ವ್ರತವಾಗಿತ್ತು. ಸ್ವಾವಲಂಬನೆಯ ಸೂತ್ರವಾಗಿತ್ತು. ದೇಶಕ್ಕೆ ಸ್ವಾತಂತ್ರ್ಯ ತಂದು ಕೊಡಲಿಕ್ಕೆ ಒಂದು ಸಾಧನೆಯಾಗಿತ್ತು. ಖಾಲಿ ಡಬ್ಬಿ

ಮೇಲೆ ನಿಂತಾಗ ಜನರಿಗೆ ಅವನು ಕಾಣುತ್ತಿದ್ದನು. ಹಾಗೆ ನಿಂತು ಗೆಳೆಯರೊಂದಿಗೆ ಕೂಗು ಹಾಕಿ ಜನರನ್ನು ಗುಂಪುಗೂಡಿಸಿ ತನ್ನದೇ ಆದ ಪಲ್ಲವಿಯನ್ನು ಆರಂಭಿಸುತ್ತಿದ್ದನು.

''ಮೇಹರಬಾನೀಸೇ ಅರ್ಜ ಸುನೊ ಯಹಿ! ಚೀಜ್ ದೇಶಕಾ ಲೋ, ಚೀಜ್ ದೇಶಕಾ ಲೀಕೇ, ಅಪನಾ ಅಚ್ಛಾ ತುಮ್ ಕರ ಲೋ.''

ಚಂದ್ರು : ಆಗ ಪೋಲಿಸರು ಸುಮ್ಮನೆ ಕುಳಿತಿರುತ್ತಿದ್ದರೇನು ? ದೇಶದ ಸ್ವಾತಂತ್ರ್ಯಕ್ಕಾಗಿ ಭಾಷಣ ಮಾಡುವವರನ್ನು ಹಿಡಿದು ಜೈಲಿಗೆ ಹಾಕುತ್ತಿದ್ದರಂತಲ್ಲ.

ಅಕ್ಕ : ಹದಿನಾಲ್ಕು, ಹದಿನೈದು ವರ್ಷದ ಬಾಲಕನಾಗಿದ್ದ ಅವನು ಬಹಳ ಚಾಣಾಕ್ಷನು. ಪೋಲಿಸರು ದೂರದಲ್ಲಿ ಕಾಣುವಷ್ಟರಲ್ಲಿ ಖಾಲಿ ಪೆಟ್ಟಿಗೆಯನ್ನು ಹೆಗಲ ಮೇಲಿಟ್ಟುಕೊಂಡು ಓಡಿ ಹೋಗುತ್ತಿದ್ದನು. ಮತ್ತೊಂದು ಓಣಿ, ಮತ್ತೊಂದು ಕೂಟಿನಲ್ಲಿ ನಿಂತು ಅದೇ ಭಾಷಣವನ್ನು ಆರಂಭಿಸುತ್ತಿದ್ದನು.

ಚಂದ್ರು : ತಾನು ಆಜನ್ಮ ಬ್ರಹ್ಮಚಾರಿಯಾಗಿರಬೇಕೆಂದು ನಿರ್ಧಾರ ಮಾಡಿದನು. ಜನಸೇವೆಗೆ ಮುಡುಪಾಗುವ ಪಣತೊಟ್ಟನು. ತಾನೊಬ್ಬ ವೈದ್ಯನಾಗಲು ಹಂಬಲಿಸಿ ಕಲ್ಕತ್ತೆಗೆ ಹೋದನು. ಕ್ರಾಂತಿಕಾರಿಯೆಂದು ಹೆಸರಾದ ಆರವಿಂದ ಘೋಷರು ಕಲ್ಕತ್ತೆಯಲ್ಲಿ ನ್ಯಾಶನಲ್ ಕೌನ್ಸಿಲ್ ಆಫ್ ಎಜ್ಯುಕೇಶನ್ ನಡೆಸುತ್ತಿದ್ದರು. ಆ ಸಂಸ್ಥೆಗೆ ಸೇರಿ ನಾರಾಯಣ ವೈದ್ಯನಾದನು. ವೈದ್ಯಕೀಯದಲ್ಲಿ ಹೆಚ್ಚಿನ ಅಭ್ಯಾಸ ಮಾಡಲು ಬಹಳಷ್ಟು ಕಷ್ಟಪಟ್ಟು ಅಮೇರಿಕೆಗೆ ಹೋದನು. ಆಗ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುವ ವಿಚಾರ ಅವರಿಂದ ದೂರವಾಗಿರಬೇಕಲ್ಲವೇ ?

ಅಕ್ಕ: ಅದನ್ನು ಬಿಟ್ಟಿದ್ದರಲ್ಲವೇ ದೂರವಾಗುವದು ? ಅವನ ಗುರಿ ಹಿಂದೆಯೇ ನಿರ್ಧಾರವಾಗಿತ್ತು. ಈ ಮೂಲಕ ಅದನ್ನು ನೇರವೇರಿಸುತ್ತಿದ್ದನು. ಅಮೇರಿಕೆಯೊಳಗೆ ತನ್ನ ಸಮವಯಸ್ಕರನ್ನು ಕೂಡಿಸಿ ಸಂಘ ಕಟ್ಟಿದನು. ಅದರ ಅಧ್ಯಕ್ಷನಾಗಿ ಚಿಕ್ಯಾಗೊ ನಗರದಲ್ಲಿ ಒಂದು ಸಭೆ ಕರೆದನು. 'ಪಂಜಾಬ ಕೇಸರಿ' ಯೆಂದು ಪ್ರಸಿದ್ಧರಾಗಿದ್ದ ಲಾಲಾ ಲಜಪತರಾಯರನ್ನು ಭಾಷಣಕ್ಕೆ ಆಮಂತ್ರಿಸಿದನು. ದೇಶಭಕ್ತಿಯ ಜ್ವಲಂತ ಮೂರ್ತಿಯಾದ ಅವರು ನಾರಾಯಣನ ದೇಶಭಕ್ತಿ, ಕರ್ತೃತ್ವ ಶಕ್ತಿಯನ್ನು ಮೆಚ್ಚಿಕೊಂಡರು. ಅವರ

ಆಜ್ಞಾನುವರ್ತಿಯಾಗಿ ಚಾಕಚಾಕ್ಯತೆಯಿಂದ ಅಮೇರಿಕೆಯಲ್ಲಿ ಭಾರತೀಯರ ಸಂಘಟನೆಯನ್ನು ಬೆಳೆಸಿದನು. ಲಾಲಾಜಿಯವರಿಗೆ ನಾಲ್ವತ್ತು ತಿಂಗಳ ಕಾಲ ನಾರಾಯಣನು ಆಪ್ತ ಕಾರ್ಯದರ್ಶಿಯಾಗಿದ್ದನು. ದೇಶಾಭಿಮಾನ ಕೆರಳುವಂಥ ಲೇಖನ ಬರೆಯಲು, ಭಾಷಣ ಮಾಡಲು ಪಳಗಿದನು. ಲಾಲಾಜಿಯವರ ಅಪ್ಪಣೆಯ ಮೇರೆಗೆ ಮರಳಿ ತಾಯ್ನಾಡಿಗೆ ಬಂದನು.

(ಹಾಡು) : ಭಾರತೀಯರೆಲ್ಲ ನಾವು ಒಂದುಗೂಡಿ ಹಾಡುವಾ, ಹಾಡುವಾ,
ಒಂದೇ ಭಾವ ಒಂದೇ ಜೀವವಾಗಿ ಭೇದ ದೂಡುವಾ, ದೂಡುವಾ,
ಭಾರತೀಯರೆಲ್ಲ ॥

ಅಕ್ಕ : ಇಂಗ್ಲೀಷರನ್ನು ವಿರೋಧಿಸಿ 'ನಾಗಪುರ ಧ್ವಜ ಸತ್ಯಾಗ್ರಹ'ವೆಂದು ನಮ್ಮ ದೇಶದ ಹೋರಾಟದ ಇತಿಹಾಸದೊಳಗೆ ಘಟನೆಯೊಂದು ಘಟಿಸಿತು. ಅದರ ನೇತೃತ್ವ ವಹಿಸಿದವರು ಜಮುನಾಲಾಲ ಬಜಾಜರು. ಅವರು ಬಂಧನಕ್ಕೊಳಗಾಗುವ ಮೊದಲು ಅದರ ನೇತೃತ್ವವನ್ನು ನಾರಾಯಣನಿಗೆ ವಹಿಸಿದರು. ಅಮೇರಿಕೆಯಿಂದ ಮರಳಿ ಬಂದ ನಾರಾಯಣರು ಈಗ ಡಾ. ಹರ್ಡೀಕರ ಆಗಿದ್ದರು.

ಚಂದ್ರು: ಅಂದರೆ ಡಾಕ್ಟರ ಹರ್ಡೀಕರರು ದೇಶದ ಅಗ್ರಮಾನ್ಯರ ಗಮನವನ್ನು ಸೆಳೆದಿದ್ದರು ಎಂದಾಯಿತು.

ಅಕ್ಕ: ಹೌದು. ಆದರೆ ಅಲ್ಲಿಯೂ ಅವರಿಗೆ ಕಟುವಾದ ಅನುಭವವೇ ಕಾದಿತ್ತು. ಭಾವಾವೇಶಕ್ಕೊಳಗಾಗಿ ಸತ್ಯಾಗ್ರಹ ಮಾಡಿದ ಜನ ಛಲದಿಂದ ಗುರಿಗಂಟಿಕೊಂಡು ನಿಲ್ಲಲಿಲ್ಲ. ಅವರು ಶಿಸ್ತು ಸಂಯಮ ಕಾರುಣ್ಯಗಳನ್ನೆದುರಿಸುವ ಶಕ್ತಿ, ಶಿಕ್ಷೆಯನ್ನು ಸಹಿಸುವ ಸಾಮರ್ಥ್ಯದ ಕೊರತೆ ಅವರಲ್ಲಿ ಎದ್ದು ಕಾಣಿಸಿತು. ಅದನ್ನು ನಿವಾರಿಸಿ ಕಷ್ಟ ಸಹಿಷ್ಣುಗಳನ್ನು ತಯಾರಿಸಲು ನಿರ್ಧಾರ ಮಾಡಿದರು. ಆಗ ಸಿದ್ಧವಾದ ಸ್ವಯಂಸೇವಕರ ತಂಡವೇ 'ಹಿಂದೂಸ್ಥಾನೀ ಸೇವಾದಳ'.

(ಹಾಡು) : ಕ್ರಾಂತಿದೇವಿಯ ಅರ್ಚನಾ ಅದಕ್ಕೆ ರಕ್ತ ತರ್ಪಣ
ದೈತ್ಯರನ್ನು ಮೆಟ್ಟಲೆಂದು ದಿವ್ಯದೇಹ ಧಾರಣ ಧರ್ಮದ ಸಂಸ್ಥಾಪನ
ಇದು ಹರ್ಷದ ಘೋಷಣ ಜಯಘೋಷದ ಗರ್ಜನಾ.

೧೯೨೩ರಲ್ಲಿ ಸೇವಾದಳ ಸ್ಥಾಪನೆಗೊಂಡ ಮೇಲೆ ಅದರ ಮೊದಲ ಅಧ್ಯಕ್ಷರು ಪಂಡಿತ ಜವಾಹರಲಾಲ ನೆಹರೂ. ನಂತರ ಸುಭಾಸಚಂದ್ರ ಬೋಸ್, ಮೌಲಾನಾ ಶೌಕತಅಲಿ ಮುಂತಾದವರು. ೧೯೩೧ರ ಉಪ್ಪಿನ ಸತ್ಯಾಗ್ರಹ, ೧೯೨೨ರ ಕರನಿರಾಕರಣೆಯ ಚಳುವಳಿಗಳ ಯಶಸ್ಸಿಗೆ ಸೇವಾದಲವೇ ಕಾರಣ.

ಚಂದ್ರು : ಆಗ ಅದೇನೇನು ನಡೆಯಿತು ಸ್ವಲ್ಪ ವಿವರಿಸಿ ಹೇಳು.

ಅಕ್ಕ : ಅಂದು ಉಪ್ಪಿನ ಸತ್ಯಾಗ್ರಹದ ಕರೆ ದೇಶದ ಮೂಲೆ ಮೂಲೆಗೆ ತಲುಪಿದಾಗ ಕರ್ನಾಟಕದ ನಾಯಕರೂ ಜಾಗೃತರಾದರು. ಉಪ್ಪಿನ ಸತ್ಯಾಗ್ರಹದ ಪಥಕಗಳನ್ನು ಸಿದ್ಧಪಡಿಸಿದರು. ಯಾವ ಯಾವ ಜಿಲ್ಲೆಯಿಂದ, ತಾಲ್ಲೂಕುಗಳಿಂದ ಎಷ್ಟೆಷ್ಟು ಜನ ಬರಬೇಕೆಂದು ಮೊದಲೇ ನಿರ್ಣಯಿಸಿಲ್ಪಟ್ಟಿತ್ತು. ಎಲ್ಲರೂ ಬಂದು ಹುಬ್ಬಳ್ಳಿಯಲ್ಲಿ ಒಟ್ಟುಗೂಡುವದಿತ್ತು.

ಚಂದ್ರು : ಆಗ ಯಾರ್ಯಾರು ಬಂದಿದ್ದರು ?

ಅಕ್ಕ : ಬೆಳಗಾವಿ ಜಿಲ್ಲೆಯಿಂದ ಏಳು ಪಥಕಗಳು ಬಂದಿದ್ದವು. ಗಂಗಾಧರರಾವ ದೇಶಪಾಂಡೆಯವರ ಕುಮರಿ ಆಶ್ರಮದಿಂದ ಅಣ್ಣೂ ಗುರೂಜಿ, ಗಂಗಪ್ಪ ಯುವಕನಮರಡಿ, ಪುಂಡಲೀಕ ಕಾತಕಡೆ, ರಾಮಚಂದ್ರ ವಡವಿ ಬಂದಿದ್ದರು. ಬೈಲಹೊಂಗಲದ ಹೊಸೂರಿನಿಂದ ಒಂದು ಪಥಕ ಬಂದಿತ್ತು. ಹಾವೇರಿಯಿಂದ ಹಳ್ಳಿಕೇರಿ ಗುದ್ಲೆಪ್ಪ, ಕೆ. ಎಫ್. ಪಾಟೀಲ, ಮೈಲಾರ ಮಹದೇವರು ಸೇವಾದಲದ ವಾನರ ಸೇನೆಯ ಕಾರ್ಯಕರ್ತರನ್ನು ಕರೆದುಕೊಂಡು ಬಂದಿದ್ದರು. ಇಲ್ಲಿಂದ ಎಲ್ಲರೂ ಒಟ್ಟಿಗೆ ಹೋಗುವದಿತ್ತು.

ಘೋಷಣೆ : ಬೋಲೋ ಭಾರತ ಮಾತಾಕೀ ಜೈ, ಭಾರತ ಮಾತಾ ಕೀ?

ಒಬ್ಬರು : ಬ್ರಿಟೀಷರೆ ನಿಮಗೆ ಕೊನೆಯ ಎಚ್ಚರಿಕೆ

ಗುಂಪು : ಭಾರತ ಬಿಟ್ಟು ತೊಲಗಿರಿ, ತೊಲಗಿರಿ

ಒಬ್ಬರು : ವಿದೇಶಿ ಬಟ್ಟೆಗೆ

ಗುಂಪು : ಬಹಿಷ್ಕಾರ, ಬಹಿಷ್ಕಾರ

ಒಬ್ಬರು : ಇಂಗ್ಲೀಷರ ಆಡಳಿತಕ್ಕೆ

ಗುಂಪು : ಧಿಕ್ಕಾರ ಧಿಕ್ಕಾರ

ಒಬ್ಬ : ನಿಸರ್ಗದತ್ತ ಉಪ್ಪಿನ ಮೇಲೆ ಕರ ಹೇರಿದ ದುಷ್ಟ ಸರಕಾರಕ್ಕೆ ಧಿಕ್ಕಾರ. ನಮ್ಮ ದೇಶದ ಗಡಿಗಳೇ ಆದ ಸಮುದ್ರದ ನೀರಿನಿಂದ ನಾವೇ ಸ್ವತಃ ಉಪ್ಪು ತಯಾರಿಸುತ್ತೇವೆ, ಬಳಸುತ್ತೇವೆ. ಅದರ ಮೇಲೆ ನಿರ್ಬಂಧ ಹೇರಿರುವ ದುಷ್ಟ ಸರಕಾರಕ್ಕೆ ಧಿಕ್ಕಾರ. ಇಂತಹ ನಿರ್ಬಂಧವನ್ನು ಮುರಿದೊಗೆಯಲು ಕಂಕಣಬದ್ಧರಾಗಿದ್ದೇವೆ. ಇಂದು ಉಪ್ಪಿನ ಸತ್ಯಾಗ್ರಹದಲ್ಲಿ ತೊಡಗಿದ್ದೇವೆ. ನಮ್ಮ ದೇಶದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡುವ ಘಟನೆಗಳಲ್ಲಿ ಇದೂ ಒಂದು. ತಾವೆಲ್ಲರೂ ಉತ್ಸಾಹದಿಂದ ಕರ್ನಾಟಕದ ಮೂಲೆ ಮೂಲೆಗಳಿಂದ ಭಾಗವಹಿಸಲು ಬಂದದ್ದು ನೋಡಿದರೆ ನಮ್ಮ ಸತ್ಯಾಗ್ರಹ ಯಶಸ್ವಿ ಆಗುವದರಲ್ಲಿ ಯಾವ ಸಂದೇಹವೂ ಇಲ್ಲ. ತಾವೆಲ್ಲರೂ ತಮ್ಮಿಂದಾದ ಸೇವೆಯನ್ನು ಸಲ್ಲಿಸಬೇಕೆಂದು ವಿನಂತಿಸುತ್ತೇವೆ.

ಇನ್ನೊಬ್ಬ : ಬೋಲೋ ಭಾರತ ಮಾತಾಕೀ

ಗುಂಪು : ಜೈ

ಒಬ್ಬ : ಬ್ರಿಟಿಷರೇ ನಿಮಗೆ ಕೊನೆಯ ಎಚ್ಚರಿಕೆ

ಗುಂಪು : ತೊಲಗಿರಿ, ತೊಲಗಿರಿ ಭಾರತ ಬಿಟ್ಟು ತೊಲಗಿರಿ

ಒಬ್ಬ : ಬ್ರಿಟಿಷರಿಗೇ

ಗುಂಪು : ಧಿಕ್ಕಾರ, ಧಿಕ್ಕಾರ

ಗುಂಪಿನಲ್ಲಿಯ ಒಂದು ಹೆಣ್ಣಿನ ಧ್ವನಿ : ಕೇಳಿದೇನ ಸಾವಕ್ಕಾ, ಏನ ಹೇಳಾಕ ಹತ್ಯಾರ ನೋಡ ಅಲ್ಲೇ. ಮನಿ ಮಾರು ಬಿಟ್ಟು ಧೈರ್ಯದಿಂದ ಹೊರಟಿರುವರು. ಅಂಕೋಲಾಕ್ಕೆ ಹೋಗಿ ಉಪ್ಪು ಮಾಡ್ತಾರಂತ ನೋಡ.

ಸಾವಕ್ಕಾ : ಅಲ್ಲ, ಅದ್ಹ್ಯಾಂಗ ಮಾಡ್ತಿದ್ದಾರೂ ಅಂತೇನs ಚನ್ನಕ್ಕ.

ಚನ್ನಕ್ಕ : ಅದ್ಹ್ಯಾಂಗ ಮಾಡ್ತಾರ ಅನ್ನೋದಕ್ಕಿಂತ ಮಾಡೇ ತೀರ್ತೀನಿ ಅಂತಾರಲ್ಲ!

ಆಗ ಈ ಫಿರಂಗ್ಯಾರ ಸುಮ್ಮನ ಇದ್ದಾರೇನು ? ಎಲ್ಲಾರನ್ನು ಹಿಡಿದು ಜೈಲಿಗೆ ಹಾಕ್ತಾರವಾ. ಮತ್ತು ಜೈಲ್ನಾಗ ಸುಮ್ಮನ ಬಿಡ್ತಾರೇನು, ಸಿಕ್ಹಾಂಗ ಹೊಡಿತಾರಂತವ್ವ, ಅಲ್ಲ ಅದಕ್ಕೆಲ್ಲ ಗಟ್ಟಾಗೇ ಹೊಂಟಾರವರು. ಸುರಳಿತ ಹೋಗಿ ಕೆಲಸ ಮಾಡಲಿ, ಅವರ ಕೆಲಸ ಕೈಗೂಡಲಿ ಅಂತ ಬೇಡ್ಕೊಂತೇನ ದೇವರಿಗೆ. ಗೊಡಚಿ ಈರಣ್ಣಗ ದಿಂಡರಕಿ ಹಾಕ್ತೇನಿ ಅಂತ ಹರಕೀ ಹೊತ್ತೇನ ನೋಡಕ ಸಾವಕ್ಕ.

ಸಾವಕ್ಕ : ಆಲ್ಲಿ ನೋಡಕ ಚನ್ನಕ್ಕ, ಅವರು ಮುನವಳ್ಳಿ ವಕೀಲರಂತ. ಆ ಡಾಕ್ಟರ ಬಾಜುಕ್ಕ ಹೊಂಟಾರಲ್ಲ ಅವರಕ ನೋಡು, ನೋಡು ನೋಡಲ್ಲೇ. ಎಲ್ಲಾರೂ ಡಬ್ಬ್ಯಾಗ ರೊಕ್ಕ ಹಾಕಾಕ ಹತ್ಯಾರ ಅಲ್ಲಕಯವ್ವ! ನಾನು ರೊಕ್ಕಾನಕ ತರಲಿಲ್ಲ ನೋಡು. ಅಲ್ಲೇ ಅಡಕಲ್ ಗಡಗ್ಯಾಗ ಇಟ್ಟ ಬಂದೇನವ್ವ.

ಚನ್ನಕ್ಕ : ನಾನೂ ಹಂಗಕ ಬಂದೇನಿ ನೋಡಕ ಸಾವಕ್ಕ. ನನಗಾರ ಏನು ಗೊತ್ತಿತ್ತು ರೊಕ್ಕ ಬೇಕಾಗ್ತಾವಂತಾ. ರೊಕ್ಕ ಇಲ್ಲದಿದ್ದರ ಏನಾತ, ಪಂಚಮಿಗೆ ಹೋದಾಗ ನಮ್ಮ ಅಪ್ಪ ಮಾಡ್ಸಿದ್ದು ಬೋರಮಾಳ ಸರ ಕೊಟ್ಟಾನಲ್ಲ ಅದನ್ನಕ ಹಾಕ್ತೇನಿ.

ಸಾವಕ್ಕ : ಅಷ್ಟ ಮಾಡ ನೀನು. ನನಗೂ ಪಂಚಮ್ಯಾಗ ನಮ್ಮಣ್ಣ ಉಂಗರ ಮಾಡಿಸಿ ಕೊಟ್ಟಿದ್ದ. ಅದನ್ನಕ ಜೋಳಿಗೀಗೆ ಹಾಕತೇನಿ. ಇದಕ್ಕಿಂತ ಹೆಚ್ಚಿನ ಸಂತೋಷದ ಹೊತ್ತು ಮತ್ತ ಬಂದೀತೋ ಬರಾಕಿಲ್ಲೋ ಯಾರ ಕಂಡವರು! ನಡಿ, ನಡಿ ಮುಂದ ಹೋಗೂಣಂತ. ಈ ಗದ್ದಲದಾಗ ಡಾಕ್ಟರು, ವಕೀಲರು ಮುಂದ ಹೋದಗೀದಾರ ಮತ್ತ.

ಗುಂಪು ಘೋಷಣೆ : ಬ್ರಿಟೀಷರೇ ಭಾರತ ಬಿಟ್ಟು ತೊಲಗಿರಿ, ತೊಲಗಿರಿ. ಭಾರತ ಮಾತಾಕೀ ಜೈ, ಭಾರತ ಮಾತಾಕೀ ಜೈ, ವಿದೇಶಿ ಬಟ್ಟೆಗೆ ಬಹಿಷ್ಕಾರ, ಬ್ರಿಟೀಷರ ಆಡಳಿತಕ್ಕೆ ಧಿಕ್ಕಾರ.

ಚಂದ್ರು : ಈ ಉಪ್ಪಿನ ಸತ್ಯಾಗ್ರಹದಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸಿದ ಎಂಬತ್ತು ವರ್ಷದ ಜೋಗಿ ಬೀರಣ್ಣ ನಾಯಕ ಅವರು ಆಗಿನ ಹಾಡನ್ನು ನೆನಪಿಸಿಕೊಳ್ಳುತ್ತಾರೆ:

ಜೋಗಿಯವರು:

(ಹಾಡು) *ಭಾರತ ಮಾತೆಯ ಮಕ್ಕಳು ನಾವು । ಸೇವಾದಳದ ಸೈನಿಕರು ॥*
ಭೇದಭಾವವು ನಮ್ಮಲ್ಲಿಲ್ಲ । ಜಾತಿಭೇದವು ಸನಿಹದೊಳಿಲ್ಲ ।
ಎರಡು ತನವು ಕನಸಿನೊಳಿಲ್ಲ । ವೈರಿತನವು ನೆನಪಿನೊಳಿಲ್ಲ ॥
ಆತ್ಮ ತೇಜವೇ ನಮ್ಮಯ ಶಕ್ತಿ । ಸ್ವಾರ್ಥತ್ಯಾಗವೆ ನಮ್ಮಯ ಯುಕ್ತಿ ॥
ಮೇಲಪ್ಪಣೆಯೇ ನಮ್ಮಯ ಕತ್ತಿ । ಇದರಿಂ ನಿಶ್ಚಯ ಭಾರತ ಮುಕ್ತಿ ॥
ಭಾರತ ಮಾತೆಯ ಮಕ್ಕಳು ನಾವು । ಸೇವಾದಳದ ಸೈನಿಕರು ॥

ನಾನು ಹಡ್ರ್ಕರರನ್ನು ಕಂಡದ್ದು ೧೯೨೪ರಲ್ಲಿ. ಆಗ ಬೆಳಗಾವಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ಸಿನ ಮಹಾಸಭೆ ಸೇರಿತ್ತು. ಗಾಂಧೀಜಿಯವರದೇ ಅಧ್ಯಕ್ಷತೆ. ಆ ಮಹಾಸಭೆಯಲ್ಲಿ ನಡೆದ ಒಂದು ಘಟನೆಯನ್ನು ನೆನಪಿಸಿಕೊಂಡರೆ ಈಗಲೂ ಹಡ್ರ್ಕರರ ಸೇವಾಭಾವನೆಯ ಬಗೆಗೆ ರೋಮಾಂಚನವಾಗುತ್ತದೆ. ಆ ಕಾಲಕ್ಕೆ ಭಂಗಿ ಕೆಲಸ ಮಾಡಲು ಯಾರೂ ಸಿದ್ಧರಾಗಿರಲಿಲ್ಲ. ಆದರೆ ಅದು ಅಸಂಖ್ಯ ಪ್ರತಿನಿಧಿಗಳು ಸೇರಿದ ಸಭೆ. ಅದನ್ನು ಸ್ವಚ್ಛ ಮಾಡದೆ ಗತಿ ಇಲ್ಲ. ಇಂಥ ಹೊತ್ತಿನಲ್ಲಿ ಹಡ್ರ್ಕರರು ಎಲ್ಲ ಸ್ವಯಂಸೇವಕರನ್ನು ಸೇರಿಸಿ ಒಂದು ಘಂಟೆ ಕಾಲ ಭಾಷಣ ಮಾಡಿ, ಸೇವೆಯ ಮಹತ್ವವು ಎಲ್ಲರಿಗೂ ಮನವರಿಕೆಯಾಗುವಂತೆ ಮಾಡಿ, ಸ್ವಯಂಸೇವಕರು ಸ್ವಪ್ರೇರಣೆಯಿಂದ ಭಂಗಿ ಕೆಲಸ ಮಾಡುವಂತೆ ಪ್ರೇರೇಪಿಸಿದರು. ಈ ಘಟನೆಯನ್ನು ಕಂಡು ನಾನು ಆಗಲೇ ರಾಷ್ಟ್ರಸೇವೆಗೆ ಪ್ರೇರಣೆಗೊಂಡಿದ್ದು. ಆಮೇಲೆ ೧೯೩೦ರಲ್ಲಿ ಅಂಕೋಲೆಯಲ್ಲಿ ನಡೆದ ಉಪ್ಪಿನ ಸತ್ಯಾಗ್ರಹದ ಕಾಲಕ್ಕೆ ಡಾಕ್ಟರರು ಸೇವಾದಳ ಸಹಿತ ತಳವೂರಿ ಶಿಸ್ತು ಸಂಯಮ ಕಾಪಾಡಿ ಆ ಚಳುವಳಿಯನ್ನು ಯಶಸ್ವಿಗೊಳಿಸಿದರು. ಅವರು ಮಾಡಿದ ಪ್ರೇರಣೆ ಬಹುಮಟ್ಟಿಗೆ ನನ್ನ ಮೇಲೆ ಉಂಟಾಯಿತು. ಆಗ ನಾನು ಸತ್ಯಾಗ್ರಹದಲ್ಲಿ ಭಾಗವಹಿಸಿ ಜೈಲು ಶಿಕ್ಷೆ ಅನುಭವಿಸಿದೆನು. ಮೊದಲನೇ ಸಾರಿ ವಾಸ್ಕೋದಲ್ಲಿ ನಡೆದ ಸೇವಾದಳದ ತರಬೇತಿ ಕಾಲಕ್ಕೆ ನಾನು ಸೇರಿದ್ದೆ. ಅಲ್ಲಿಂದ ಬಾಗಲಕೋಟ ಶಿಬಿರದಲ್ಲಿ ಹೆಚ್ಚಿನ ತರಬೇತಿಗೆ ಹೋಗಿದ್ದೆ. ಈ ಅವಧಿಯಲ್ಲಿ ಅವರ ಸಂಪರ್ಕ ಹೆಚ್ಚಾಗಿ ನನಗೆ ಬಂತು. ಮತ್ತು ನನ್ನ ಅವರ ಸಹವಾಸದ ಫಲ, ಅವರ ಮಾತಿನ ಪರಿಣಾಮ, ಅವರ ನಡತೆಯ ಪರಿಣಾಮದಿಂದಾಗಿ ಹೆಚ್ಚು ಹೆಚ್ಚಾಗಿ ರಾಷ್ಟ್ರ ಸೇವೆಯಲ್ಲಿ ತೊಡಗಿಸಿಕೊಳ್ಳಲು ಕಾರಣವಾಯಿತು ಎಂದು ಹೇಳಬಹುದು. ಹಡ್ರ್ಕರ ಇಡೀ ಭಾರತದಲ್ಲಿ ಸೇವಾದಳದ ಶಾಖೆಗಳನ್ನು ತೆಗೆದರು. ಇಡೀ

ದೇಶದ ನನ್ನಂಥ ಸಾವಿರಾರು ತರುಣರನ್ನು ತರುಣಿಯರನ್ನು ದೇಶಸೇವೆಗೆ ಅಣಿಗೊಳಿಸಿದ್ದು ಅವರ ಮಹತ್ಸಾಧನೆಯಾಗಿದೆ. ಇಂದಿನ ಈ ರಾಜಕೀಯ ಸಾಮಾಜಿಕ ಅವ್ಯವಸ್ಥೆಯ ಕಾಲದಲ್ಲಿ ಸೇವಾದಳದ ಸೇವಾಕಾರ್ಯವು ಬಹಳ ಅಗತ್ಯವಾಗಿದೆಯಂದು ನನ್ನ ಅಭಿಪ್ರಾಯವಾಗಿದೆ.

ಅಕ್ಕ : ಮೊದಲು ಡಾಕ್ಟರ್‌ರ ಅನುಯಾಯಿಯಾಗಿ ನಂತರ ಅವರ ಆಪ್ತ ಸಹಾಯಕರಾಗಿ ಸೇವೆ ಸಲ್ಲಿಸಿದ ಶ್ರೀ ಶಂಕರಭಟ್ಟ ಮನಗೋಳಿಯವರು ಇಂದಿಗೂ ಆ ನೆನಪುಗಳನ್ನು ಮೆಲುಕು ಹಾಕುತ್ತಾರೆ.

ಶಂಕರಭಟ್ಟ ಮನಗೋಳಿ : ನನ್ನದು ಹಡ್ಗೇಕರರದ್ದು ಸಂಬಂಧ ಬಂದದ್ದು ೧೯೨೪-೨೫ರೊಳಗೆ. ಸರಸ್ವತಿ ವಿದ್ಯಾರಣ್ಯ ವಾಚನಾಲಯದೊಳಗೆ ಒಂದು ಸಭಾ ಇತ್ತು. ವಾಳ್ವೇಕರ ವಿಠ್ಠಲರಾಯರು ಅಧ್ಯಕ್ಷರಿದ್ದರು. ಸಭಾದೊಳಗ ನನ್ನ ಭಾಷಣ ಮುಗಿದ ಕೂಡಲೆ ಡಾ. ಹಡ್ಗೇಕರರು ನನಗೆ ಚೀಟಿ ಕಳಿಸಿದರು. "Young man, I want your service. You come to me." ಮರುದಿವಸ ಅವರ ಮನಿಗೆ ಹೋದೆ. ನನ್ನ ಅವರು ತಗೊಂಡ್ರು. ಅವರಲ್ಲೆ ನಾ ಇದ್ದೆ. ಎಂದ ಅವರ ಮನಿ ಒಳಗ ಪ್ರವೇಶ ಮಾಡಿದೆ ಅಂದಿನಿಂದ ೧೯೭೫ ಅಗಸ್ಟ ೨೭ ರ ತನಕ ಅಂದರೆ ಅವರು ನಿಧನ ಹೊಂದುವ ತನಕ ನಾ ಅವರಲ್ಲಿದ್ದೆ. ನಂತರ ನಾ ತಿರುಗಿ ಹುಬ್ಬಳ್ಳಿಗೆ ಬಂದೆ. ಅವರಲ್ಲಿದ್ದ ಒಂದು ದೊಡ್ಡ ಗುಣ ಅಂತಂದ್ರ ಎಷ್ಟೇ ಸಣ್ಣ ಮನುಷ್ಯರೆ ಇರಲಿ ಅವರನ್ನು ದೊಡ್ಡವರನ್ನಾಗಿ ಮಾಡಬೇಕು ಎಂಬುದು. ನಾವೆಲ್ಲ ನಿರ್ಜೀವ ವಸ್ತು ಇದ್ದ ಹಾಂಗ ಇದ್ದಿವಿ. ನಮಗೆಲ್ಲರಿಗು ಒಂದು ತಾಯಿತ ಕಟ್ಟಿ ದೊಡ್ಡ ಮನುಷ್ಯರನ್ನಾಗಿ ಮಾಡಿದರು. ತಾವು ಎಲ್ಲಿ ಹೋಗುತ್ತಿದ್ದರೋ ಅಲ್ಲಿ ನನ್ನನ್ನ ಕರೆದುಕೊಂಡು ಹೋಗುತ್ತಿದ್ದರು. ಹಿಂದುಸ್ತಾನದ ತುಂಬ ನನ್ನನ್ನು ತಿರುಗಾಡಿಸಿದರು. ಅವರ ಮೇಲೆ ''ಮಾಗಿದರು ಮೊಗ್ಗು'' ಎಂಬ ಪುಸ್ತಕ ಬರೆದೆನು, ೫೦೦ ಪುಟದ್ದು. ಅದರಲ್ಲಿ ಅವರ ವಂಶಾವಳಿಯಿಂದ ಅವರ ಜೀವ ಇರೋತನಕ ಏನೇನು ಘಟನೆಗಳಾದವು ಅದೆಲ್ಲವನ್ನು ಆ ಪುಸ್ತಕದಲ್ಲಿ ಹೇಳಿದೆನು. ಆ ಪುಸ್ತಕಕ್ಕೆ ಕನ್ನಡ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಿಕ್ಕಿತು.

ಚಂದ್ರು : ಇಂಥ ಕೆಲಸಗಳನ್ನು ಮಾಡಲು ಡಾಕ್ಟರರಿಗೆ ಧನಸಹಾಯ ಹೇಗೆ ಒದಗುತ್ತಿತ್ತೋ ? ಈಗಿನಂತೆ ಆಗ ಸರಕಾರದ ಧನಸಹಾಯ ಇರಲಿಲ್ಲ.

ಅಕ್ಕ : ಪರಕೀಯರಿಂದಾದ ಸರಕಾರವನ್ನು ಆವಲಂಬಿಸದೆ ಸ್ವತಂತ್ರವಾಗಿ ಜನರು ತಾವೇ ಮುಂದಾಗಿ ಕೆಲಸಾ ಮಾಡುತ್ತಿದ್ದ ಕಾಲವದು. ಸಂಘಟನೆಗಳಲ್ಲಿ ಸೇವೆ ಮಾಡುವವರು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಸೇವಾ ಮಾಡುತ್ತಿದ್ದರು. ಹಿಂಗಾಗಿ ಹಣದ ಆವಶ್ಯಕತೆ ಗೌಣವಾಗುತ್ತಿತ್ತು ನೋಡು. ಪ್ರವಾಸ, ಊಟ, ಉಪಚಾರಗಳನ್ನು ಕೇಳದೆ ತಿಳಿದು ಒದಗಿಸುವ ಸಹೃದಯರು ಆಗ ಸಾಕಷ್ಟು ಜನರಿದ್ದರು. ಅನಿವಾರ್ಯ ಪ್ರಸಂಗದೊಳಗ ಹಣದ ವಿಷಯಕ್ಕೆ ಹೇಗೆ ವ್ಯವಹರಿಸಿದ್ದರು ಎಂದು ಶ್ರೀ ಬಿಂದುರಾವ ಆನಂದರಾವ ದೇಸಾಯಿ ಹೇಳ್ತಾರ.

ಬಿ.ಎ. ದೇಸಾಯಿ : ಹಡ್ರ್ಯೆಕರ ಡಾಕ್ಟರರದ್ದು ೧೯೩೯ರಿಂದ ನನಗೆ ವಿಶೇಷ ಪರಿಚಯವಾಯ್ತು. ಅವರಿಗೆ ದೊಡ್ಡವ ಸಣ್ಣವ ಅಂತ ಭೇದ ಇರಲಿಲ್ಲ. ನಾನು ಆಗ ಕಾರು, ಟ್ರಕ್ ಡೀಲ ಮಾಡಾಂವ. ಡಾ. ಹಲಸೀಕರ ಅಂಬವರು ಆಯುರ್ವೇದ ಕಾಲೇಜ ತೆರೆದಿದ್ದರು, ರೊಕ್ಕದ ಅಡಚಣೆ ಬಂದು ಬಂದ ಮಾಡಿದ್ದರು. ಡಾಕ್ಟರ್ ನನ್ನ ಕಡೆಗೆ ಬಂದ್ರು. ''ಬಿಂದುರಾಯ್ರು, ಅದು ಹುಬ್ಬಳ್ಳಿಯೊಳಗೆ ಮುಖ್ಯವಾದ ಕಾಲೇಜು, ಬಂದಾಗಬಾರದು'' ಅಂದ್ರು ''ನನಗೇನ್ರಿ ವ್ಯಾಪಾರಸ್ಥ ನನ್ನಿಂದೇನಾಗ್ತದ'' ಅಂದೆ. ''ಹಂಗ್ಹ್ಯೇಂಗಾಗ್ತದಕ ಮನಸ್ಸಿದ್ದರ ಆಗೇ ಆಗ್ತದ'' ಅಂದ್ರು. ''ನೀವಕ ಹೇಳ್ರಿ, ನೀವು ಹೇಳಿದ ಕೆಲಸ ಮಾಡ್ತೇವಿ'' ಅಂದೆ. ಆಮೇಲೆ ಡಾ. ಸೊಂಟಕ್ಕೆ, ಡಾ. ರಾಯಬಾಗಕರ ಹೀಗೆ ಮೂರ್ನಾಲ್ಕು ಜನರನ್ನು ಶೇವಡೆಯವರ ಮುಂದಾಳತ್ವದಲ್ಲಿ ಕೂಡಿಸಿ ಲಾಭ-ಲುಕ್ಸಾನ ಆಗದಂತೆ ಕಾಲೇಜಿನ ಆಡಳಿತ ಸಾಗಿಸಲು ತಿಳಿಸಿದರು. ಸಣ್ಣ ಡಾಕ್ಟರರಿಗೆ ೨೫-೩೦ ರೂಪಾಯಿ, ಪ್ರಿನ್ಸಿಪಾಲರಿಗೆ ೧೫೦ ರೂ. ಸಂಬಳ ಕೊಟ್ಟು ಕಾಲೇಜು ಮುಂದುವರೆಯುವಂತೆ ಮಾಡಿದರು. ಇವತ್ತಿಗೆ ಅವರ ಪ್ರಭಾವದಿಂದ ಎರಡು ಮೂರು ಕೋಟಿ ರೂಪಾಯಿ ಆಸ್ತಿ ಆಗೇದ. ಆಯುರ್ವೇದ ಕಾಲೇಜು. ಒಂದು ವಿಚಿತ್ರ ಅಂದರೆ ಅವರು ರೊಕ್ಕ ಎಂದೂ ಮುಟ್ಟಲಿಲ್ಲ. ಕಡೆಗೆ ಘಟಪ್ರಭಾದಲ್ಲಿ ಮಾಡಿದ ಆಸ್ಪತ್ರೆ, ಅವರ ಅದ್ಭುತ ಕೆಲಸ. ಇಂಥ ವ್ಯಕ್ತಿ ಸಿಗೋದು ಅಂದರ ಅಪರೂಪ. ಖರೇ ಗಾಂಧಿವಾದೀ, ಖರೇ ಸನ್ಯಾಸಿ ಶರೀರ.

ಚಂದ್ರು : ಹಡ್ರ್ಯೆಕರರು ಇಷ್ಟೇ ಆಲ್ಲದೆ ಇನ್ನಿತರ ಬೇರೆ ಕಾರ್ಯಗಳನ್ನು ಮಾಡಿರಬೇಕು ಅದನ್ನಷ್ಟು ಹೇಳು.

ಆಕ್ಕ : ಸಾಮಾಜಿಕ ಜೀವನದೊಳಗ ಸುವ್ಯವಸ್ಥೆಗಾಗಿ ಅವರು ಮಾಡದ ಕೆಲಸಾನ ಇಲ್ಲ ಅಂತ ಹೇಳಬಹುದು. ಅವರು Self Made Man. ಎಷ್ಟೋ ಅಗ್ನಿ ದಿವ್ಯಗಳಿಗೆ ತಮ್ಮನ್ನ ತಾವೇ ಒಡ್ಡಿಕೊಂಡವರು. ಸಂಘಟನೆ, ಸುವ್ಯವಸ್ಥೆಗಳನ್ನು ಬಿಟ್ಟು ಬೇರೆ ಕಡೆಗೆ ಗಮನ ಕೊಡುವವರೆ ಅಲ್ಲ. ತಮ್ಮಿಂದ ಒದಗಬಹುದಾದ ಸೇವೆಯನ್ನು ಕೊಡಲಿಕ್ಕೆ ಸದಾ ಸಿದ್ಧರು, ಸಹೃದಯರು. ಅವರನ್ನು ಪ್ರತ್ಯಕ್ಷ ಕಂಡಿರುವ ಗಂಗೂಬಾಯಿ ಹಾನಗಲ್ ಅವರು :

ಗಂಗೂಬಾಯಿ ಹಾನಗಲ್ : ನಾನು ಮೊದಲ ಸಲ ಡಾ. ಹರ್ಡೀಕರರನ್ನ ನೋಡಿದ್ದು ೧೯೨೪ನೇ ಇಸ್ವಿಯಲ್ಲಿ. ಕಾಂಗ್ರೆಸ್ ಅಧಿವೇಶನ ಬೆಳಗಾವಿಯಲ್ಲಿತ್ತು. ಆವಾಗ ನನ್ನನ್ನು ಸ್ವಾಗತ ಗೀತೆ ಹಾಡಲಿಕ್ಕೆ ಕರಕೊಂಡು ಹೋಗಿದ್ದರು. ಸ್ವಾಗತ ಗೀತ ಹಾಡಿ ಆದ ಮೇಲೆ, ಎಷ್ಟೋ ದಿವಸದ ಮೇಲೆ ಮತ್ತ ಡಾಕ್ಟರರು ಹುಬ್ಬಳ್ಳಿಗೆ ಬಂದರು. ಮುಂದ ನಾನ ದೊಡ್ಡಾಕಿ ಆದ ಮೇಲೆ ಅವರ ಸಂಪರ್ಕ ಬಂತು. ಇಷ್ಟs ಅಲ್ಲ. ಆರೋಗ್ಯಧಾಮ ಘಟಪ್ರಭಾದಲ್ಲಿ ಶುರು ಆದ ನಂತರ ಅಲ್ಲಿ ಯಾವುದೇ ಫಂಕ್ಷನ್ ಆಗಲಿ ನಾನು 'ಜನಗಣಮನ' ಇಂಥಾವೆಲ್ಲ ಹಾಡಬೇಕಂತ ಇಚ್ಛಾ ಅವರದು. ಹರ್ಡೀಕರರು ''ಹಿಂಗ ಮಾಡಬೇಕು'' ಅಂದರೆ ''ಇಲ್ಲಾ'' ಅನ್ನೂ ಧೈರ್ಯಾನs ಆಗ್ತಿದ್ದಿಲ್ಲ ಯಾರಿಗೂ. ಅವರು ಹೇಳಿದ ಹಾಂಗ ಮಾಡಬೇಕು ಅನ್ನೂ ಇಚ್ಛಾನs ಆಗ್ತಿತ್ತು. ಒಲ್ಲೆ ಅನ್ನಿಸುತ್ತಿದ್ದಿಲ್ಲ ನನಗ. ಕಾಂಗ್ರೆಸ ಅಧಿವೇಶನದಾಗ ಹಾಡಿದ್ದ ಹಾಡು ನನಗ ಒಂದೇ ಲೈನ ನೆನಪು ಅದ

(ಹಾಡು) *ಸ್ವಾಗತವು ಸ್ವಾಗತವು ಸಕಲ ಜನ ಸಂಕುಲಕೆ,*
ಸ್ವಾಗತವು ಸ್ವಾಗತವು.''

ಒಮ್ಮೆ ನಾನು ನನ್ನ ಮಗಳು ದಿಲ್ಲಿಗೆ ಪ್ರೋಗ್ರಾಮ ಇತ್ತಂತ ಹೊರಟಿದ್ವಿ.. ಹೊರಟ ಹೊತ್ತಿ ನೊಳಗ ಘಟಪ್ರಭಾಕ್ಕ ಗಾಡಿ ನಿಂತ ಬಿಡ್ತು. ಮುಂದ ನಾವು ಮಹಾಲಕ್ಷ್ಮಿ ರೈಲು ಹಿಡಿಬೇಕು. ಯಾಕಂದ್ರ ಮುಂದೆ ಡಿರೇಲ ಆಗಿದ್ದ ಗಾಡಿ ಇನ್ನು ಎರಡು ಮೂರು ತಾಸಿನ ತನಕ ಹೋಗೋದು ಸಾಧ್ಯವಿದ್ದಿದ್ದಿಲ್ಲ. ಆವಾಗ ಮುಂದ ಗತಿ ನಮ್ಮದು ? ಮಹಾಲಕ್ಷ್ಮಿ ಹಿಡೀದಿದ್ರ ದಿಲ್ಲಿ ಮುಟ್ಟೊಹಂಗಿಲ್ಲ. ಹ್ಯಾಂಗ ಮಾಡೋಣ ? ಅಂದುಕೊಳ್ಳುತ್ತಿದ್ದೆ. ನನ್ನ ಸಂಗಡ ಹ. ರಾ. ಪುರೋಹಿತರು ಇದ್ದರು. ಬೆಳಗಾವಿಯವರು ಒಬ್ಬರು ಇದ್ದರು.

ಹ್ಯಾಂಗಮಾಡೋಣ, ಡಾಕ್ಟರಿಗೆ ಫೋನರ ಮಾಡೋಣ ಅಂದು ನಾನು ಸ್ಟೇಶನ್ ಮೇಲಿಂದಲೇ ಫೋನ ಮಾಡಿದೆ. ''ಡಾಕ್ಟರ ಗಾಡಿ ನಿಂತ ಬಿಟ್ಟದ. ನಾವು ದಿಲ್ಲಿಗೆ ಹೊರಟಿದ್ವಿ'' ಅನ್ನೊದರೊಳಗ ''ಮುಂಚೆ ಊಟಕ್ಕ ಬರ್ರಿ ಗಾಡಿ ಕಳಸ್ತೀನಿ'' ಅಂದರು. ಊಟಕ್ಕ ಬರ್ರಿ ಅಂತಾರ, ಮುಂದ ಮಿರಜ ಮುಟ್ಟೂದ ಹ್ಯಾಂಗಂತ ನನಗ ಕಾಳಜಿ. ''ಇಲ್ಲಿ ನಮ್ಮ ಊಟ ಆಯ್ತು ಇನ್ನಿಬ್ಬರು ನಮ್ಮ ಜೊತೆಗೆ ಇದ್ದಾರ'' ಅಂದೆ. ಡಾಕ್ಟರರು ''ಅವರೂ ಇದ್ದಾರಕ ಎಲ್ಲಾರು ಬರ್ರಿ'' ಅಂದು ಸ್ಟೇಶನ್ನಕ್ಕ ಗಾಡಿ ಕೊಟ್ಟ ಕಳಿಸಿದರು. ಅಲ್ಲಿ ಊಟ ಮಾಡಿಸಿದರು. ಅಲ್ಲಿಂದ ಮಿರಜಗೆ ಫೋನ ಮಾಡಿದ್ರು ''ಸ್ವಲ್ಪ ಐದ ಹತ್ತ ಮಿನಿಟ ಗಾಡಿ ಲೇಟ ಮಾಡ್ರಿ, ನನ್ನ ಮಂದಿ ಬರ್ತಾರ ಅಂತ''. ಹೀಂಗ ನಮಗ ಭಾಳ ಅನುಕೂಲ ಮಾಡಿಕೊಟ್ರು. ಅವರನ್ನು ಎಷ್ಟ ನೆನಸಿದ್ರು ನನಗೆ ಕಡಿಮೆ ಅನಿಸುವದು.

ಅಕ್ಕ: ಹಿರಿಯರು ಎಲ್ಲಿ ಇದ್ದರೂ ಹಿರಿತನವನ್ನೇ ತೋರ್ತಾರ. ಹರ್ಡೀಕರರನ್ನು ಭಾರತ ಸರಕಾರ - ಗುರುತಿಸಿ ಪದ್ಮವಿಭೂಷಣ ಪದವಿಯನ್ನು ಕೊಟ್ಟಿತು. ರಾಜ್ಯ ಸಭೆಗೆ ಆರಿಸಿ ಬಂದರು. ಆಗ ಘಟಪ್ರಭಾ ಸ್ಟೇಶನದಲ್ಲಿದ್ದ ರಾಮಸ್ವಾಮಿ ಹೇಳ್ತಾರ ಅವರ ಅನುಭವ ಕೇಳು.

ರಾಮಸ್ವಾಮಿ : ನಾನು ೧೯೫೮ರಿಂದ ಐದಾರು ವರ್ಷ ಘಟಪ್ರಭಾದೊಳಗ ರೇಲ್ವೆ ಸ್ಟೇಶನ ಮಾಸ್ತರ ಕೆಲಸ ಮಾಡ್ತಿದ್ದೆ. ಆಗ ಅಲ್ಲಿ ಕರ್ನಾಟಕ ಆರೋಗ್ಯಧಾಮದಲ್ಲಿ ಇರುತ್ತಿದ್ದ ಡಾ. ಹರ್ಡೀಕರರ ಸಂಪರ್ಕ ಬಂದಿತ್ತು. ಮೊದಲು ಔಪಚಾರಿಕವಾಗಿದ್ದ ಸಂಪರ್ಕ ಬಹುಬೇಗನೇ ಆತ್ಮೀಯ ಸಂಪರ್ಕವಾಗಿ ಬೆಳೆಯಿತು. ಇಷ್ಟೊಂದು ನಿಖರವಾಗುತ್ತೆ ಅಂತ ನನಗೂ ಕಲ್ಪನೆ ಬರಲಿಲ್ಲ. ಅವರು ನನಗೆ ಏಕವಚನದಲ್ಲಿ ಕರೆಯಲು ಶುರು ಮಾಡಿದರು. ಅದಕ್ಕೆ ನಾನು ಅವರನ್ನು 'ಅಜ್ಜ' ಎಂದು ಸಂಬೋಧಿಸುತ್ತಿದ್ದೆ. ನಾನು ಘಟಪ್ರಭಾಕ್ಕೆ ಬಂದು ಅಧಿಕಾರ ವಹಿಸಿಕೊಂಡ ದಿನವೇ ಅವರನ್ನು ಭೇಟಿಯಾಗುವ ಸಂದರ್ಭ ಬಂತು. ಅವರು ಅಂದೇ ಪಾರ್ಲಿಮೆಂಟ ಸೆಶನ್‌ಗೆ ದಿಲ್ಲಿಗೆ ಹೋಗುವವರಿದ್ದರು. ಅವರು ನೇರವಾಗಿ ಬಂದು ನನ್ನ ಕಚೇರಿಯ ಎದುರಿಗೆ ನಿಂತುಕೊಂಡು "May I come in station master" ಎಂದು ವಿನಯದಿಂದ ಕೇಳಿದಾಗ ನಾನು ಸ್ವಲ್ಪ ಹೊತ್ತು ಗಾಬರಿಗೊಂಡು ತಡವರಿಸಿದೆ. ಎದ್ದು ಅವರನ್ನು ಸ್ವಾಗತಿಸಿ "Please come inside, you are most

welcome" ಎಂದು ಕೂಡಲು ನನ್ನ ಆಸನವನ್ನು ತೋರಿಸಿದೆ. ಅವರು ''ಬೇಡ ಅದು ಸ್ಟೇಶನ್ ಮಾಸ್ಟರ ಕುರ್ಚಿ. ಬೇರೆ ಯಾರೂ ಅದರ ಮೇಲೆ ಕೂಡಬಾರದು'' ಎಂದು ಹೇಳಿ ಬಾಜು ಇದ್ದ ಬೇರೆ ಕುರ್ಚಿ ಮೇಲೆ ಕುಳಿತರು. ಶಿಸ್ತು, ಸಂಸ್ಕೃತಿ, ನಮ್ರತೆ ಇವುಗಳಿಗೆ ಅವರು ಎಷ್ಟೊಂದು ಬೆಲೆ ಕೊಡುವವರೆಂಬುದನ್ನು ಅವರ ಈ ನಡತೆಯೇ ತೋರಿಸಿ ಕೊಡುತ್ತದೆ.

ಅಕ್ಕ : ಅಂದು ಸೇವಾದಲದಲ್ಲಿ ಸ್ವಯಂಸೇವಕರಾದ ಶ್ರೀ ಸುರೇಂದ್ರ ದಾನಿಯವರು ಹೇಳ್ತಿರ ಕೇಳು.

ಸುರೇಂದ್ರ ದಾನಿ : ಡಾ. ಹರ್ಡೀಕರರ ಜೀವನವನ್ನು ಮತ್ತು ಸಾಧನೆಯನ್ನು ಸೂಕ್ಷ್ಮವಾಗಿ ನೋಡಿದಾಗ ನನಗೇನನಸ್ತದ ಅಂದ್ರ ಅವರ ವ್ಯಕ್ತಿತ್ವ ಅನ್ನುವದು ಹಿಂದೂಸ್ತಾನೀ ಸೇವಾದಳದ ಸಾಧನೆಗಿಂತ ಹೆಚ್ಚು ಎತ್ತರವಾಗಿತ್ತು. ಅನೇಕರಿಗೆ ಅವರ ಜೀವನದ ವಿಷಯಕ್ಕೆ ಗೊತ್ತಿರದ ವಿಷಯ ಅಂದ್ರೆ ಅವರು ಒಬ್ಬ ಒಳ್ಳೆಯ ಪತ್ರಕರ್ತರಾಗಿದ್ದರು ಅನ್ನುವದು. ಅಮೇರಿಕದಲ್ಲಿದ್ದಾಗ ಅವರು ಲಾಲಾ ಲಜಪತರಾಯರ ಶಿಷ್ಯರಾಗಿ 'ಯಂಗ ಇಂಡಿಯಾ' ಎಂಬ ಪತ್ರಿಕೆ ನಡೆಸಿದ್ದು ಅವರಿಗೆ ಈ ಕ್ಷೇತ್ರದಲ್ಲಿ ತರಬೇತಿ ನೀಡಿತು ಅಂತ ಕಾಣಿಸುತ್ತದೆ. ಅದೇ ಅನುಭವದಿಂದ ಅವರು ಮುಂದೆ 'ವಾಲಂಟಿಯರ' ಎಂಬ ಪತ್ರಿಕೆ ನಡೆಸಿದರು. ಅವರು ಮತ್ತೆ 'ಹುಬ್ಬಳ್ಳಿ ಗೆರ್ಯುಟ್' ಎಂಬ ಪತ್ರಿಕೆ ಪ್ರಾರಂಭಿಸಿದರು. ಅದು ಹುಬ್ಬಳ್ಳಿಯ ಸಮಸ್ಯೆಗಳಿಗೆ ಮೀಸಲಾದ ಪತ್ರಿಕೆಯಾಗಿತ್ತು. ಹುಬ್ಬಳ್ಳಿ ನಗರ ಸುಧಾರಣೆಗೆ ಅವರು ಮಾಡಿದ ಸೇವೆ ಮಹತ್ವದ್ದು. ಸೇವಾದಲ ಸಂಘಟನೆ ವಿಸರ್ಜನೆ ಆದ ಮೇಲೆ ಅವರು ನಿಶ್ಚಿಂತರಾಗಿ ಆರಾಮ ಜೀವನ ನಡೆಸಬಹುದಾಗಿತ್ತು. ಆದರೆ ಅವರು ಅದನ್ನು ಬಯಸಲಿಲ್ಲ. ತಮ್ಮ ಹಿಂದಿನ ಕನಸು, ಬಾಲ್ಯದಿಂದಲೂ ಬೆಳೆಸಿಕೊಂಡು ಬಂದ ಧ್ಯೇಯ, ಬಡಜನರಿಗೆ ವೈದ್ಯಕೀಯ ಸೇವೆ ಸಲ್ಲಿಸಬೇಕೆಂಬುದು. ಅದನ್ನ ಕಾರ್ಯರೂಪಕ್ಕೆ ತರಲು ಟೊಂಕ ಕಟ್ಟಿದರು. ಘಟಪ್ರಭಾದಲ್ಲಿಯ ಕರ್ನಾಟಕ ಆರೋಗ್ಯಧಾಮ ಕೇವಲ ಒಂದು ಆಸ್ಪತ್ರೆಯಾಗಿ ಬೆಳೆಯಲಿಲ್ಲ. ಹರ್ಡೀಕರರು ಅದನ್ನು ಅಲ್ಲಿಯ ಪರಿಸರದ ಒಂದು ಭಾಗವನ್ನಾಗಿ ಬೆಳೆಸಿದರು. ದವಾಖಾನೆಗೆ ಬಂದ ರೋಗಿಗಳಿಗೆ ಮಾತ್ರ ಉಪಚಾರ ನೀಡುವ ಸಂಸ್ಥೆಯಾಗಿರದೆ ಸುತ್ತಮುತ್ತಲಿನ ಹಳ್ಳಿಗಳಿಗೆ ಹೋಗಿ ಅಲ್ಲಿಯ ಜನಕ್ಕೆ

ಅಗತ್ಯವಿರುವ ಸೇವೆ ಸಲ್ಲಿಸುವದು ಮಾತ್ರವಲ್ಲದೆ ಅವರಿಗೆ ಆರೋಗ್ಯ ಜೀವನದ ಬಗ್ಗೆ ತಿಳುವಳಿಕೆ ನೀಡುವ ಕಾರ್ಯಕ್ರಮವನ್ನು ಅದು ಹಾಕಿಕೊಂಡಿತು.

ಅಕ್ಕ : ಹುಬ್ಬಳ್ಳಿಯೊಳಗ ಭಗಿನೀ ಮಂಡಳ ಸ್ಥಾಪನೆಯಾಗಿದ್ದು ಅವರ ಪ್ರೇರಣೆಯಿಂದ. ಉಮಾಬಾಯಿ ಕುಂದಾಪುರ ಅವರು ಭಗಿನೀ ಮಂಡಳ ಕಟ್ಟಿದರು. ಅದೂ ಅಲ್ಲದೆ ಹರ್ಡೀಕರ ಅವರು 'Womens Hospital' ಅಭಿವೃದ್ಧಿಪಡಿಸಿದರು. ಆಮೇಲೆ ಬಾಲಕಿಯರಿಗಾಗಿ 'ಟಿಳಕ ಕನ್ಯಾ ಶಾಲೆ' ಯನ್ನೂ ಸ್ಥಾಪಿಸಿದರು. ಶಾಲೆಯ ಮಕ್ಕಳನ್ನು ಕಂಡರೆ ಅವರಿಗೆ ಬಹಳ ಪ್ರೀತಿ. ತಮ್ಮ ಮನೆಯಿಂದ ಬೀದಿಯಲ್ಲಿ ಹೋಗುವಾಗ ಮಕ್ಕಳ ಬೆನ್ನು ತಟ್ಟಿ ತಲೆ ಸವರಿ ಮುಂದೆ ಹೋಗುವದು ಅವರ ರೂಢಿ. ಕೈಯಲ್ಲಿ ಲಾಠೀ ಹಿಡಿದು ಅರೆ ತೋಳಿನ ಅಂಗಿ ಚಣ್ಣಗಳನ್ನ್ಹಾಕಿಕೊಂಡು ಮೂರುಸಾವಿರ ಮಠದ ಬಯಲಿನಲ್ಲಿ ಮಕ್ಕಳಿಗೆ ಅಂಗ ಸಾಧನೆ ಮಾಡಿಸುತ್ತಿದ್ದರು.

ಚಂದ್ರು : ಡಾಕ್ಟರರ 'ಹಿಂದುಸ್ತಾನಿ ಸೇವಾದಳ' ಮತ್ತು 'ಕರ್ನಾಟಕ ಆರೋಗ್ಯ ಧಾಮ' ನಿರಂತರವಾಗಿ ಅವರ ಹೆಸರನ್ನು ಉಳಿಸುವ ಶಿಶುಗಳಾದವು. ಮತ್ತೇನು ಮಾಡಿದರು ಸ್ವಲ್ಪ ಹೇಳು.

ಅಕ್ಕ : ಹುಬ್ಬಳ್ಳಿಯೊಳಗ ನಗರ ಸಭೆಯ ನೀತಿಯನ್ನು ಟೀಕಿಸಿ ಚುನಾಯಿತ ಮಂಡಳಿಯನ್ನು ರದ್ದುಪಡಿಸಲಿಕ್ಕೆ ಕಾರಣವಾದರು. ಭಾರತ ಮಿಲ್ಲಿನ ಕಾರ್ಮಿಕರ ಸಂಪಿನಿಂದ ನಿಂತು ಹೋಗಿದ್ದ ಮಿಲ್ಲನ್ನು ಉಳಿಸಿದರು. ಕಾರ್ಮಿಕರಲ್ಲಿ ಸಂಘಟನೆಯನ್ನು ವ್ಯವಸ್ಥಿತಗೊಳಿಸಿದರು. ಹೋಟೇಲ್ ಉದ್ದಿಮೆಯನ್ನು ಸಂಘಟಿಸಿ ಪ್ರೋತ್ಸಾಹಿಸಿದರು. ಮೊಟಾರ ಸಾರಿಗೆ ರಾಷ್ಟ್ರೀಕರಣ ಆಗುವ ಮೊದಲು ಖಾಸಗಿ ಮಾಲಿಕರ ಸಂಘ ಕಟ್ಟಿದರು. ಹೀಗೆ ಯಾವುದೇ ಉದ್ದಿಮೆಯ ಕ್ಷೇತ್ರ ಇರಲಿ ಅವರು ಶ್ರಮ ಪಟ್ಟು ವ್ಯವಸ್ಥೆಯನ್ನು ತರುತ್ತಿದ್ದರು. ಅದು ಬೇರೆ ಕಡೆಗೆ ಅನುಕರಣೀಯ ಆದರ್ಶವಾಗುತ್ತಿತ್ತು.

ಚಂದ್ರು : ಡಾ. ಹರ್ಡೀಕರರದು ನಿಜವಾದ ಮಹಾಯಾತ್ರೆ.

ಅಕ್ಕ : ಅಂದು ೧೯೭೫ ಅಗಸ್ಟ ೨೭ ಅವರ ಮಹಾಯಾತ್ರೆ ಮುಗಿಯಿತು. ಅವರ ಶಿಸ್ತು, ಸಂಯಮ, ಪರೋಪಕಾರ ಬುದ್ಧಿ, ದೇಶಾಭಿಮಾನ ಅನುಕರಣೀಯ. ಇಂದಿನ ಜಟಿಲ ಸಮಸ್ಯೆಗಳಿಗೆ ಅವರು ತೋರಿದ ಮಾರ್ಗದರ್ಶನ ಬಹುಪಾಲು ಉಪಯೋಗಕಾರಿ.

ಡಾ॥ ನಾ. ಸು. ಹರ್ಡೀಕರವರು ಪಂಡಿತ ಜವಾಹರಲಾಲ ನೆಹರು ಅವರೊಂದಿಗೆ.



ಕುದರೀಯನೇರಿದಳ ಬಿಚ್ಚತ್ತಿ ಬೀಸಿದಳ ಚೆನ್ನವ್ವ
ಉದರಿದ ರುಂಡ ಮುಂಡಗಳ ನಡುವ ರಣ। ಚಂಡಿ ಚೆನ್ನವ್ವಗ
ಆದರೀತ ನೆಲ ಮುಗಿಲ ಧೀರ ಕನ್ನಡತಿಗೆ.

ಕಿತ್ತೂರು ಚೆನ್ನಮ್ಮ

ಸಾಮೂಹಿಕ ಘೋಷಣೆ ''ಹರ ಹರ ಮಹಾದೇವ, ಹರ ಹರ ಮಹಾದೇವ, ಜೈ ಜೈ'' ಮಲ್ಲಸರ್ಜ ದೊರೆಗಳಿಗೆ ಜೈ, ಕಿತ್ತೂರ ನಾಡಿಗೆ ಜೈ

ಅಕ್ಕ :- ಕೊಂಬು ಕಹಳೆ, ನಗಾರಿ ನೌಬತ್ತುಗಳ ಧ್ವನಿ ದಶದಿಕ್ಕುಗಳಿಗೆ ಕೇಳಿಸುತ್ತಲಿದೆ. ಈ ಮಲ್ಲಸರ್ಜ ದೊರೆಗಳು ಕಿತ್ತೂರ ಸಿಂಹಾಸನವನ್ನೇರಿ ನಾಲವತ್ತಾರು ವರ್ಷಗಳಾದವು. ದೊರೆಗಳ ವಿಜಯೋತ್ಸವ ಐದು ಬಾರಿಗೆ ನೆರವೇರಿದೆ. ಸುತ್ತಮುತ್ತ ಯಾವ ಸಂಸ್ಥಾನದ ಅರಸರಿಗೂ ಪಾಳೆಗಾರರಿಗೂ ಇಲ್ಲದ ಸಂತೋಷ ಸಂಭ್ರಮ ಕಿತ್ತೂರಿನ ಪ್ರಜೆಗಳಿಗೆ ಲಭ್ಯ. ಬ್ರಿಟಿಷರಿಗೆ ದುಃಸ್ವಪ್ನವಾಗಿದ್ದ ಹೈದರಾಲಿ ೧೭೭೮ರಲ್ಲಿ ಕಿತ್ತೂರಿನ ಮೇಲೆ ದಾಳಿ ಮಾಡಿ ಸೋತದ್ದು ಮಲ್ಲಸರ್ಜ ದೊರೆಗಳ ಕತ್ತಿ ಕೈಚಳಕದಿಂದ. ಒಂದೇ ವರ್ಷದಲ್ಲಿ ಪರಶುರಾಮ ಭಾವು ಕೂಡಾ ಸೋಲಿನ ರುಚಿ ಕಂಡನು. ತಂದೆಯು ಸಾಧಿಸಲಾರದೆ ಹೋದದ್ದನ್ನು ಸಾಧಿಸುವದಕ್ಕಾಗಿ ಎಂಟು ವರ್ಷದ ನಂತರ ಟಿಪ್ಪು ಸುಲ್ತಾನ್ ಪ್ರಯತ್ನಿಸಿದನು. ಒಂದು ವರ್ಷದೊಳಗೆ ಹೈದರಾಬಾದ ನಿಜಾಮ ದಂಡೆತ್ತಿ ಬಂದನು. ಅದೇ ಸಂಧಿ ಸಾಧಿಸಿ ಬ್ರಿಟಿಷರು ದಾಳಿಮಾಡಿದರು. ಯಾರಿಗೂ ಕಿತ್ತೂರಿನ ದೊರೆ ಕೈವಶವಾಗಲಿಲ್ಲ. ಕೊನೆಗೆ ೧೮೦೦ರಲ್ಲಿ ಧೋಂಡಜಿ ವಾಘನು ಕಿತ್ತೂರಿನ ಮೇಲೆ ಕೈ ಎತ್ತಿದನು.

ಚಂದ್ರು : ಕಿತ್ತೂರಿನ ಪ್ರಾಕೃತಿಕ ಸಂಪತ್ತು, ನೈಸರ್ಗಿಕ ರಕ್ಷಣೆಗಳಿಂದ ಅದೊಂದು ಭದ್ರ ಕೋಟೆಯಾಗಿತ್ತು. ಪಶ್ಚಿಮಘಟ್ಟಗಳ ಬದಿಯಲ್ಲಿ ನೆಲೆಸಿದ ಈ ನಾಡಿಗೆ ಪರಕೀಯರು ಯಾರೇ ಬಂದರೂ ದಾರಿ ತಿಳಿಯದೆ ಕಂಗಾಲಾಗುತ್ತಿದ್ದರು.

ಕಿತ್ತೂರಿನ ಕೋಟೆಯ ಎದುರಿನ ಗಡಾದ ಮರಡಿಯ ಮೇಲೆ ಏರಿಸಿದ ಪತಾಕೆ ನರಗುಂದ ಕೋಟೆಯ ಕಾವಲುಗಾರನಿಗೆ ಕಾಣುತ್ತಿತ್ತಂತೆ. ಕೋಟೆಯ ಒಳಗಿನ ಗುಪ್ತದ್ವಾರ ಆ ಮರಡಿಯ ಹತ್ತಿರಕ್ಕೆ ಬಂದು ತಲುಪಿಸುತ್ತಿತ್ತು. ಆ ಎತ್ತರದ ಮರಡಿಯ ಕೆಳಗೆ ಕಲ್ಲುಮಠ, ಮಲ್ಲಸರ್ಜ ದೊರೆಯ ರಾಜಗುರುಗಳ ನಿವಾಸ. ದೊರೆಯ ಹಿರಿಯರ

ಸಮಾಧಿಗಳ ಆವಾಸ.

ಅಕ್ಕ: ಕಾಕತಿಯ ಧೂಳಪ್ಪಗೌಡರು ದಕ್ಷಿಣದ ಸಂಸ್ಥಾನಗಳ ನಡುವೆ ಒಕ್ಕಟ್ಟು ತರಲು ಯತ್ನಿಸಿದರು. ಶೌರ್ಯ-ಔದಾರ್ಯಗಳಿಗೆ ಹೆಸರು ಪಡೆದವರು. ಅವರ ಕಣ್ಮಣಿಯಂತಿದ್ದ ಕುವರಿ ಚನ್ನವ್ವ ನೋಡಲು ರೂಪು ಹೆಣ್ಣಾದಂತೆ, ಹೋರಾಡಲು ಗಂಡು ಗಜಭೀಮನಂತೆ. ಮಲ್ಲಸರ್ಜನ ಕೀರ್ತಿಗೆ ಕಳಶವಿಟ್ಟಂತೆ ದೊರೆಯ ಕೈಹಿಡಿದು ಕಿತ್ತೂರ ಅರಮನೆಗೆ ಕಾಲಿಟ್ಟಳು.

ಅರಮನೆಯ ವೈಭವ ಹೇಳತೀರದು. ನರಗುಂದ-ಕಲಘಟಗಿ, ಮುನವಳ್ಳಿ, ಗೋಕಾಕ, ಧಾರವಾಡದವರೆಗೆ, ಬೈಲಹೊಂಗಲದಿಂದ ಮುರಗೋಡ ಮೊದಲಾದ ೨೮೬ ದೊಡ್ಡೂರು ೭೨ ಸಣ್ಣ ಹಳ್ಳಿಗಳಿಂದ ಕೂಡಿದ ಸಂಸ್ಥಾನ. ವಾರ್ಷಿಕ ಆದಾಯ ಐದು ಲಕ್ಷ ರೂಪಾಯಿಗಳು. ಒಂದು ಸಾವಿರ ಕುದುರೆ ನಾಲ್ಕು ಸಾವಿರ ಕಾಲಾಳುಗಳ ಸೇನೆ ಅವರದು. ಅಂದ ಮೇಲೆ ಕೇಳುವದೇನು ಅರಮನೆಯ ವೈಭವ!

ಚಂದ್ರು: ಕೋಟೆಯ ಮಹಾದ್ವಾರ ದಾಟಿ ಹೊರಾಂಗಣ, ಅತ್ತಿತ್ತ ಸುತ್ತಲೂ ಕುದುರೆಯ ಲಾಯ. ಅದನ್ನು ದಾಟಿದಂತೆ ಅರಮನೆಯ ದ್ವಾರ. ದ್ವಾರದ ಎಡಬದಿಗೆ ದಿಡ್ಡಿಯ ಬಾಗಿಲು. ಅದನ್ನು ದಾಟಿದ ಕೂಡಲೇ ಎಡಗಡೆಗೆ ಸದರಕಟ್ಟೆ ಬಲಗಡೆಗೆ ಜಿನ್ನೆ ಕಟ್ಟೆ. ಸದರಕಟ್ಟೆಯ ಮೇಲೆ ಸುಖಾಸನಗಳು ಒಂದು ಬದಿಗೆ. ಇನ್ನೊಂದು ಬದಿಗೆ ಸರದಾರರು, ಅಧಿಕಾರಿಗಳು ಕೂಡಲು ದಿಂಬು ಲೋಡುಗಳು. ಇದು ನ್ಯಾಯ ವಿಚಾರಣೆಯ ಕಟ್ಟೆ. ಅದನ್ನು ಮುಟ್ಟಿ ''ಪ್ರಮಾಣ ಮಾಡಿ ನಿಜ ಹೇಳುತ್ತೇನೆ'' ಎಂದು ಅಪರಾಧಿಯಾಗಲೀ ಫೀರ್ಯಾದಿಯಾಗಲೀ ನಿಜವನ್ನೇ ಹೇಳಬೇಕಾಗುತ್ತಿತ್ತು.

ಅಕ್ಕ: ಸದರಕಟ್ಟೆ ದಾಟಿದರೆ ಮತ್ತೊಂದು ಅಂಗಳ. ಅದಕ್ಕೆ ಹೊಂದಿದ್ದು ದೊಡ್ಡ ಪಡಸಾಲೆ. ಪಡಸಾಲೆಯ ಅಂಕಣಗಂಬಗಳು ಗಜಗಾತ್ರ, ಗೋಣೆತ್ತಿ ಹಿಂದೆ ಬಾಗಿಸಿ ನೋಡಬೇಕು. ಆ ಕಂಬಗಳ ಸುಳುವು ಮನಾಪಹಾರಿ.

ಅರಮನೆಯ ಗೋಡೆಗಳು ಬಣ್ಣಬಣ್ಣದ ಸುಳಿವು-ಚಿತ್ರಗಳಿಂದ ಅಲಂಕೃತ. ಅರಮನೆಗೂ ಮಲ್ಲಸರ್ಜ ದೊರೆಗಳಿಗೂ ಒಡತಿಯಾಗಿ ಹಿರಿಯ ರಾಣಿ ರುದ್ರಮ್ಮ ಮಾಸ್ತಮರಡಿಯ ಗೌಡರ ಮಗಳು. ತನ್ನ ದೊರೆಯು ಪ್ರೀತಿಸಿದ ಚೆನ್ನವ್ವನನ್ನು ಪ್ರೀತಿಯಿಂದ ಮನೆತುಂಬಿಸಿ ಕೊಂಡಳು.

ರಣಧೀರನಾದ ದೊರೆಗೆ ತಕ್ಕ ವೀರಶ್ರೀಯೇ ಒಲಿದು ಬಂದಂತೆ ಚೆನ್ನವ್ವ ದೊರೆಗೆ ಚೆನ್ನರಸಿಯಾದಳು.

ಚಂದ್ರು : ಕಿತ್ತೂರಿನ ಸಮೃದ್ಧಿ ಎಲ್ಲರ ಕಣ್ಣು ಕುಕ್ಕುವಂತಿತ್ತು. ಆದಿಲ್‌ಶಾಹಿಗಳು, ಪೇಶ್ವೆಯವರು ನಂತರ ಇಂಗ್ಲೀಷರು ತಮ್ಮ ಸ್ವಾಧೀನಪಡಿಸಿಕೊಳ್ಳುವ ಹವಣಿಕೆಯಲ್ಲಿದ್ದರು.

ದೊರೆಗಳಿಗೆ ಕರಣೇಷು ಮಂತ್ರಿಯಾಗಿ, ಯುದ್ಧದಲ್ಲಿ ಸೇನಾಪತಿಯಾಗಿ ಚೆನ್ನವ್ವ ಬೆಂಗಾವಲಾಗಿದ್ದಳು. ಸತಿ-ಪತಿಗಳೊಂದಾದ ರಾಜ್ಯಾಡಳಿತದಿಂದ ಯಾರಿಗೂ ಮಿಸುಕುವದಾಗುತ್ತಿರಲಿಲ್ಲ. ನಾಡಿನ ಕೀರ್ತಿ ದಶದಿಕ್ಕುಗಳಿಗೆ ಪಸರಿಸಿತ್ತು.

ಹಿರಿಯ ರಾಣಿ ರುದ್ರವ್ವನವರಿಗೆ ಹಿಗ್ಗು ಹೊಳೆಯಾಗಿ ಹರಿದಿತ್ತು. ಶಿವಲಿಂಗ ರುದ್ರಸರ್ಜ ಮಗ ಯುವರಾಜ. ಕೀರ್ತಿಗೆ ತವರಾದ ತಂಗಿ, ಮನದರಸ ಮಲ್ಲಸರ್ಜ ದೊರೆ.

ಅಕ್ಕ : ಮುಗಿಲೆತ್ತರಕ್ಕೇರಿದ ದೊರೆ ಮಲ್ಲಸರ್ಜರು

ಸುತ್ತರದ ನಾಡಿಗೆ ಸರತ್ಯಾದ ಚೆನ್ನವ್ವ ಕೀರುತಿಯ
ಬುತ್ತಿಯ ಕಟ್ಟಿದ ಶೂರತನಕ ಪತಿ। ರಾಯನೆಂದು
ಮತ್ತ ಹಾಡಿ ಹರಸಿದಳ ರುದ್ರವ್ವ

ಚೆನ್ನವ್ವ ರಾಣಿಗೆ ಪ್ರೀತಿಯ ಪೂರದಲ್ಲಿ ಮಿಂದಂತೆ ಜೀವನ ಸುಭಗವಾಗಿತ್ತು. ಹೊರಗಿನವರ ದಾಳಿಗೆ ಎಂದೂ ಮಣಿದವರಲ್ಲ. ಮಲ್ಲಸರ್ಜ ದೊರೆಗಳು ಎಂದೂ ಅವರ ಮಾತು ಅಲ್ಲಗಳೆದವರಲ್ಲ.

(ವಾದ್ಯಧ್ವನಿ)

ಮಲ್ಲಸರ್ಜ ದೊರೆಗಳು : ಚೆನ್ನರಸಿಯವರಿಗೆ ಈಗ ಸಮಾಧಾನವಾಯಿತಲ್ಲವೆ? ತಾವು ದಿನವೂ ಆಕಾಶ, ನಕ್ಷತ್ರಗಳನ್ನು ನೋಡ ಬಹುದಲ್ಲವೇ ಈ ಕೊಳವೆಯಿಂದ.

ಚೆನ್ನರಸಿ : ಹೌದು ಪ್ರಭುಗಳೇ ನಕ್ಷತ್ರಗಳಿಂದ ತುಂಬಿದ ಆಕಾಶ, ಬೆಳದಿಂಗಳು ತುಂಬಿ ಹೊರಚೆಲ್ಲುವ ಚಂದ್ರ, ಅದರಲ್ಲೂ ಧ್ರುವನಕ್ಷತ್ರ ಇಲ್ಲಿಂದಲೇ ನೋಡುವುದು ಎಷ್ಟು ಆನಂದ!

ರುದ್ರವ್ವ : ಅಷ್ಟೆ ಅಲ್ಲ, ಅದು ನಮ್ಮ ಗುರಿಯನ್ನೇ ನೆನಪಿಸುವಂತಿದೆ. ನಮ್ಮ ನಾಡಿನ ಕೀರ್ತಿ ಧ್ವತಾರೆಯಂತೆ ಚಿರವಾಗಬೇಕು.

ದೊರೆ : ಶಿವಲಿಂಗರುದ್ರಸರ್ಜರಿಗೆ ತರಬೇತಿ ಕೊಡುತ್ತಿರುವವರು ಚೆನ್ನರಸಿಯರಲ್ಲವೇ? ಯುವರಾಜರು ತಮ್ಮ ಬಯಕೆ ನೆರವೇರಿಸುತ್ತಾರೆ.

ಚನ್ನರಸಿ : ಬಾಜೀರಾವ್ ಪೇಶ್ವೆಯವರು ನಮ್ಮಿಂದ ನಜರಾನಾ ಪಡೆದರೂ ವಿಶ್ವಾಸವಿಡಲಿಲ್ಲ. ಅತ್ತ ಆಂಗ್ರೇಜಿಗಳಿಗೆ ಕುಮ್ಮಕ್ಕು ಕೊಡುತ್ತಿದ್ದಾರೆ. ಪೇಶ್ವೆಯವರು ವೆಲ್ಲೆಸ್ಲಿಗೆ ಪತ್ರ ಬರೆದು ನಮ್ಮ ರಾಜ್ಯ ಕಸಿದುಕೊಳ್ಳುವ ಸಲಹೆ ಮಾಡಿದ್ದಾರಂತೆ, ಆವರು ಹಾಗೆ ಮಾಡಲಾರರು.

ದೊರೆ : ಚನ್ನಾಜಿ ತಾವು ರಾಜ್ಯ ಸೂತ್ರ ತಿಳಿದವರು. ಕಿತ್ತೂರಿನ ಜನರ ಶೌರ್ಯಗುಣ ಸ್ವಭಾವ ತಿಳಿದು ನಮ್ಮ ಜನಬಲವನ್ನೆದುರಿಸುವ ಧೈರ್ಯ ಮಾಡಲಾರನು. ಪಶ್ಚಿಮ ಘಟ್ಟಗಳ ದುರ್ಗಮದಾರಿ ನಮ್ಮ ಕೋಟೆ. ಆದರೂ ಸುತ್ತಲೂ ಕಣ್ಣಾಗಿರಬೇಕು. ಯಾವಾಗ ಏನಾಗುವದೊ ಹೇಳಲು ಬರುವದಿಲ್ಲ. ಏನೇ ಆಗಲಿ ಯುವರಾಜರನ್ನು ತಮ್ಮ ಉಡಿಯಲ್ಲಿ ಹಾಕಿದ್ದೇನೆ.

ಚನ್ನರಸಿ : ಯುವರಾಜರನ್ನು ನಾವು ನಮ್ಮ ಕಣ್ಣಗೊಂಬೆಯಂತೆ ಕಾಯುತ್ತೇವೆ. ತಾವು ನಿಶ್ಚಿಂತೆಯಿಂದ ವಿಶ್ರಮಿಸಿರಿ ಪ್ರಭು.

ಅಕ್ಕ : ಹೀಗೆ ಇಚ್ಛೆಯನರಿತ ಹೆಂಡತಿಯರನ್ನು ಪಡೆದ ಮಲ್ಲಸರ್ಜ ದೊರೆಗಳಿಗೆ ಸ್ವರ್ಗಕ್ಕೆ ಕಿಚ್ಚು ಹಚ್ಚುವಂತಿತ್ತು. ಸಾರವತ್ತಾದ ಬದುಕು. ಹೊರಗೆ ಷಡ್ಯಂತ್ರಗಳು ನಡೆದೇ ಇದ್ದವು. ಪುಣೆಗೆ ಕರೆಸಿದ ಪೇಶ್ವೆ ಮಲ್ಲಸರ್ಜ ದೊರೆಯನ್ನು ಮೋಸದಿಂದ ಬಂಧಿಸಿ ಇಟ್ಟನು.

ಚಂದ್ರು : ಮಲ್ಲಸರ್ಜ ದೊರೆಯನ್ನು ಕೊಪ್ಪಳದ ಕೋಟೆಯ ಸೆರೆಯಲ್ಲಿ ಅಡಗಿಸಿಟ್ಟಿದ್ದನಂತೆ. ಅಲ್ಲಿಂದ ತಪ್ಪಿಸಿಕೊಂಡು ಬಂದು ಕಿತ್ತೂರನ್ನು ಸೇರಿದ ಮೇಲೆ ದೊರೆ ಹಾಸಿಗೆ ಹಿಡಿದರು ದಿನೇ ದಿನೇ ಆರೋಗ್ಯ ಕ್ಷೀಣಿಸಿತು. ಕೊನೆಗೊಮ್ಮೆ ಹಿರಿಯರಸಿ, ಯುವರಾಜ ಸಮೇತ ಕಿತ್ತೂರ ನಾಡನ್ನು ಚೆನ್ನಾಜಿಯ ಉಡಿಗೆ ಹಾಕಿ ದೊರೆ ಕಣ್ಮುಚ್ಚಿಕೊಂಡರು.

ಕಿತ್ತೂರ ಕೀರುತಿಯ ಆರತಿ ಆರೀತು
ಎತ್ತ ಹೋತವ್ವಾ ತಿಂಗಳ ಬೆಳಕ ! ತಂಗೆವ್ವಾ
ನಿತ್ಯ ನಮ್ಮ ಜನುಮಕ ಮುಳ್ಯಾಯಿತು.

ಅಕ್ಕ : ರುದ್ರವ್ವ ಅರಸಿಯರು ಹಾಡಿ ಹಾಡಿ ಅತ್ತರು. ಅತ್ತು ಅತ್ತು ಹಾಡಿದರು ಈಗ ಚೆನ್ನವ್ವ ಯುವರಾಜರಿಗಷ್ಟೆ ಅಲ್ಲ ನಾಡಿಗರೆಲ್ಲರ ಹೊಣೆಹೊತ್ತ ತಾಯಿ. ದೊರೆಗಳು ವೆಂಗಿ ಚೆನ್ನಬಸಪ್ಪ, ಮುಳಗುಂದದ ಜವಳೀ ಶೆಟ್ಟರ ಚೆನ್ನಬಸಪ್ಪ ಕಾಶಿರಾದ ವರ ರುದ್ರ ಕವಿ, ಮಣಿಪುರದ ನೀಲಕಂಠಾಚಾರ್ಯ, ಕೊಳಸಿ ರಂಗಾಚಾರ್ಯ, ಮಾಗುಂಡಿ ಬಸವ, ಶಿವಲಿಂಗ ಶಾಸ್ತ್ರಿ ದೇವರ ಶೀಗಿಹಳ್ಳಿ ರುದ್ರಗೌಡ, ಬೆಟಗೇರಿ ಶಿವಲಿಂಗ ಶಾಸ್ತ್ರಿ ಮೊದಲಾದ ಕವಿಗಳಿಗೆ ದಾನದತ್ತಿ ಕೊಟ್ಟು ಪ್ರೋತ್ಸಾಹಿಸಿದ್ದರು. ದುಂದುಮಿ ಹಾಡುಗಾರರಿಗೆ, ಬಯಲಾಟದ ತಂಡದವರಿಗೆ, ಹಾಡುಗಾರರಿಗೆ, ನರ್ತಕಿಯರಿಗೆ ಆಶ್ರಯ ಕೊಟ್ಟಿದ್ದರು. ದೊರೆಗಳ ಆಶ್ರಯಕ್ಕೆ ಬಂದ ಅನೇಕ ಕಲಾವಿದರು ಅದೇ ನಾಡಿನಲ್ಲಿ ನೆಲೆಯೂರಿದ್ದರು.

ಚಂದ್ರು : ವೆಂಕಟರಾಯ ಮತ್ತು ಮಲ್ಲಪ್ಪ ಶೆಟ್ಟಿಯಂಥ ದುರಾಸೆಯ, ದುಷ್ಟಬುದ್ಧಿಯ ಜನಕ್ಕೂ ಕಡಿಮೆ ಇರಲಿಲ್ಲ. ದೊರೆಗಳಿದ್ದಾಗಲೇ ತಮಗೆ ಯೋಗ್ಯತೆಯಿಲ್ಲದಿದ್ದರೂ ಸ್ಥಾನಮಾನ ಸಿಗಲಿಲ್ಲವೆಂದು ಕರುಬುತ್ತಿದ್ದವರಿಗೆ ಚೆನ್ನವ್ವರಸಿಯ ಆಳ್ವಿಕೆಯಲ್ಲಿ ಇನ್ನಷ್ಟು ಎಡಚಾಯಿತು. ಇಂಗ್ಲೀಷರು ಒಡ್ಡಿದ ಆಮಿಷಕ್ಕೆ ಬಲಿಯಾದ ಅವರಿಬ್ಬರೂ ಮಸಲತ್ತು ಮಾಡತೊಡಗಿದರು.

ಅಕ್ಕ : ಶಿವಲಿಂಗ ರುದ್ರ ಸರ್ಜರು ತಂದೆಯ ನಂತರ ರಾಜ್ಯ ಸೂತ್ರ ವಹಿಸಿಕೊಂಡರು. ಅಂಗ್ರೇಜಿಗಳೊಡನೆ ಒಪ್ಪಂದ ಮಾಡಿಕೊಂಡರು. ಮನ್ರೋ ಅವಾರ್ಡಿನ ಪ್ರಕಾರ ವಾರ್ಷಿಕ ನರ್ಸುರಾಣಾ ಹಾಗೂ ಖಾನಾಪೂರ ತಾಲ್ಲೂಕನ್ನು ಒಪ್ಪಿಸಿದರು. ಚೆನ್ನವ್ವನವರಿಗೆ ಈ ವಿಷಯ ಮನಸ್ಸಿಗೆ ಹಿಡಿಸಲಿಲ್ಲ. ಆದರೂ ಸುಮ್ಮನುಳಿಯಬೇಕಾಯಿತು. ಮಲತಾಯಿಯೆಂಬ ಅಪವಾದಕ್ಕೆ ಅಂಜಬೇಕಾಯಿತು. ವಿಧಿಯ ಆಟ ಯಾರಿಗೆ ತಿಳಿದಿತ್ತು ?

ಚಂದ್ರು : ಪಟ್ಟಕ್ಕೆ ಬಂದ ನಾಲ್ಕು ವರ್ಷಗಳಲ್ಲಿ ಶಿವಲಿಂಗರುದ್ರ ಸರ್ಜರು ಅನಾರೋಗ್ಯಕ್ಕೆ ತುತ್ತಾದರು. ಅವರ ಪಟ್ಟದ ರಾಣಿ ವೀರವ್ವರಸಿ ಎರಡೊಂದಾಗಿ ದುಃಖಗಳನ್ನು ನುಂಗಬೇಕಾಯಿತು, ಪತಿಯ ಅನಾರೋಗ್ಯ, ಸಂತಾನವಿಲ್ಲದ ನೋವು. ಕೊನೆಗೊಮ್ಮೆ ಯಾವ ವೈದ್ಯರಿಗೂ ಮಣಿಯದ ರೋಗ ಶಿವಲಿಂಗರುದ್ರ ಸರ್ಜರನ್ನು ನುಂಗಿ ನುಲಿಯಿತು.

ಅಕ್ಕ : ರಾಜಕಾರಣದಲ್ಲಿ ಪಳಗಿದ ಚೆನ್ನವ್ವರಸಿ ಕೈಕಟ್ಟಿ ಕೂಡುವಂತಿರಲಿಲ್ಲ. ರಾಜರ ಮರಣದ ಹಿಂದಿನ ದಿನವೇ ದತ್ತಕ ಮಾಡಿಕೊಂಡು ಪತ್ರ ಕಳಿಸಿದರು. ಆಗ ಧಾರವಾಡ ಕಲೆಕ್ಟರಾಗಿದ್ದ ಥ್ಯಾಕರೆ ಈ ಕಿತ್ತೂರ ಸಂಸ್ಥಾನ ನುಂಗಲು ಕಾರಣ ಹುಡುಕುತ್ತಿದ್ದವನಿಗೆ ಬೇಕಾದ ಬಳ್ಳಿ ಕಾಲಿಗೆ ತೊಡರಿದಂತಾಯಿತು. ದತ್ತಕವನ್ನು ಸುಳ್ಳು ಮಾಡಿದನು. ರಾಣಿಯರು ಶಿವಲಿಂಗ ಪ್ರಭುಗಳು ಸತ್ತ ನಂತರ ದತ್ತಕ ಮಾಡಿಕೊಂಡಿದ್ದಾರೆ. ಅದಕ್ಕೆ ತಮ್ಮ ಒಪ್ಪಿಗೆ ಪಡೆಯಬೇಕಾಗಿತ್ತೆಂದು ಸಬೂಬು ಹೇಳಿ ಕಿತ್ತೂರಿಗೆ ಬಂದನು. ಅರಮನೆಗೆ ಬಂದು ಅಧಿಕಾರಿಗಳನ್ನು ಬೆದರಿಸಿ ಖಜಾನೆ ಕೀಲಿಕೈ ಕಸಿದುಕೊಂಡನು. ಅದನ್ನು ಸೀಲು ಮಾಡಿ ಮುದ್ರೆ ಒತ್ತಿದನು. ಇಷ್ಟೆಲ್ಲ ಕೆಲಸ ಮಿಂಚಿನ ವೇಗದಲ್ಲಿ ನಡೆಯಿತು.

ಚಂದ್ರು : ಥ್ಯಾಕರೆ ಸಾಹೇಬ ಅಷ್ಟಕ್ಕೆ ಬಿಡಲಿಲ್ಲ. ದತ್ತಕ ಪುತ್ರ ಶಿವಲಿಂಗಪ್ಪನನ್ನು ಕಿತ್ತೂರಿನ ಹೊರಗೆ ಹಾಕಲು ಆಜ್ಞೆ ಮಾಡಿದನು. ಇನ್ನು ಸಹಿಸುವುದು ಸರಿಯಲ್ಲವೆಂದು ರುದ್ರವ್ವರಸಿ ಚೆನ್ನವ್ವರಸಿಯರು ಸೇರಿ ಸಹಿ ಮಾಡಿದ ಪತ್ರವನ್ನು ಚಾಪ್ಲಿನ್‌ರಿಗೆ ಕಳಿಸಿದರು. ಅದು ೨ ಅಕ್ಟೋಬರ, ೧೮೨೪. ಅವರಿಂದ ಬರುವ ಉತ್ತರಕ್ಕಾಗಿ ೧೬ ದಿನ ಕಾದರು. ಆಗ ಚೆನ್ನವ್ವರಸಿ ಸರದಾರ ಗುರುಸಿದ್ದಪ್ಪನವರನ್ನು, ಸೇತಸನದಿಯವರನ್ನು, ಬಂಟರನ್ನು, ಆಪ್ತರನ್ನು ಸಭೆ ಸೇರಿಸಿ ''ನಾವು ಅಂಗ್ರೇಜಿಗಳನ್ನು ಪ್ರತಿಭಟಿಸಲು ನಿರ್ಧರಿಸಿರುತ್ತೇವೆ'' ಎಂದು ಖಡ್ಗ ಮುಟ್ಟಿ ಪ್ರಮಾಣ ಮಾಡಿದರು. ಸರದಾರರು ಈ ನಿರ್ಣಯವನ್ನು ಸ್ವಾಗತಿಸಿದರು. ಎಲ್ಲರೂ ಹರ್ಷದಿಂದ ತಮ್ಮ ಒಪ್ಪಿಗೆ ನೀಡಿದರು.

ಅಕ್ಕ : ಕಿತ್ತೂರವರು ಯುದ್ಧದಿಂದ ಪ್ರತಿಭಟಿಸುವ ನಿರ್ಣಯ ತಿಳಿದ ಎರಡೇ ದಿನಗಳಲ್ಲಿ ಥ್ಯಾಕರೆ ಇದ್ದ ಬಿದ್ದ ಸೈನ್ಯವನ್ನು ಕೂಡಿಸಿಕೊಂಡು ಬಂದೇ ಬಿಟ್ಟನು. ಖಜಾನೆಯ ರಕ್ಷಣೆಗೆ ಭಂಗ ಬಂದರೆ ದಂಡ ಕೊಡುವದಾಗಿ ಮುಚ್ಚಳಿಕೆ ಬರೆದು ಕೊಡುವಂತೆ ಸರದಾರರಿಗೆ ತಿಳಿಸಿದನು. ಅದಕ್ಕೆ ಅವರು ಒಪ್ಪಲಿಲ್ಲ. ಅವರನ್ನು ಬಂಧಿಸಲು ಆಜ್ಞೆ ಮಾಡಿದನು. ಅದು ಅಕ್ಟೋಬರ ೨೧.

ಚಂದ್ರು : ಚೆನ್ನವ್ವರಸಿಯರು ಮುಂದಾಲೋಚನೆ ಮಾಡಿ ಎಲ್ಲಾ ಸೂಚನೆ ಕೊಟ್ಟು ಇಟ್ಟಿದ್ದರು. ಥ್ಯಾಕರೆ ಆಜ್ಞೆಯನ್ನು ಈಡೇರಿಸುವ ಮೊದಲೇ ಕಿತ್ತೂರಿನ ಬಂಟರು ಅಂಗ್ರೇಜಿಗಳನ್ನು ಬಗ್ಗುಬಡಿದರು. ಎಲ್ಲೆಂದರಲ್ಲಿ ಹಿಡಿದು

ತದುಕಿದರು. ವೈರಿಗಳು ತಲೆಮರೆಸಿಕೊಂಡು ಓಡಿದರು. ಅವರ ಮಕ್ಕಳು ಹೆಂಗಸರನ್ನು ಸೆರೆ ಹಿಡಿದು ತಂದಾಗ ಚೆನ್ನವ್ವನವರಿಗೆ ನೋವಾಯಿತು. ಅವರು ವಿರೋಧಿಗಳ ಕಡೆಯವರಾದರೂ ಅವರನ್ನು ಬಹಳ ಗೌರವದಿಂದ ಅತಿಥಿಗಳಂತೆ ನೋಡಿಕೊಂಡು ಸುರಕ್ಷಿತವಾಗಿ ಅವರವರ ನೆಲೆಗೆ ತಲುಪಿಸಿದಳು.

ಚಂದ್ರು : ಶೌರ್ಯ-ಔದಾರ್ಯಗಳು ಕೂಡಿ ಇರುವದು ವಿರಳ. ಚೆನ್ನವ್ವರಸಿಯರಲ್ಲಿ ಅವೆರಡೂ ಇದ್ದವು. ಆದರೆ ಈ ಪ್ರಸಂಗವನ್ನು ದುರುಪಯೋಗಪಡಿಸಿಕೊಂಡು ವೆಂಕಟರಾಯ ಮತ್ತು ಮಲ್ಲಪ್ಪಶೆಟ್ಟಿಯಂಥವರು ಜನತೆಯಲ್ಲಿ ತಪ್ಪು ಅಭಿಪ್ರಾಯ ಕಲ್ಪಿಸಿದರು. ಆತ್ತ ತಮ್ಮ ಸ್ವಾರ್ಥ ಸಾಧನೆಗಾಗಿ ಥ್ಯಾಕರೆ ಜೊತೆಗೆ ಸಂಪರ್ಕ ಬೆಳೆಸಿದರು.

ಅಕ್ಕ : ಥ್ಯಾಕರೆ ಸೋತು ಸುಮ್ಮನುಳಿಯಲಿಲ್ಲ. ಕುಟಿಲ ನೀತಿಯಲ್ಲಿ ನಿಷ್ಣಾತನಾದ ಆತನು ರಾಣಿಯವರ ಜೊತೆಗೆ ಒಪ್ಪಂದ ಮಾಡಿಕೊಳ್ಳುವ ಪ್ರಯತ್ನ ಮಾಡಿದನು. ರಾಣಿಯವರು ಸಮ್ಮತಿಸಲಿಲ್ಲ. ಅಕ್ಟೋಬರ ೨೨ರಂದು ತಾನೇ ಕೋಟೆಗೆ ಬಂದನು. ಜನರು ತಮ್ಮ ತಮ್ಮ ಕೆಲಸದಲ್ಲಿ ನಿರತರಾಗಿದ್ದರೆ ವಿನಃ ಇವನ ಕಡೆಗೆ ಯಾರೂ ನೋಡಲಿಲ್ಲ. ಮಾತನಾಡಿಸಲಿಲ್ಲ. ರಾಣಿಯವರನ್ನು ಭೆಟ್ಟಿ ಮಾಡಿಸಲಿಲ್ಲ. ಹಿಂತಿರುಗಿ ಕೋಟೆಯ ಹೊರಗಿನ ತನ್ನ ಬಿಡಾರಕ್ಕೆ ಬಂದನು. ತನ್ನ ಸೈನ್ಯಾಧಿಕಾರಿಗೆ ತೋಪುಗಳನ್ನು ಕೋಟೆಯ ಬಾಗಿಲಿಗೆ ಗುರಿಯಿಡಲು ಥ್ಯಾಕರೆ ತಿಳಿಸಿದನು. ಅವನು ಕೋಟೆಯ ಬಾಗಿಲಿಗೆ ೨ ತೋಪು ಆನಿಸಿ ೨೪ ಮಿನಿಟಿನಲ್ಲಿ ಬಾಗಿಲು ತೆರೆಯದಿದ್ದರೆ ಬಾಗಿಲು ಮುರಿದು ನುಗ್ಗುವದಾಗಿ ಘೋಷಿಸಿದನು. ಅದಕ್ಕೆ ಅವನಿಗೆ ಯಾವ ಉತ್ತರವೂ ಸಿಗಲಿಲ್ಲ.

ಅಕ್ಕ: ಇನ್ನೇನು ಅವಧಿ ಮುಗಿಯುತ್ತ ಬಂತು. ಕ್ಯಾಪ್ಟನ್ ಬ್ಲ್ಯಾಕ್, ಕ್ಯಾಪ್ಟನ್ ಸಿವೆಲ್ ಹಾಗೂ ಲೆಫ್ಟನೆಂಟ ಡೇಟನ್ ಅವರು ತೋಫಿಗೆ ಬೆಂಕಿಯಿಡಲು ಕೈ ಎತ್ತಿದರು. ಅಷ್ಟರಲ್ಲಿ ಕೋಟೆಯ ಬಾಗಿಲು ತೆರೆದು ಕಿತ್ತೂರ ಬಂಟರು ಅಬ್ಬರಿಸುತ್ತ ಧುಮುಕಿ ಬಂದರು. ತೋಫಿನ ಬಳಿಯಿದ್ದವರ ಕೈಕೊಳ್ಳಿ ಕಸಿದುಕೊಂಡರು. ಹಾರಲಿದ್ದ ತೋಪು ಕ್ಷಣಾರ್ಧದಲ್ಲಿ ನಂದಿ ಹೋಯಿತು. ಕುದುರೆ ಸವಾರರು ಮಿಂಚಿನ ವೇಗದಲ್ಲಿ ಮುನ್ನುಗ್ಗಿದರು. ಹಣಾ ಹಣಿ, ಖಾಡಾ ಖಾಡಿ ಯುದ್ಧ ಪ್ರಾರಂಭವಾಯ್ತು.

(ಕಾದಾಡುವ ಧ್ವನಿ, ರಣವಾದ್ಯಗಳ ಧ್ವನಿ)

ಚೆನ್ನವ್ವ : ಹರಹರ ಮಹಾದೇವ, ಹರಹರ ಮಹಾದೇವ ಮುನ್ನುಗ್ಗಿರಿ, ಅತ್ತ ನುಗ್ಗಿರಿ, ಇತ್ತ ಜಜ್ಜಿರಿ, ಕೊಚ್ಚಿರಿ, ಕೊಚ್ಚಿರಿ ಅರಿಗಳನ್ನು ತರಿಯಿರಿ. ಶಿರಗಳನ್ನು ಉದುರಿಸಿರಿ, ಹೊಡೆಯಿರಿ, ಕಡಿಯಿರಿ ಎನ್ನುತ್ತ ಚೆನ್ನವ್ವ ರಾಣಿ ಕುದುರೆ ಏರಿ ಮಿಂಚಿನಂತೆ ಇತ್ತಿಂದತ್ತ ಅತ್ತಿಂದಿತ್ತ ಖಡ್ಗ ಬೀಸುತ್ತ ಸಾಗಿದಳು.

ಅಕ್ಕ : ಕುದರಿಯನೇರಿದಳ ಬಿಚ್ಚತ್ತಿ ಬೀಸಿದಳ ಚೆನ್ನವ್ವ
ಉದರಿದವು ರುಂಡ ಉರುಳಿದವು ದಿಂಡ । ರಣಚಂಡಿಗೆ
ಅದರೀತ ನೆಲ ಮುಗಿಲ ಧೀರ ಕನ್ನಡತಿಗೆ

ಥ್ಯಾಕರೆಗೆ ಸಿಟ್ಟು ನೆತ್ತಿಗೇರಿತು. ಬಂದೂಕು ಹಿಡಿದು ಚೆನ್ನವ್ವನ ಕಡೆಗೆ ಗುರಿ ಇಟ್ಟ. ಕುದುರೆಯನ್ನು ಓಡಿಸುತ್ತ ಬರುವುದನ್ನು ರಾಣಿಯ ಅಂಗರಕ್ಷಕನಾದ ಸಾದೂನವರ ಬಾಳಪ್ಪ ನೋಡಿದವನೇ ತನ್ನ ಕುದುರೆ ಓಡಿಸಿ ಥ್ಯಾಕರೆಗೆ ಗುರಿಯಿಟ್ಟು ಗುಂಡು ಹೊಡೆದ. ಥ್ಯಾಕರೆ ಕುದುರೆಯ ಮೇಲಿಂದ ಉರುಳಿ ಬಿದ್ದ. ಬಾಳಪ್ಪನ ಕುದುರೆ ಥ್ಯಾಕರೆನ ಶವದ ಬಳಿ ಓಡಿತು. ಬಾಳಪ್ಪನು ಕೈಯಲ್ಲಿಯ ಖಡ್ಗದಿಂದ ಥ್ಯಾಕರೆನ ರುಂಡ ಕತ್ತರಿಸಿ ಅದನ್ನು ಖಡ್ಗದ ತುದಿಗೆ ಸಿಕ್ಕಿಸಿ ಮೇಲೆ ಎತ್ತಿ ಹಿಡಿದನು. 'ಥ್ಯಾಕರೆ ಸತ್ತು, ಥ್ಯಾಕರೆ ಸತ್ತು ಹೋದ' ಎಂದು ಒದರಿ ಒದರಿ ಹೇಳಿದನು.

ಚಂದ್ರು : ಕಿತ್ತೂರಿನ ಬಂಟರ ಜಯಕಾರ ಮುಗಿಲ ಮುಟ್ಟಿತು. ಇಂಗ್ಲೀಷರು ದಿಕ್ಕೆಟ್ಟು ಓಡತೊಡಗಿದರು. ರಣಕಹಳೆ, ರಣಹಲಗೆ, ಕೊಂಬು ಕಹಳೆಯ ಧ್ವನಿಗೆ ಕಿವಿ ಗಡಚಿಕ್ಕಿದವು.

ಕ್ಯಾಪ್ಟನ್ ಬ್ಲ್ಯಾಕ್, ಕ್ಯಾಪ್ಟನ್ ಸಿವೆಲ್, ಲೆಫ್ಟನೆಂಟ ಡೇಟನ್ ಮತ್ತು ಥ್ಯಾಕರೆಯಂಥವರು ಸತ್ತು ಬಿದ್ದಿದ್ದರು. ಒಟ್ಟು ೮೦ ಜನ ಇಂಗ್ಲೀಷರು ೪೦ ಜನ ಅಧಿಕಾರಿಗಳು ಸೆರೆಯಾದರು.

ವಿಜಯೋತ್ಸವ! ಎಲ್ಲೆಡೆಗೂ ಸಂಭ್ರಮದ ವಾತಾವರಣ! ಕೋಟೆಯ ತುಂಬ ಹಿಗ್ಗಿನ ಹೊಳೆ ಹರಿಯಿತು. ಚೆನ್ನವ್ವನನ್ನು ಎಷ್ಟು ಕೊಂಡಾಡಿದರೂ ದಣಿಯರು.

ಅಕ್ಕ : *ಹೆಣ್ಣಾದರೇನವ್ವ ಚೆನ್ನವ್ವ ಗಂಡೆದೆಯು ನಿನ್ನದು*
ಮಣ್ಣ ಮುಕ್ಕಸಾಕ ಫಿರಂಗ್ಯಾರ ಗುಂಡಿಗೆದೆಗೊಡದ
ದಣ್ಣಾಯಕರೆಲ್ಲ ಹಣ್ಣು ಗಿಣ್ಣಾಗಿ ಅಡಗಿದ್ದರು
ಬಣ್ಣದ ಬಿರುದಿಗೆ ಬಾಯ್ತೆಗೆದು ಕಾದಿದ್ದರು

ಸೋತ, ಸತ್ತ ಸೇಡು ತೀರಿಸಿಕೊಳ್ಳಲು ಇಂಗ್ಲೀಷರು ಒಂದೂವರೆ ತಿಂಗಳು ಸಿದ್ಧತೆ ಮಾಡಿಕೊಂಡರು. ಮತ್ತೆ ತಾನು ಹೋರಾಡ ಬೇಕಾಗುವುದು ನಿಶ್ಚಿತವೆಂದು ರಾಣಿಯವರಿಗೆ ಗೊತ್ತಿತ್ತು.

(ಮಧ್ಯಂತರ ಸಂಗೀತ)

ಚೆನ್ನವ್ವ : ''ಈಗ ಎರಡು ಸಲ ಸೋಲು ಕಂಡ ಆಂಗ್ರೇಜಿಗಳು ಇನ್ನು ಸುಮ್ಮನಿರುವುದಿಲ್ಲ. ಬಂದೇ ಬರುತ್ತಾರೆ. ಸರದಾರರೇ, ಶೇತಸನದಿಯವರೇ ಧೀರ ಬಂಟರೇ ಇನ್ನು ಬರಲಿರುವುದು ನಮ್ಮ ಕೊನೆಯ ಪರೀಕ್ಷಾ ಕಾಲ. ರಣರಂಗದಲ್ಲಿ ಹೋರಾಡಿ ಮಡಿಯುವದೇ ನಮ್ಮ ಗುರಿ. ನಮ್ಮ ನಾಡಿಗೆ ಬಂದು ನಮ್ಮ ಮೇಲೆ ಅಧಿಕಾರ ಚಲಾಯಿಸುವುದನ್ನು ನಾವು ಸಹಿಸುವದಿಲ್ಲವೆಂದು ಒಂದು ಕೈತೋರಿಸಿದ್ದೇವೆ. ಇನ್ನು ಮುಂದೆ ನಮ್ಮ ಮೇಲೆ ಹೆಚ್ಚಿನ ಹೊಣೆ ಇದೆ. ದೊಡ್ಡ ಸೇನೆಯೊಂದಿಗೆ ಆಂಗ್ರೇಜರು ಬಂದರೆ ಎದುರಿಸುವಷ್ಟು ಸಿದ್ಧತೆಯಾಗಲಿ. ಸರದಾರ ಗುರುಸಿದ್ದಪ್ಪನವರೇ ಎಲ್ಲ ಕಡೆಗೆ ನಿಗಾ ಇರಲಿ''.

ಚಂದ್ರು : ಹೀಗೆ ಚೆನ್ನವ್ವ ರಾಣಿ ಎಲ್ಲ ಕಾಳಜಿ ವಹಿಸಿದಳು. ೧೮೨೪ರ ಡಿಸೆಂಬರ ೨ರಂದು ಕಿತ್ತೂರಿನ ಮೇಲೆ ಇಂಗ್ರೇಜಿಗಳ ಸೇನೆ ದಂಡೆತ್ತಿ ಬಂತು. ೨ ದಿನಗಳ ಘನಘೋರ ಯುದ್ಧದಲ್ಲಿ ಕನ್ನಡಿಗರ ಸೇನೆ ಬೆಂದು ಸುಣ್ಣವಾಯಿತು. ವೆಂಕಟರಾಯ ಮಲ್ಲಪ್ಪ ಶೆಟ್ಟಿಯವರ ಕಾರಸ್ಥಾನದಿಂದ ಮದ್ದಿಗೆ ಸೆಗಣಿ ಬೆರೆಸಿದ್ದ ಕಾರಣಕ್ಕಾಗಿ ಬೇಗನೇ ಹತಾಶರಾಗಬೇಕಾಯಿತು. ಡಿಸೆಂಬರ ೫ರಂದು ಕಿತ್ತೂರ ಕೋಟೆಯ ಮೇಲೆ ಯೂನಿಯನ್ ಜಾಕ್ ಧ್ವಜ ಏರಿ ಹಾರಾಡಿತು.

ಅಕ್ಕ : ಚೆನ್ನವ್ವ ರಾಣಿಯನ್ನು ಸೆರೆಹಿಡಿದು ಬೈಲಹೊಂಗಲ ಸೆರೆಮನೆಯಲ್ಲಿಟ್ಟರು. ಶಿವಲಿಂಗರುದ್ರ ಸರ್ಜರ ಹೆಂಡತಿಯನ್ನು ಕೆಲವು ದಿನಗಳ ನಂತರ ಅಲ್ಲಿಂದ ಬಿಡುಗಡೆ ಮಾಡಿದರು. ಆವಳು ಅತ್ತೆಯನ್ನಗಲಿ ಹೋಗುವಾಗಿನ ಸನ್ನಿವೇಶವನ್ನು ಒಬ್ಬ ಜಾನಪದ ಕವಿ ಹೀಗೆ ಹೇಳಿದ್ದಾನೆ :

ಕಿತ್ತೂರ ಚೆನ್ನಮ್ಮನ ಸೊಸಿ ಹೊಂಗಲ ಬಿಟ್ಟು
ಹೋಗುವಾಗ ಮಾಡತಾಳ ಮಾ ದುಃಖ
ಮತ್ತ ನಮ್ಮ ಮಲ್ಲಸರ್ಜ ಸತ್ತು ಹೋಗದಿದ್ದರ
ಹೊತ್ತು ಹೋಗುದ್ಯಾಕ ನಮ್ಮ ಬದುಕ

ಚೆನ್ನವ್ವರಾಣಿ ಬೈಲಹೊಂಗಲದ ಸೆರೆಮನೆಯಲ್ಲಿದ್ದಾಗ ದೇಶಭಕ್ತ, ರಾಜನಿಷ್ಠ ಸಂಗೊಳ್ಳಿರಾಯಣ್ಣ ತನ್ನ ಪಡೆ ಕಟ್ಟಿಕೊಂಡು ಮತ್ತೊಮ್ಮೆ ಕಿತ್ತೂರಿನ ಸ್ವಾತಂತ್ರ್ಯಕ್ಕಾಗಿ ಬಂಡೆದ್ದನು. ಸಫಲವಾಗಲಿಲ್ಲ.

ಚಂದ್ರು : ರಾಣಿ ದೇಶಚಿಂತನೆ ಈಶ ಪೂಜೆ ಮಾಡುತ್ತ ಸೆರೆಮನೆಯಲ್ಲಿ ಐದು ವರ್ಷ ಕಳೆದಳು.

ಅಕ್ಕ : ಕಿತ್ತೂರಿನಂಥ ಅನೇಕ ಸಂಸ್ಥಾನಗಳು ದೇಶದ ತುಂಬ ಇದ್ದರೂ ಇಂಗ್ಲಿಷರನ್ನು ಪ್ರತಿಭಟಿಸುವ ಗೋಜಿಗೆ ಹೋಗದೆ ಇದ್ದವರೇ ಅನೇಕರು. ದತ್ತಕಕ್ಕಾಗಿ, ಉಂಬಳಿಗಾಗಿ, ಮತ್ತೊಂದಕ್ಕಾಗಿ ಕಾರಣ ಕೆದರಿ ಇಂಗ್ಲೀಪರು ದೇಶೀಯರ ಮೇಲೆ ದಬ್ಬಾಳಿಕೆ ಹೇರುತ್ತಲೇ ಇದ್ದರೂ ಇವರು ಸಹಿಸುತ್ತಲೇ ಇದ್ದರು. ಕಿತ್ತೂರಿನ ಚನ್ನವ್ವರಾಣಿ ಧೈರ್ಯದಿಂದ ವಿರೋಧಿಸಿ ಸ್ವಾಭಿಮಾನದ ಜೊತೆಗೆ ದೇಶಾಭಿಮಾನ ಮೆರೆದ ಪುರುಷ ಪುಂಗವರಿಗೂ, ಮಹಿಳಾ ಮಣಿಗಳಿಗೂ ಆದರ್ಶಪ್ರಾಯವಾದಳು.

ಇಬ್ಬರೂ : *ಜೀವೇನ ಹೋದೀತ ಸಾವೇನ ಬಂದೀತ*
ಯಾತಕ್ಕೂ ಬಗ್ಗದಲೆ ಯಾರ್ಹಂಗು ಬೇಡದಲೆ
ಸಾವಿರದ ಮಲ್ಲೀಗಿ ಸುರಿದು ಸೂರ್ಯಾಡ್ಯಾವ
ನಾಡಿನ ಹಿರಿಮೆಯ ಮೆರೆದ ಚೆನ್ನವ್ವಗ

ಧೃವತಾರೆಯನ್ನು ನೋಡುತ್ತಿದ್ದ ಕೊಳವೆಯೊಂದೇ ನಿಂತು ಇಂದಿಗೂ ಕಿತ್ತೂರಿನ ಕೀರ್ತಿಯ ಧೃಡತೆಯನ್ನು ಸಾರುತ್ತದೆ.

ವಸಂತ ಋತು

ಚಂದ್ರು : ಅಕ್ಕ, ವಸಂತ ಋತುಬಂತಲ್ಲ! ಇದರ ಅರ್ಥ ಏನು, ವೈಶಿಷ್ಟ್ಯ ಏನು ಸ್ವಲ್ಪ ಹೇಳಕ್ಕ.

ಅಕ್ಕ: ಹೇಳ್ತೀನಿ ಕೇಳು ಚಂದ್ರು. ವರ್ಷಕುಮಾರನ ಷಣ್ಮುಖಗಳೇ ಋತುಗಳು. ಋತುಗಳು ವರ್ಷದ ಮಿತಿಯನ್ನು, ಆಯಾ ಮಿತಿಯಲ್ಲಿ ಪ್ರಕೃತಿಯ ಚಲನೆಯನ್ನು ಗುರುತಿಸುತ್ತವೆ. ಪ್ರಾಕೃತಿಕ ಧರ್ಮವನ್ನು ಎತ್ತಿಹೇಳುವ ಗ್ರೀಷ್ಮ, ವರ್ಷಾ, ಶರತ್, ಹೇಮಂತ, ಶಿಶಿರ, ಮತ್ತು ವಸಂತವೆಂದು ಋತುಗಳನ್ನು ಗುರುತಿಸುತ್ತಾರೆ. ಎರಡೆರಡು ಮಾಸಗಳ ಕಾಲದ ಅವಧಿ ಒಂದು ಋತು.

ನಾಗಚಂದ್ರ ಕವಿಯು 'ಪಂಪರಾಮಾಯಣ'ದಲ್ಲಿ-

''ಮಾಸಂ ಪಕ್ಷದ್ವಿತೀಯಂ, ಮಾಸದ್ವಯಯೊಂದದು ಋತುತ್ರಯ-ಮಯನನ್ಯಾಸಂ'' ಅಂದರೆ ಶುಕ್ಲ ಪಕ್ಷ, ಕೃಷ್ಣ ಪಕ್ಷಗಳೆಂಬ ಎರಡು ಪಕ್ಷಗಳಿಂದ ಕೂಡಿ ಒಂದು ಮಾಸ, ಎರಡು ಮಾಸಗಳು ಕೂಡಿ ಒಂದು ಋತು, ಮೂರು ಋತುಗಳು ಸೇರಿ ಸೂರ್ಯನು ಚಲಿಸುವ ಒಂದು ದಾರಿಯಾಗುತ್ತದೆ.

ಪೃಥ್ವಿಯು ಸೂರ್ಯನ ಸುತ್ತ ಒಂದು ಸುತ್ತು ಬಳಸಿ ಬರಲು ಒಂದು ವರ್ಷ ಬೇಕಾಗುವದು. ಋತುಭೇದಗಳಾಗಲು ಒಂದು ಭೌಗೋಲಿಕ ಕಾರಣವಿದೆ. ಕ್ರಿಸ್ತಶಕವನ್ನು ಜನೆವರಿ ಒಂದರಿಂದ ಆರಂಭಿಸಿ ಅದನ್ನು ಹೊಸ ವರುಷದ ಮೊದಲಿನ ದಿನವೆಂದು ಸಂಭ್ರಮದಿಂದ ಆಚರಿಸುತ್ತಾರೆ. ಭಾರತೀಯರಿಗೆ ಚೈತ್ರಮಾಸದ ೧ನೆಯ ದಿನ ಯುಗಾದಿಯುಪಾಡ್ಯದಂದು ಆರಂಭವಾಗುತ್ತದೆ. ಚೈತ್ರ ವೈಶಾಖಗಳೆರಡು ಸೇರಿ ವಸಂತ ಋತುವೆನಿಸುತ್ತದೆ.

ಋತುವೆಂದರೆ ಸುತ್ತುವ ಕಾಲ. ಪ್ರಕೃತಿಯನ್ನು ನಗಿಸುವ, ಅಳಿಸುವ, ನಡುಗಿಸುವ, ಮುದುಡಿಸುವ, ಅರಳಿಸುವ ತೋಯಿಸುವ, ಕಾಯಿಸುವ, ಒಣಗಿಸುವ, ಹಸಿರಾಗಿಸುವ, ಕಾಲದ ಒಂದಂಶ ಋತು. ಕಾಲನ ಹೆಜ್ಜೆಗಳು,

ಕಾಲನ ಅನಾದಿ ಅನಂತ ರೂಪಗಳು ಇಂದಿಗೂ ಅವ್ಯಕ್ತ.

ಹೌದು. ಕಾಲನ ರೂಪು ಪ್ರೇಮಮಯಿಯಾಗಿದೇಯೋ, ಕುರೂಪಿಯಾಗಿದೆಯೋ, ಕರುಣಾಮಯಿಯಾಗಿದೆಯೋ, ಕ್ರೂರಿಯಾಗಿದೆಯೋ ಯಾರಿಗೂ ತಿಳಿದಿಲ್ಲ. ಹಾಗೆಂದೇ ಸೂರ್ಯನನ್ನೇ ಕಾಲಮಿತಿಯ ಸೂಚಿಯಾಗಿ ಹಿಡಿದು ದಿನಮಾನಗಳನ್ನು ಅಳೆಯುತ್ತಾರೆ. ಋತುಮಾನಗಳನ್ನು ತಿಳಿಯುತ್ತಾರೆ.

ಚಂದ್ರು : ಶೃಂಗಾರವನ್ನು ರಸಗಳ ರಾಜನೆನ್ನುತ್ತಾರೆ. ವಸಂತವು ಋತುಗಳ ರಾಜ ಹೌದಲ್ಲೊ?

ಅಕ್ಕ : ಹೌದು. ವಸಂತನು ಕಾಮನ ಬಲಗೈ ಬಂಟ. ಕಾಮನ ದಂಡಿಗೆ ದಂಡಾಧಿಪತಿ. ಕಾಮನು ಶೃಂಗಾರ ರಸ ಪ್ರೇರಕ. ಶೃಂಗಾರ ರಸವು ರಸಗಳ ಪಟ್ಟಿಯಲ್ಲಿಯೂ ಜನಪ್ರೀಯತೆಯಲ್ಲಿಯೂ ಮೊದಲನೆಯದು. ಶೃಂಗಾರ ರಸದ ಸ್ಥಾಯಿಭಾವ ರತಿಭಾವ. ಸ್ತ್ರೀ ಪುರುಷರಲ್ಲಿರುವ ಪ್ರೇಮವೇ ರತಿ.

ಪ್ರಾಣಿಪಕ್ಷಿಗಳಲ್ಲೂ ಆಕರ್ಷಣೆ ಇರುವದೇ ಸೃಷ್ಟಿರಚನೆಗೆ ಮೂಲ. ರತಿಭಾವವನ್ನು ಸಕಲ ಹೃದಯ ಸಂವಾದಿಯೆಂದು ಕರೆಯುವದರಲ್ಲಿ ವಿಶೇಷ ಅರ್ಥವಿದೆ. ರತಿಶಬ್ದವು ಶಬ್ದಾರ್ಥದಲ್ಲಿ ಸಂತೋಷ ಅಥವಾ ಆನಂದ, ಒಲವು ಅಥವಾ ಪ್ರೀತಿ, ಸುರತ ಅಥವಾ ಸಂಭೋಗ, ಹಾತೊರೆಯುವಿಕೆ ಅಥವಾ ಹಂಬಲ ಹೀಗೆ ಬಳಕೆಯಲ್ಲಿದೆ. ರತಿ ನಾಮಪದವಾಗಿ ಕಾಮನ ಹೆಂಡತಿಯೆಂದು, ಚಂದ್ರನ ಹದಿನಾರು ಕಲೆಗಳಲ್ಲಿ ಒಂದೆಂದು ಅರ್ಥ ಕೊಡುತ್ತದೆ. ರತಿ ಪತಿ ಕಾಮನು, ಮನ್ಮಥನು, ಅನಂಗ. ಅವನ ದಂಡಾಧಿಪ ವಸಂತ. ವಸಂತನಿಲ್ಲದ ಶೃಂಗಾರ ನಿಸ್ಸಾರ.

ಕವಿ ಕಲ್ಪನೆಗೆ ಗರಿ ಮೂಡುವದು ರತಿ, ರತಿಪ, ವಸಂತರ ಸ್ಮರಣೆಯಲ್ಲಿ. ಸ್ಮರಣೆಯೊಂದೇ ಸಾಲದು. ಸಾಲದೆಂದೇ ಬಣ್ಣನೆ, ಬಣ್ಣಿಸಲು ಆದಿಶೇಷನ ನಾಲಗೆಗಳು ಸಾಲವು.

ಇನ್ನು ವಸಂತ. ವಸಂತನ ಶಬ್ದಾರ್ಥ ವೈವಿಧ್ಯ ಹೀಗಿದೆ: ಸುರಭಿ, ಹೂವಿನ ಹಬ್ಬ, ಸುಗ್ಗಿ, ಬಸಂತ, ಮಧುಪ್ರಿಯ, ಚೈತ್ರ, ಮಾಧವ, ಓಕುಳಿ, ಸಂಗೀತದಲ್ಲಿ ಒಂದು ರಾಗ ವಸಂತ. ಛಂದಸ್ಸಿನಲ್ಲಿ ಒಂದು ವೃತ್ತ ವಸಂತ ತಿಲಕ.

ಚಂದ್ರು : ವಸಂತ ಕಾಲದಲ್ಲಿ ವಸಂತದೂತನಾದ ಕೋಗಿಲೆ ವಸಂತ ದ್ರುಮದ ಮೇಲೆ ಅಂದರೆ ಮಾಮರದ ಮೇಲೆ ಕುಳಿತು ಕೂಜನಗೈಯುವದು. ರಸಿಕರನ್ನು ಎಚ್ಚರಿಸುವದು. ವಸಂತನ ಆಗಮನವನ್ನು ಸಾರುವದು.

ವಸಂತದೂತಿಕೆಯರಾದ ಅದಿರ್ಗಂತಿ , ಅದಿರ್ಮುತ್ತೆಯೆಂಬ ಬಳ್ಳಿಗಳಿಂದ ವಸಂತ ಮಂಟಪ ರಚಿಸಿ, ವಿರಹಿಗಳಿಗೆ ತಂಗುದಾಣವಾಗುತ್ತಾನೆ.

ವಸಂತಮಾಸದಲ್ಲಿ ಮಾಧವ, ವಸಂತಸಖ, ಕಾಮ, ಅನಂಗರನ್ನು ಸ್ವಾಗತಿಸುತ್ತಾರೆ.

ಓಕುಳಿಯಾಡುತ್ತ ವಸಂತ ಮಂಟಪಗಳನ್ನಾಶ್ರಯಿಸುತ್ತ ವಸಂತೋತ್ಸವವನ್ನು ಆಚರಿಸುತ್ತಾರೆ.

ಅಕ್ಕ: ಚಂದ್ರ ಕಾಮನ ಇನ್ನೊಂದು ಕೈ. ವಸಂತ ಸಖ ತಿಂಗಳ್ ಅವನ ಕನ್ನಡದ ನಾಮಾಭಿದೇಯ.

ತಿಂಗಳ್ ಶಬ್ದವು ಪೂರ್ಣಚಂದ್ರನನ್ನು ಸೂಚಿಸುತ್ತದೆ. ದಿನದಿಂದ ದಿನಕ್ಕೆ ಕೊರಗಿ ಒಂದೊಂದೇ ಕಳೆ ಕಳೆದುಕೊಂಡು ಕ್ಷೀಣನಾದ ಅವನು ಒಂದೊಂದೇ ಕಳೆಯನ್ನು ಪಡೆದುಕೊಂಡು ವೃದ್ಧಿಸಿ ಪೂರ್ಣಗೊಂಡಾಗ ತಿಂಗಳ್ ಆಗುತ್ತಾನೆ. ಅದಕ್ಕಾಗಿ ಬೇಕಾಗುವ ಅವಧಿಯೇ ತಿಂಗಳು. ನಮ್ಮ ಕಾಲವಾಚಕ ತಿಂಗಳು ಚಂದ್ರನನ್ನೇ ಅವಲಂಬಿಸಿರುವದು.

ಪ್ರಾಣಿ ಸೃಷ್ಟಿಯ ನಿರ್ಮಿತಿ, ಸಮುದ್ರದ ಭರತಿ ಓಹಟಿಗೆ ಕಾರಣನಾದ ಸೃಷ್ಟಿಯ ಚರಾಚರಗಳಿಗೆಲ್ಲ ಅಮೃತಸಿಂಚನ ಮಾಡುವ ಚಂದ್ರ ಸೌಮ್ಯರೂಪಿ. ಮನುಷ್ಯ ಆತನಿಗೆ ಹತ್ತಿರದವನೆಂದು ತಿಳಿದು ವರ್ತಿಸಿದನು.

ಶಿಶುವಿನ ಗರ್ಭಸ್ಥಕಾಲವನ್ನು ಸೂಚಿಸಲು ಚಂದ್ರನಿಂದಾದ ಹುಣ್ಣಿಮೆ ಅಮಾವಾಸ್ಯೆಗಳನ್ನೇ ಕಾಲಮಿತಿಯಾಗಿರಿಸಿಕೊಂಡು ಅಳೆದರು. ರಕ್ತಸ್ರಾವದ ಮೇಲೆ ಅವನ ಹಿಡಿತ. ಋತುಮತಿ ಶಬ್ದವೆ ಸಾಕು ಅವನ ಪ್ರಭಾವ ಹೇಳಲು.

ಚಂದ್ರ ಎಲ್ಲರಿಗೂ ಹತ್ತಿರದ ಚಂದಮಾಮನಾದ. ಅಳುವ ಮಕ್ಕಳ ರಮಿಸುವ ಅಕ್ಕರೆಯ ಮಾಮನಾದ.

ಚಂದ್ರು : ಹೌದು ನೋಡು. ಅದಕ್ಕ

ಚಂದಪ್ಪ ಚಂದಪ್ಪ ಚಾರೀಕಾಯಿ
ಬಟ್ಟಲ ತುಂಬ ಬಾರೀಕಾಯಿ

ಎಂದು ಹಾಡುತ್ತ ಅಳುವ ಮಗುವನ್ನು ರಮಿಸುವ ತಾಯಿಯ ಚಿತ್ರ ಎಲ್ಲರಿಗೂ ಗೊತ್ತು.

ರಾಮನು ಚಿಕ್ಕ ಮಗುವಾಗಿದ್ದಾಗ ಚಂದ್ರನನ್ನು ಆಡಲು ಬೇಡಿದ್ದು ಅವನು ನಮ್ಮ ಸಂಸ್ಕೃತಿಯಲ್ಲಿ ಅನಾದಿ ಕಾಲದಿಂದಲೂ ಜನಪ್ರಿಯನೆಂಬುದಕ್ಕೆ ಸಾಕ್ಷಿ.

ತಾಯಿ ಸತ್ತರೂ ಸೋದರ ಮಾವನಿರಬೇಕಂತೆ. ಸೋದರ ಮಾವನಿದ್ದರೂ ಇಲ್ಲದಿದ್ದರೂ ಚಂದಮಾಮನಂತೂ ಎಲ್ಲ ಮಕ್ಕಳಿಗೂ ಬೇಕೆ ಬೇಕು.

ಅಕ್ಕ : ಪ್ರೀತಿಯಂಥ ಕೋಮಲ ಭಾವನೆಗಳನ್ನು ಉದ್ರೇಕಿಸುವ ಗುಣ ಚಂದ್ರನಲ್ಲಿದೆ. ಹುಣ್ಣಿಮೆಯ ಬೆಳದಿಂಗಳ ಧಾರೆ ಚೇತೋಹಾರಿಣಿ. ಚೈತ್ರ ವೈಶಾಖದ ಬೆಳದಿಂಗಳು ಚಿತ್ತಾಪಹಾರಿಣಿ. ಒಂದು ಭೌತಿಕ ಆನಂದಕ್ಕೆ ಇನ್ನೊಂದು ಭಾವನಾತ್ಮಕ ಆನಂದಕ್ಕೆ ಮೀಸಲು.

ಬಿಸಿಲಿನ ಬೇಗೆಗೆ ಬೆಂದ ಒಡಲು ರಾತ್ರಿಯ ಹಿತಕರ ಶೀತಲ ಕಿರಣಗಳಿಂದ ತಣಿಯುತ್ತದೆ, ಸುಖಿಸುತ್ತದೆ.

ಸುಡು ಸುಡು ಸೂರ್ಯನನ್ನು, ಕಾದ ನೆಲವನ್ನು ನೋಡಿ ಧಗಧಗಿಸುವ ಕಣ್ಣಿಗೆ ರಾತ್ರಿಯ ಬೆಳದಿಂಗಳ ನೆರಳು- ಬೆಳಕಿನ ಆಟ ಹಿತಕಾರಿ.

ನೋಡಿದತ್ತ ಬೆವರಿನ ಬರಿಮೈಯಂತೆ ಹುಡಿಹಾರುವ ನೆಲ ನೋಡಿದೆಡೆಗೆಲ್ಲ ಭಣಭಣ. ಅಲ್ಲೊಂದು ಇಲ್ಲೊಂದು ಗಿಡಗಂಟಿ. ರಾತ್ರಿಯ ತಿಂಗಳಿನ ತಂಗದಿರನಲ್ಲಿ ಮಿಂದಾಗ ಮಾತ್ರ ಕಣ್ಣಿಗೆ ಹಿತವುಂಟು ಮಾಡುತ್ತದೆ.

ಹೋದ ಹೋದಲ್ಲೆಲ್ಲ ಚಂದ್ರನು ಬೆನ್ನು ಹಿಂದೆಯೇ ನಡೆದು ಬಂದ ಅನುಭವ. ರಾತ್ರಿ ನಿದ್ದೆಯಿಂದ ಎಚ್ಚರವಾಗಿ ಕಿಡಕಿಯಾಚೆ ಹಣೆಯೆತ್ತಿ ನೋಡಿದರೆ ತಂಗಿರಣ ಸೂಸುತ್ತ ಚಂದ್ರ ಮುಖದೆದುರು ನೋಡಿ ಮುಗುಳು ನಗುತ್ತಿರುವ ಅನುಭವ. ಬೆಳಗಾದ ಮೇಲೆ ಎದ್ದು ಬಾಗಿಲ ಹೊರ ಬಂದು

ನಿಂತರೆ ಸೂರ್ಯನಿಗೆ ವಿದಾಯ ಹೇಳಿ ಬಾನಿನ ಆಚೆ ತೆರಳುತ್ತಿರುವ ನಿಸ್ತೇಜ ಚಂದ್ರನ ದರ್ಶನ.

ಚಂದ್ರು : ನಿಸರ್ಗ ಮತ್ತು ಮನುಷ್ಯ ಸಂಬಂಧವು ಘನಿಷ್ಟವಾದುದು. ನಿರಂತರ ನಡೆದು ಬಂದುದು. ಮನುಷ್ಯನ ಅಸ್ತಿತ್ವವೇ ನಿಸರ್ಗದೊಂದಿಗೆ ಬೆಸೆದಿದೆ.

ಊರುಗಳ ನಿರ್ಮಾಣ ನದಿ ಹಳ್ಳಗಳೊಂದಿಗೆ ಬೆಸೆದಿದೆ. ಗುಡ್ಡ ಕಾಡುಗಳ ಸಮೀಪ ಸುಖಿಯೆಂದು, ಜೀವನ ಸುಗಮವೆಂದು ಮನುಷ್ಯ ಭಾವಿಸಿದ್ದಾನೆ. ಪ್ರಕೃತಿ ತತ್ವಗಳನ್ನೇ ಅಳವಡಿಸಿಕೊಂಡು ಮನುಷ್ಯ ಜೀವನ ನಡೆಸಿದ್ದು ಹೌದು. ಸೂಕ್ಷ್ಮದಲ್ಲಿ ಅತಿ ಸೂಕ್ಷ್ಮ, ಭವ್ಯದಲ್ಲಿ ಅತಿ ಭವ್ಯ ತತ್ವಗಳು ಪ್ರಕೃತಿಯ ಪಾಠದಿಂದಲೇ ಸೃಜಿಸಿದವುಗಳು.

ಅಕ್ಕ : ವುಡ್ಸವರ್ತ್ ಮತ್ತು ಸ್ಕೋಲ್ಸಬರ್ಗ ಎಂಬ ಮನೋವಿಜ್ಞಾನಿಗಳ ಬಗೆಗೆ ಗೊತ್ತೇನು ಚಂದ್ರು ? ಅವರು ಸೂರ್ಯಪ್ರಕಾಶವನ್ನವಲಂಬಿಸಿ ಬಣ್ಣಗಳ ನಿರ್ಣಯವನ್ನು, ಬಣ್ಣಗಳನ್ನವಲಂಬಿಸಿ ವ್ಯಕ್ತಿಯ ಮನೋಧರ್ಮವನ್ನು ತಿಳಿಯುವ ಬಗೆಗೆ ಹೇಳಿದ್ದಾರೆ. ಮನುಷ್ಯನಲ್ಲಿ ಸಂವೇದನಾಶೀಲತೆಯು ಬೆಳಕು ಕಡಿಮೆ ಇದ್ದಾಗ ಕಡಿಮೆಯಾಗುತ್ತದೆ. ಜನವರಿಯಲ್ಲಿ ಸೂರ್ಯನ ಪ್ರಖರತೆ ಹೆಚ್ಚಿದಾಗ ನೈಜವರ್ಣದಿಂದ ಸ್ಮೃತಿ ಪಟಲದ ಮೇಲೆ ಹೆಚ್ಚು ಪ್ರಭಾವವಾಗುತ್ತದೆ.

ಬಣ್ಣಗಳ ಮಗ್ಗಲು ಬದಲಾವಣೆಯಿಂದ ವೈರುಧ್ಯವರ್ಣದಿಂದ ಬೆಳಕಿನಲ್ಲಿ ಛಾಯೆಗಳು ಮೂಡಿ ಮಸುಕು ಮಸುಕಾಗಿ ಕಾಣುತ್ತದೆ. ಬೆಳಕು ಬಣ್ಣಗಳು ವ್ಯಕ್ತಿತ್ವವನ್ನರ್ಥ ಮಾಡಿಕೊಳ್ಳುವಾಗ ಹೆಚ್ಚು ಸಹಕರಿಸುತ್ತವೆ.

ಹಳ್ಳಿಗಳ ವಾತಾವರಣ ನಿಸರ್ಗಕ್ಕೆ ಸಮೀಪ. ಇಂದು ಆಧುನೀಕರಣದಿಂದ, ಪಟ್ಟಣದ ಪ್ರಭಾವದಿಂದ ಪ್ರಾಕೃತಿಕತೆಗೆ ಕೊರತೆ ಬಂದಿದೆ. ಆದರೂ ಎಲ್ಲಿಯೇ ಇದ್ದರೂ ಹುಲ್ಲುಗರಿಕೆಗಳು ಕಂಡಾಗ, ಹಸಿರೆಲೆಯ ಕೊಂಬೆಗಳು ಅಲುಗಾಡಿದಾಗ ಹಳ್ಳಿಯ ಸ್ನಿಗ್ಧತೆ ಮುಗ್ಧತೆ ನಮ್ಮ ಕಣ್ಣಿಗೆ ಕಟ್ಟುತ್ತದೆ.

ಸಂಜೆ ಮುಂಜಾವಿನ ಪೂರ್ವ ಪಡುವಣದ ಸೊಬಗು ಮನ ತಟ್ಟುತ್ತದೆ. ತಂಗಾಳಿಯ ಸೋಂಕು ಮೈನವಿರೇಳಿಸುತ್ತದೆ. ಜಿನಗುವ ಧಾರೆಯಾಗಿ ಸುರಿವ ಮಳೆಯಧಾರೆ ಕಿವಿಯಲ್ಲಿ ನಿನದಿಸುತ್ತದೆ. ಕಾಲನ ಅನಾದಿಯ ನಿಗೂಢತೆಯ

ಕವಿತೆ ಹಾಡುತ್ತದೆ. ಕಪ್ಪು ಗುಡ್ಡ, ದಟ್ಟ ಕಾಡಿನ ಕಥೆಯನ್ನು ಹೇಳುತ್ತ ಸುಂಯಿ ಸುಂಯಿ ಗಾಳಿ ಬೀಸುತ್ತದೆ. ಜುಳು ಜುಳು ಹರಿಯುವ ನದಿಯು ತನ್ನ ದಡದಲ್ಲಿ ಬಾಳಿ ಬದುಕಿದ ಜೀವಿಗಳ, ಬೆಳೆದ, ಬೆಳೆ ಹಾಳಾದ ಜೀವಿಗಳ ಸತ್ಯ ಕಥೆಯನ್ನು ಎತ್ತಿ ಹೇಳುತ್ತದೆ.

ಪಟ್ಟಣದ ಮನುಷ್ಯನಿಗೂ ನಿಸರ್ಗವು ಕ್ಷಣ ಕ್ಷಣಕ್ಕೂ ತನ್ನ ಬಾಹುಗಳಲ್ಲಿ ಬಂಧಿಸುವ ಎಚ್ಚರಿಕೆ ಇದೆ. ದಿನಕ್ಕೊ, ತಿಂಗಳಿಗೊ, ವರ್ಷಕ್ಕೊ ಒಮ್ಮೆ ಸಿಗುವ ಹಗಲಿನ ಕೆಲವು ನಿಮಿಷಗಳಲ್ಲಿ ಕಿಡಕಿಯಾಚೆ ತಲೆಯಿಟ್ಟು ನೋಡಿದರೆ ಪಕ್ಕದ ಮನೆಯ ಚಪ್ಪರದ ಮೇಲೆ ಕಾಣುವ ನೆರಳು ಬೆಳಕಿನ ಆಟದ ಮೋಜು ಬೇರೆ ಬೇರೆ.

ಹಂಚಿನ ಮನೆಯಾಗಿದ್ದರೆ ಹಂಚಿನ ಸೂರುಗಳ ನಡುವಿನ ಕಿಂಡಿಗಳಿಂದಿಳಿದು ಬರುವ ಹೊಂಬಣ್ಣದ ಸಲಾಕೆಗಳಂಥ ಕೋಲು ಕೋಲು ಕಿರಣಗಳ ಬೆಳಕಿನ ಆಟದ ಮೊಜು ಬೇರೆ. ಸಗಣಿಯ ನೆಲದ ಹಸಿರು ಬಣ್ಣದ ಮೇಲೆ, ಸುಣ್ಣ ಬಳಿದ ಗೊಡೆಗಳ ಮೇಲೆ ಕಿರಣಗಳ ವಿಧವಿಧದ ಚಿತ್ತಾರ ! ಕೈಯಲ್ಲಿ ಹಿಡಿದು ಮುಷ್ಟಿ ಬಿಗಿದರೆ ಬಂಗಾರ ಗಟ್ಟಿ ಹಿಡಿದ ಅನುಭವ. ಬಿಸಿಲಿನ ಅನುಭವ ಕುವೆಂಪು ಅವರ ಬಾಯಿಂದ ಕೇಳು :

ಹೊತ್ತೇರಿದಂತೆ ನೆತ್ತಿಗೆ ಚುರುಕು ಬಡಿದಿತ್ತು
ತಳಿರು ನಾಲಿಗೆ ಚಾಚಿ ತೇಕುತಿತ್ತು.
ಮರದ ಕೆಳಗಡೆ ನೆರಳು ಮೈಚಾಚಿ ಮಲಗಿತ್ತು.
ಬಿಸಿಲು ಕುದುರೆಯು ವ್ಯರ್ಥ ಓಡುತಿತ್ತು.

ಚಂದ್ರು :ಎಷ್ಟು ಸರಿಯಾಗಿ ಹೇಳಿದೆಯಕ್ಕ! ಅದಕ್ಕೆ ಇರಬೇಕು. ನಮ್ಮ ಮಹಾಕಾವ್ಯಗಳಲ್ಲಿ ಅಷ್ಟಾದಶ ವರ್ಣನೆ ಇರಲೇಬೇಕೆಂಬುದು ಕವಿಗಳ ನಂಬಿಕೆ. ''ಸಮುದ್ರ, ಪರ್ವತ, ಪಟ್ಟಣ, ರಾಜ, ವಿವಾಹ, ಪುತ್ರೋತ್ಸವ, ಸೂರ್ಯೋದಯ, ಚಂದ್ರೋದಯ, ಋತು, ಉದ್ಯಾನವನ, ಜಲಕ್ರೀಡೆ, ಮಧುಪಾನಗೋಷ್ಠಿ, ಸುರತ, ವಿರಹ, ಮಂತ್ರಾಲೋಚನೆ, ದೂತಪ್ರೇಷಣೆ, ಯುದ್ಧ, ಪ್ರಯಾಣ- ಇವೇ ಹದಿನೆಂಟು ವಿಷಯಗಳು ಕವಿ ವರ್ಣನೆಗೆ ಪ್ರೇರಣೆ.

ಮಹಾಕಾವ್ಯವನ್ನೇ ಬರೆಯುವ ನಿರ್ಧಾರದಿಂದ ಹೊರಟ ಕವಿಗಳಿಗೆ ಈ ವರ್ಣನೆಗಳು ಕಾವ್ಯದ ನಡಿಗೆಗೆ ಮೈಲುಗಲ್ಲುಗಳಾಗಿ ದಿಕ್ಸೂಚಿಗಳಾಗಿದ್ದವು. ಬರಬರುತ್ತ ಕಥೆಯ ಚೌಕಟ್ಟಿಗೆ ಅನಗತ್ಯವಾದರೂ ಹದಿನೆಂಟು ವರ್ಣನೆಗಳನ್ನು ತುಂಬತೊಡಗಿದಾಗ ಅವು ಸಹಜ ಆಕರ್ಷಣೆಯನ್ನು ಕಳೆದುಕೊಂಡವು. ಮುಂದೆ ತಮಗೆ ಅನುಕೂಲಿಸಿದ ವಿಷಯಗಳನ್ನು ಮಾತ್ರ ಕಾವ್ಯಕ್ಕೆ ತಂದು ತೃಪ್ತರಾಗಬೇಕಾಯಿತು.

ಅಷ್ಟಾದಶ ವರ್ಣನೆಯ ಹದಿನೆಂಟು ವಿಷಯಗಳಲ್ಲಿ ಹದಿಮೂರು ಶೃಂಗಾರ ರಸಕ್ಕೆ ಪ್ರೇರಕ ಮತ್ತು ಪೂರಕ . ಈ ಶೃಂಗಾರ ರಸಕ್ಕೆ ವಸಂತನು ಹೃದಯ ಸಮಾನ. ಇದೇ ಕಾರಣಕ್ಕಾಗಿ ಕವಿಗಳು ವಸಂತ ಋತುವನ್ನು ಬಣ್ಣಿಸದೆ ಮುಂದೆ ಹೋಗಲಾರರು. ಕಾವ್ಯಪ್ರಪಂಚದಂತೆ ನಾಟಕ, ಗದ್ಯ ಸಾಹಿತ್ಯದ ಎಲ್ಲ ಪ್ರಕಾರಗಳಿಗೂ ಅನ್ವಯಿಸುತ್ತದೆ.

ಕುವೆಂಪು ಅವರ 'ಚಿತ್ರಾಂಗದೆ' ಕಾವ್ಯದಲ್ಲಿ ಅರ್ಜುನನು

''ಚೈತ್ರ ಪ್ರಭಾತದೀ ರಮ್ಯತಾಸ್ವಾದನೆಯೊ
ಮೃಗಯಾ ವಿನೋದಮೋ ನಿನಗಾವುದಳ್ತಿ ಪೇಳ್''

ಎಂದು ಅವಳ ಮೊದಲ ಭೇಟಿಯಲ್ಲಿ ಕೇಳುತ್ತಾನೆ. ಶ್ರೇಷ್ಠ ಕೃತಿಗಳ ನಾಯಕ ನಾಯಕಿಯರ ಮೊದಲ ಭೇಟಿ ನಿಸರ್ಗ ಮಧ್ಯದಲ್ಲಿಯೇ ಆಗಬೇಕೆಂಬ ಹಂಬಲ!

ಮಧುಮಾಸದೊಸಗೆಯನು ಕವಿಕೋಗಿಲೆ ಸಾರುವದು. ಆ ಕವಿ ಕೋಗಿಲೆಗೆ ಮಾಮರದ ಚಿಗುರಿನ ಕಚಗುಳಿ. ಹೂವಿನೆದೆ ಚುಂಬಿಸಿದ ತುಂಬಿಗಳ ಇನಿದನಿ.

ಸಾ. ಸಿ. ಮರುಳಯ್ಯನವರು :

ಸಸ್ಯ ಸಂಕುಲಕೆಲ್ಲ ಸಪ್ತ ವರ್ಣವನೆರಚಿ
ಚಿತ್ತ ಚಿತ್ತಾರವನೆ ಬರೆವ ಚೈತ್ರ
ಮಾವು ಬೇವಿಗು ಮಧುರ ಬಾಂಧವ್ಯವನೆ ಬೆಸೆವ
ಸಮರಸದ ಹರಿಕಾರ ಓ ಪವಿತ್ರಾ

ಕವಿ ಹೃದಯದ ಮೇಲೆ ಚಿತ್ತಾರ ಬರೆವ ಚೈತ್ರ ಅವನ ಬಂಟ ವಸಂತರನ್ನು ಹೊಗಳದೇ ಇರುವುದು ಯಾರಿಗೆ ಸಾಧ್ಯ!

ಅಕ್ಕ : ಕೋಗಿಲೆ ಕವಿಯ ಭಾವನೆಗೆ ಪ್ರಚೋದನೆ ಕೊಟ್ಟು ತನ್ನತ್ತ ಸೆಳೆಯುವದು. ಕೋಗಿಲೆ ಅಲಂಕಾರ ಶಾಸ್ತ್ರದಲ್ಲಿ ಪ್ರಸಿದ್ಧ ಉಪಮಾನ. ಹಾಗೆಂದೇ ವಾಲ್ಮೀಕಿ ಕೋಕಿಲವಾಗಿಯೂ, ರಾಮಾಯಣ ಕಾವ್ಯವೊಂದು ಕವಿತಾಶಾಖೆಯಾಗಿಯೂ 'ರಾವು ರಾವೂ'ಯೆಂದು ಮಧುರ ಮಧುರತರವಾಗಿ ಕೂಜನಗೈದಂತೆ ಕಂಡಿದೆ ನಮ್ಮ ಕವಿಗಳಿಗೆ.

'ಕಾವ್ಯ ಪ್ರಕಾಶ'ದಲ್ಲಿ ಮಮ್ಮಟನು ಸಸಂದೇಹವೆಂಬ ಅಲಂಕಾರದಲ್ಲಿ ಒಂದು ನಿದರ್ಶನ ಕೊಟ್ಟಿದ್ದಾನೆ.

''ಇವಳನ್ನು ಸೃಜಿಸುವಲ್ಲಿ ಕಾಂತಿಯನ್ನು ನೀಡುವ ಚಂದ್ರನು ಕಾಮನಾಗಿದ್ದನೆ? ಅಥವಾ ಶೃಂಗಾರ ರಸವೊಂದನ್ನೇ ಹೊಂದಿದ ಸಾಕ್ಷಾತ್ ಪ್ರಜಾಪತಿಯಾಗಿದ್ದನೆ ? ಇಲ್ಲವೆ ಹೂವುಗಳಿಗೆ ಆಗರವಾದ ಚೈತ್ರಮಾಸವೆ? ವೇದಾಭ್ಯಾಸದಿಂದ ಮಂದನಾದವನೂ, ವಿಷಯಗಳಲ್ಲಿ ಕುತೂಹಲವನ್ನು ಕಳೆದುಕೊಂಡವನೂ ಆದ ಮಹಾಪುರುಷನು ಅದೆಂತು ಈ ಮನೋಹರ ರೂಪವನ್ನು ನಿರ್ಮಿಸಲು ಸಮರ್ಥನಾದನು.

'ಇವಳು' ಎಂಬ ಸುಂದರಿಯನ್ನು ಸೃಜಿಸಿದವರು ಚೈತ್ರ ಮತ್ತು ಮದನರೇ ಇರಬೇಕೆಂದು ಕವಿಯ ಕಲ್ಪನೆ.

ಚಂದ್ರು : ಚೈತ್ರ ಮತ್ತು ಕಾಮರ ಶಕ್ತಿಯೆದುರು ನಾರಾಯಣನದೇನು?

ವರಕವಿ ಬೇಂದ್ರೆಯವರು ''ವಸಂತ ಮುಖ''ವನ್ನು ಹೀಗೆ ಕಂಡಿದ್ದಾರೆ.

ಉದಿತ ದಿನ ಮುದಿತ ವನ
ವಿಧ ವಿಧ ವಿಹಗಸ್ವನ
ಇದುವೆ ಜೀವ, ಇದು ಜೀವನ
ಪವನದಂತೆ ಪಾವನ
ಏನೋ ವಿಧ, ಏನೋ ಹದ
ಗಾಳಿಗೊಡೆದ ಬುದ್ಬುದ
ಬೆಳಕೆ ಬದುಕು ಎಂಬ ಮುದ
ಜೀವ ಹೊಮ್ಮಿ ಚಿಮ್ಮಿದ
ನೂರು ಮರ ನೂರು ಸ್ವರ
ಒಂದೊಂದು ಅತಿ ಮಧುರ
ಬಂಧವಿರದೆ ಬಂಧುರ
ಸ್ವಚ್ಛಂದ ಸುಂದರ

ಹೀಗೆ ಅರಳಿನಿಂತ ವನ, ವನವಿಹಾರಿ ವಿಹಗಗಳ ಧ್ವನಿ, ಇನಿ ದನಿ, ತಂಗಾಳಿ, ಬೆಳಗುವ ಹಿತವಾದ ಬದುಕು ಜೀವನೋತ್ಸಾಹ ತುಂಬಿದೆ. ಮರಗಳಲ್ಲಿ ವಿವಿಧ ಪಕ್ಷಿಗಳ ಮಧುರಧ್ವನಿ ಸುಂದರವೆಂದು ಅದೇ ಜೀವರಸಕ್ಕೆ ಅಂದವೆಂದು ಕವಿ ಹಾಡಿದ್ದಾರೆ.

ಅಕ್ಕ : ಒಬ್ಬ ಕವಿ ಮಾಂದಳಿರ ತೋರಣ, ಹೂಮಿಡಿಯ ಗುಡಿಕಟ್ಟಿ ಮಧುಮಾಸದ ದಿಬ್ಬಣ ಹೊರಡಿಸಿದ್ದಾನೆ. ಚಂದ್ರನ ಮುಗಿಲ ಮಂದಿರದಲ್ಲಿ ಕುಮುದಿನಿಯರ ಕುಣಿತದ ಹಿಮ್ಮೇಳದಲ್ಲಿ ಕವಿ ತನ್ನ ಮದುವೆಯ ಸಂಭ್ರಮ ನೆನೆಯುತ್ತಾನೆ.

ಹೊಸಗನ್ನಡ ಕವಿಗಳ ದೃಷ್ಟಿಕೋನವನ್ನು ಪ್ರತಿನಿಧಿಸುವಂತೆ 'ಅರವಿಂದ ಸಜ್ಜನ' ರು ಕಾಮನ ಬಗೆಗೆ ಹೀಗೆ ಹೇಳಿದ್ದಾರೆ.

ಪ್ರಾಯದ
ಬಿಸಿರಕ್ತದ ದೇಹದಿ
ಮೆಲ್ಲಗೆ ದಹಿಸುವ
ಹೊಗೆ ಕಡಿತ
ವಿಷಪೂರಿತ
ಭಯಂಕರ ಜ್ವಾಲೆ

ಮನ್ಮಥನು 'ಅನಂಗ' ನಾದದ್ದು ಶಂಕರನಿಂದಲೇ ಆದರೂ ಅವನನ್ನು ನಿರಾಕಾರನೆಂದು ನಂಬದ ಕವಿ ಅವನ ರೂಪ ತೋರಿಸು ಎಂದು ದುಂಬಾಲುಬಿದ್ದು ಕೇಳಿದ್ದಾನೆ. ಕೊನೆಗೆ ಅದಕ್ಕೆ ತಾನೇ ಕಂಡುಕೊಂಡ ರೂಪವನ್ನು ಹೀಗೆ ಬಣ್ಣಿಸಿದ್ದಾನೆ.

''ಪುಷ್ಪ ಮಾಲೆಯೇ ಬಿಲ್ಲು, ಝೇಂಕರಿಸುವ ದುಂಬಿಗಳ ಸಾಲೇ ಹೆದೆ. ಅಬಲೆಯರ ಹೃದಯವೇ ಭೇದಿಸಬೇಕಾಗಿರುವ ಗುರಿ. ಶಬ್ದ ಮುಂತಾದ ಪಂಚಗುಣಗಳೇ ಐದು ಬಾಣಗಳು, ಇಷ್ಟರಿಂದಲೇ ತ್ರಿಲೋಕವನ್ನು ಗೆಲ್ಲುವ ಸಾಮರ್ಥ್ಯ ಅನಂಗನಾದ ಕಾಮನದು. ಪ್ರಿಯತಮೆಯ ಕುಡಿನೋಟದಲ್ಲಿಯೇ ನೆಲೆಸಿರುವ ಆತನು ನಮ್ಮ ಕಾಮನೆಗಳನ್ನು ಸಲ್ಲಿಸಲಿ''

ಮತ್ತೊಬ್ಬ ಕವಿ ಮನ್ಮಥನ ಬಗೆಗೆ ಇನ್ನೊಂದು ಬಗೆಯ ಚಿತ್ರವನ್ನು ಕೊಡುತ್ತಾನೆ.

''ಮನ್ಮಥನೇ ನಿನ್ನ ಪುಷ್ಪಚಾಪವನ್ನು ಕೈಗೆತ್ತಿಕೋ. ನಿನ್ನ ಮಕರ ಧ್ವಜವನ್ನು ಮೇಲೆ ಹಾರಿಸು. ಹೃದಯವೆಂಬ ಗುರಿಯನ್ನು ಭೇದಿಸಬಲ್ಲ ನಿನ್ನ ಐದೂ ಬಾಣಗಳು ಕೈಯಲ್ಲಿ ಬರಲಿ. ಆಗ ಸುಟ್ಟುದು ಯಾವುದೋ ನಿನ್ನ ಆಕಾರದ ಪ್ರತಿಮೆ ಮಾತ್ರ. ನೀನು ಕಾಮನಲ್ಲವೇ? ಹೀಗೇಕೆ ಅಡಗಿರುವಿ? ನಿನ್ನ ರೂಪವನ್ನು ತೋರಿಸು. ಇಲ್ಲಿ ಶಂಕರನ ಭಯವಿಲ್ಲ. ಏಕೆಂದರೆ ಇಲ್ಲಿರುವವರೆಲ್ಲ ವೈಷ್ಣವರೆ''. ಹೀಗೆ ಅಡಗಿರುವ ಕಾಮನನ್ನು ಹೊರಹೊರಡಿಸಲು ಹುರಿದುಂಬಿಸುತ್ತಿದ್ದಾನೆ, ಅವನಿಗೆ ತಿಳಿಹೇಳುತ್ತಿದ್ದಾನೆ.

ಒಮ್ಮೆ ಮನ್ಮಥನೇ ನಗುನಗುತ್ತ ರತಿಯ ಕೈಮೇಲೆ ಕೈಹಾಕಿ ಚಪ್ಪಾಳೆ ತಟ್ಟಿ ಹೇಳುತ್ತಾನೆ.

''ಇದೋ ನೋಡು, ಮೂಜಗದಲ್ಲೂ ಸಂಯಮಕ್ಕೆ ಹೆಸರಾಂತ ಶಂಕರನೇ ಈತನು! ಈಗ ಕಾಂತಾವಿಹಾರದಿಂದ ಕಾತರನಾಗಿ ಕಾಂತೆಯನ್ನು ತನ್ನ ದೇಹಾರ್ಧದಲ್ಲೇ ತಳೆದಿದ್ದಾನೆ.'' ''ಈ ಪುಣ್ಯಾತ್ಮನಿಂದ ನಾನು ಸೋತೆನಂತೆ!''

ರೂಪಕ ಅಲಂಕಾರದಲ್ಲಿ ಉದಾಹರಣೆಗೆ ಸುಕುಮಾರನೊಬ್ಬನನ್ನು ''ಅನಂಗನಲ್ಲದ ಕುಸುಮ ಕೋದಂಡ'' ನೆಂದು ಹೇಳಿದ್ದಾರೆ.

ಹರಿಹರನು ನಂಬಿಯ್ಯಣ್ಣನ ಯೌವನೋದಯವನ್ನು ಹೇಳುತ್ತಾ

''ಹೆದರಿದನು ತನಗೆ ಮಕರ ಕೇತನನು ಅಲ್ಲಿ.
ಉದರ ಉದಯವಾಗುತ್ತಿದ್ದುದು ಯೌವನವಿಲ್ಲಿ'' ಎನ್ನುತ್ತಾನೆ.

ಚಂದ್ರ : ಹರಿಹರನು ಮಲುಹಣಿಯ ಏರು ಜವ್ವನದಲ್ಲಿ ಅವಳನ್ನು ಅಲಂಕರಿಸಿ ಬಣ್ಣಿಸಿದ ಇನ್ನೊಂದು ಚಿತ್ರ ಹೀಗಿದೆ:

''ವಸಂತ ವಿಳಾಸಿನಿಯರಂತೆ ಪಾದಮುದ್ರಿಕೆಯನ್ನಲಂಕರಿಸಿದರು. ಕಾಮನ ಬಾಣಗಳನ್ನು ಕಸ್ತೂರಿಯ ಸಾಣೆ ಹಿಡಿದಂತೆ ಕಣ್ಣಿಗೆ ಕಾಡಿಗೆಯನ್ನು ಹಚ್ಚಿದರು. ಕಾಮನ ಮೈಬಿಳಗು ಮೊರೆ ಹೊಕ್ಕಂತೆ ಕತ್ತಲಾದ ಕಪ್ಪು ಮುಡಿಯಲ್ಲಿ ಹೊಸ ಕುಸುಮದೆಸಳನ್ನು ತುರುಬಿಸಿದರು. ತೊಡಿಸಿದಾಭರಣ, ಮುಡಿಸಿದ ಹೊಸ ಹೂ ತುಸುವೇ ಕಾಣುವಂತೆ ಸಪುರ ವಸ್ತ್ರವನ್ನು ಮುಸುಕಿಟ್ಟು, ಗಿಳಿ, ಹಂಸೆ, ಕೋಗಿಲೆ, ಕುಸುಮ ಕುಲವು, ಮಧುಕರವು, ಮಂದಾನಿಲವು, ಚಂದ್ರಿಕೆ,

ಚಕೋರಿ, ಚಕ್ರವಾಕ, ಎಳಲತೆಗಳು, ಒಗ್ಗೂಡಿ ಬಂದಂತೆ ಕಾಮನ ಹೂವಿನ ಬಾಣವನ್ನು ನಡುವಿಟ್ಟುಕೊಂಡು ಒಲೈಸುತ್ತ ಬರುತ್ತಿರುವಂತೆ ಪದ್ಮಾವತಿ ಮೊದಲಾದವರು ಸಕಲ ಸಂಪ್ರದಾಯದೊಡನೆ ಸಖೀಜನಗಳು ಮಲುಹಣಿಯನ್ನು ಸುತ್ತಿಮುತ್ತಿ ಬರುತ್ತಿರುವಾಗ ಅವಳನ್ನು ಮರೆಗೊಂಡು ಕಬ್ಬಿನ ಬಿಲ್ಲಿಗೆ ಹೆದಯೇರಿಸಿ ಕುಸುಮ ಬಾಣನೇ ಮೆಲ್ಲ ಮೆಲ್ಲನೆ ಬಂದಂತೆ ಕಾಣುತ್ತಿದೆ. ಹೀಗೆ ಮಲುಹಣಿಯೊಂದಿಗೆ ವಸಂತನೊಡಗೂಡಿ ಬಂದ ಕಾಮನ ವರ್ಣನೆ ಇಲ್ಲಿದೆ.

ಹರಿಹರನು ಗಿರಿಜಾ ಕಲ್ಯಾಣದಲ್ಲಿ ''ಶೃಂಗಾರ ಕೋಡಿಟ್ಟಂತೆ, ಲಾವಣ್ಯ ಶೌರ್ಯಾಂಗ ಬಡೆದಂತೆ'' ಕಾಮನು ಆಕರ್ಷಿತನಾಗಿದ್ದಾನೆಂದು ಹೇಳಿದ್ದಾನೆ.

ಅಕ್ಕ: ವಿರೂಪಾಕ್ಷ ಪಂಡಿತನ ಚೆನ್ನಬಸವ ಪುರಾಣದಲ್ಲಿ ಕಾಮದಹನದ ಚಿತ್ರ ವಿಶಿಷ್ಟ ರೂಪದಲ್ಲಿದೆ. ಕಾಮನ ಚೈತ್ರಯಾತ್ರೆ ನಿಜಕ್ಕೂ ಕಣ್ಣಿಗೆ ಹಬ್ಬ. ಕಾಮ ರತಿದೇವಿಯೊಡನೆ ಹೂದೇರನೇರಿ ಶಿವನನ್ನು ಗೆಲ್ಲಲು ಹೊರಟಿದ್ದಾನೆ. ಅವನ ಸೇನೆಯ ಮುಂಚೂಣಿಯಲ್ಲಿ ಋತುರಾಜ ವಸಂತ ಸೇನಾಧಿಪತಿ ಮಾವಿನ ಮರಗಳಿಂಬ ಆನೆಯ ಹಿಂಡು, ಗಿಳಿಗಳಿಂಬ ಕುದುರೆಯ ದಂಡು, ಚಂದ್ರನೇ ಮಂತ್ರಿ, ಕಾಂತಾಜನವೇ ಕಾಲಾಳು.

ಆಂಡಯ್ಯ ಕವಿ ಬರೆದ ಕಬ್ಬಿಗರ ಕಾವ್ಯ ಎಂಬ ಕಾವ್ಯದಲ್ಲಿ ಕಾಮನೇ ನಾಯಕ. ಇದೊಂದು ನೂತನ ಪುರಾತನ ಕಾವ್ಯ. ಹೊಸ ವಸ್ತು ವಿರಚನೆ ಚಂದ್ರನನ್ನು ಸೆರೆಹಿಡಿದು ಹೋದ ಶಿವನ ಮೇಲೆ ಕಾಮನು ದಂಡೆತ್ತಿ ಹೋಗುವ ಚಿತ್ರವೇ ಕಾವ್ಯದ ಆಕರ್ಷಣೆ. ಮೊದಲು ಕಾಮದೇವನು ಶಿವನೆಡೆಗೆ ತಂಗಾಳಿಯನ್ನು ದೂತನನ್ನಾಗಿ ಕಳಿಸುತ್ತಾನೆ. ಈ ದೂತನು ಅಸಾಮಾನ್ಯ! ತಿಳಿಗೊಳಗಳ ಸೀರ್ಪನಿಯನ್ನೆತ್ತಿಕೊಂಡು ಅರಳಿದ ಹೂವಿನ ಹೊಸಗಂಪನು ಹೀರಿದ ತುಂಬಿಗಳ ಇಂಚರದಿಂದ ತಳಿತ ಕೆಂದಳಿರ ತೊಂಗಲಗಳಲ್ಲಿ ತೊಡರಿದ ತಂಪಿನಿಂದ ಬೆರೆತ ನಲ್ಲರ ದೀರ್ಘ ಬೆವರನ್ನು ಸೆಳೆವ ಮಂದಮಾರುತನೆ ವಸಂತದೂತ.

ಕಾಮನ ಪಡೆಯಲ್ಲಿ ಕೆಂಗಣ್ವಕ್ಕಿ, ಅಲರ್ವಕ್ಕಿ ಕನ್ನಡವಕ್ಕಿ, ಪೊಣರ್ವಕ್ಕಿ ಮೊದಲಾದ, ಸೊಂಟಕ್ಕೆ ಶೆಲ್ಲೆ ಬಿಗಿದ ಸೈನಿಕರನ್ನು ಶೂರ ಸೇನಾಧಿಪತಿಯಾದ ವಸಂತನು ನಡೆಸಿಕೊಂಡು ಹೊರಟಿದ್ದಾನೆ. ಹಲವು ಮೇಳದ ಬೀರರು

ಒತ್ತೊತ್ತಾಗಿ ಹಿಡಿದ ಬೆಳ್ಗೊಡೆಯ ಬೆಲುವು ಮೆರೆದಿದೆ. ಅರಗಿಳಿಯ ಹಿಂಡು, ಕುದುರೆಯ ದಂಡು ದುಂಬಿಯ ಹಿಂಡು, ಬಿಲ್ಲುವೀರರ ದಂಡು. ಕ್ರೌಂಚ ದೊಡ್ಡ ಮಳ್ವಕ್ಕಿ ವಿಂಡು, ಗುರಾಣಿಯ ದಂಡು. ಇಂಥ ಸೇನೆಯೊಡಗೂಡಿ ಬರುವಾಗ ಸೇನೆಯ ಕದಪುಗಳ ಬೆವರು ಹೊನಲಾಗಿ ಹರಿದು ಹೋದದ್ದಕ್ಕೆ ಸಮುದ್ರ ತುಂಬಿ ತುಳುಕಿತಂತೆ!

ಚಂದ್ರು : ಮಾಸ್ತಿಯವರಿಗೆ ವಸಂತ ದೂತನು ಹೀಗೆ ಕಾಣುತ್ತಾನೆ – ''ಮುಂಬೇಸಗೆಯ ಮೆಲುನಡೆಯ ಮಾರುತನು ಮಧುಮಾಸದೈತರವ ಸಾರುತ, ಲೋಕಕೆ ಹರುಷದೈಸಿರಿಯ ಬೀರುತ, ಸೊಗಸಿನ ತೇರನು ಜಗಕೆಲ್ಲ ತೋರುತ ಬರುತ್ತಾನೆ.''

ಆನಂದಕಂದರೆಂಬ ಕವಿಯ ''ಒಡನಾಡಿ''ಯಲ್ಲಿ ಒಂದು ಪದ್ಯ ಹೀಗಿದೆ :

ಬಾಳಿದು ಕನಸಲ್ಲ ಗೋಳಿನ ತಿನಿಸಲ್ಲ
ನನ್ನಿ ಹಿಗ್ಗಿನ ಹೊಸ ತೋಟ
ನಾನೊಂದು ಮಾಮರ ನೀ ಮಲ್ಲಿಗೆಯ ಬಳ್ಳಿ
ಬೆನ್ನೆ ಬೆನ್ನೆನಿತು ಈ ಕೂಟ ?

ಹಣ್ಣುಗೊನೆಯ ಹೊತ್ತು ಜೀವ ಜಂಗುಳಿಗಿತ್ತು
ಹಸಿವಿನುರಿಯ ನಾ ಹಿಂಗಿಸುವೆ
ಹೂವಿನ ಹುರುಳಿಂದ ಹೃದಯವನರಳಿಸಿ,
ರಸಿಕ ಕುಲವ ನೀ ರಂಜಿಸುವೆ

ಕಳಿವಣ್ಣಗಳನುಂಡು ಕೋಗಿಲೆ ಗಿಳಿವಿಂಡು
ಕಲಕಲ ನುಡಿಯನಾಡುವವೆ?
ಹೂವಿನೈಸಿರಿ ಕಂಡು ಮರಿದುಂಬಿಗಳ ದಂಡು
ಇನಿದನಿವೆರಸಿ ಹಾಡುವುವೆ!

ಜೀವನ ಚೈತ್ರವನ್ನು ಸಂಕೇತಿಸುತ್ತ ಕವಿ ಚೈತ್ರಮಾಸದ ಬನಸಿರಿಯನ್ನು ಬಣ್ಣಿಸಿದ್ದಾರೆ.

ಅಕ್ಕ: ಚೈತ್ರವು ವಸಂತ ಋತುವಿಗೆ ಆತ್ಮವಿದ್ದಂತೆ. ಮಧುಮಾಸವೆಂಬ ಅಭಿದಾನ ಅನ್ವರ್ಥಕ, ಸಾರ್ಥಕ. ಋತುಗಳ ರಾಜನಾದ ವಸಂತನು ಸ್ಪಂದಿಸುವ ಹೃದಯ, ಚೈತ್ರ ಹೂವುಗಳ ಯಾತ್ರೆ. ಆಗ ವಸಂತ ಪರಾಗದ ಮೇಲೆ

ಓಲಾಡುತ್ತಾನೆ. ಚೈತ್ರ ಋತುಪತಿಯ ಹೆಬ್ಬಾಗಿಲು, ಎಲೆಗಳುದುರಿ ಬರಿದಾಗಿನಿಂತ ಗಿಡಗಳಲ್ಲಿ ಹೊಸ ಚಿಗುರು ತೋರಣ. ಹೂಗಳ ಯಾತ್ರೆ ಹೋಳಿಹಬ್ಬದಿಂದಲೇ ಆರಂಭವಾಗಿದ್ದರೂ ಚೈತ್ರದಲ್ಲಿ ಎಲ್ಲ ಗಿಡಮರಗಳು ಹೂ, ಹೀಚು, ಮಿಡಿ ಕಾಯಿಯಿಂದ ಶೋಭೀತ. ಫಲಿತ ಗಿಡಗಳ ಹಣ್ಣು, ಚಿಗಿತ ಮರಗಳ ಚಿಗುರು ಸವಿದು ತೃಪ್ತಿಯಿಂದ ಕಾಮಕೇಳಿಗೆ ಸಿದ್ಧವಾದ ಪಶು ಪಕ್ಷಿ ಸಂಕುಲದ ಮತ್ತಗಾನದಿಂದ ನಿಸರ್ಗ ನಿನದಿಸುತ್ತದೆ, ಚಿತ್ತಾಕರ್ಷಕವಾಗಿರುತ್ತದೆ.

ಆಲ, ಅಶೋಕೆ, ಮಾವು, ಬೇವು, ಪೇರಲ, ನೇರಲ, ಬಸರಿ, ಹೊನ್ನಿ, ಹುಲುಗಲಿ, ಹಲಸು, ಹುಣಸಿ ಗಿಡಗಳು, ನವಮಾಲಿಕೆ, ಮಾಧವೀಲತೆ, ಮಾಲತಿ, ಪಾಟಲಿ, ಕುಂದ, ಶತಪತ್ರಿಕೆ, ಸುರಭಿಕುಸುಮ, ಕರಣಿಕಾರ, ಚಂಪಕ, ಕೇತಕಿ, ನೀಲೋತ್ಪಲ, ಬಕುಳ, ಕಸ್ತೂರಿಕಾ ಮುಂತಾದ ಹಲವು ವಿವಿಧ ಹೂಬಳ್ಳಿಗಳು ಕೆಂಪು ಕೆಂಪಾಗಿ ಚಿಗಿತು, ಸೊಂಪು ಸೊಂಪಾಗಿ ಹೂಬಿಟ್ಟು ಪ್ರಕೃತಿಯಲ್ಲಿ ಮಾದಕತೆಯನ್ನು ತುಂಬುತ್ತವೆ.

ಪ್ರಕೃತಿ ವರ್ಣನೆಯಲ್ಲಿ ನಿಸ್ಸೀಮ ಕವಿ ಆದಿ ಕವಿ, ಪಂಪನ ಮಾತಿನಲ್ಲಿ ಹೇಳಬೇಕೆಂದರೆ 'ವನಶ್ರೀ ಬಣ್ಣಿಸಲ್ಬಕ್ಕುಮೇ?' ಹೀಗೆ ಹೇಳಿದರೂ ಅವನು ಬನವಾಸಿಯ ತಂಗಾಳಿಯನ್ನು ಮಾವು ಮಲ್ಲಿಗೆಯನ್ನು ಮರೆತಾನೆಯೇ ?

''ಮಗಮಗಿಸಲು ಸಾವಕಾಶವಾಗಿ ದಿಕ್ತಟಗಳವರೆಗೆ ಬಳಸಿ ನಿಲ್ಲಲು, ತುಂಬಿ ತಣಿಸಲು, ನಮ್ಮ ಯಶವನ್ನು ಬೆಳಗಲು ಇದೇ ಸಾಕು'' ಎಂದು ಆರಳಿದ ಮಲ್ಲಿಗೆಗೆ ವಸಂತ ಮತ್ತು ಕಾಮ ಇಬ್ಬರೂ ಸೇರಿ ವಸಂತ ಕಾಲದ ಮಾವು ಮಲ್ಲಿಗೆಗೆ ಪಟ್ಟ ಕಟ್ಟಿದ್ದಾರೆ.

ಪಂಪನು ಆದಿಪುರಾಣದ ೧೦ನೆಯ ಆಶ್ವಾಸನದಲ್ಲಿ ಪುಷ್ಪ ಪ್ರದರ್ಶನ ಏರ್ಪಡಿಸಿದ್ದಾನೆ.

ಬನವಾಸಿಯಲ್ಲಿ ವರ್ಷವಿಡೀ ವಸಂತ ಋತು. ಮಾವು ವರ್ಷವಿಡೀ ಫಲಬಿಡುವದು, ಕೋಗಿಲೇ ವರ್ಷವಿಡೀ ಕೂಜಿಸುವದು, ಕಾಮನ ಪ್ರಭುತ್ವ ಯಾವಾಗಲೂ ಇರುವದು. ಮಳಯಜ, ಮಳಯಾನಿಳವೆಂದೇ ಪ್ರಸಿದ್ಧವಾದ ಶ್ರೀಗಂಧದ ಸೌರಭ. ಶ್ರೀಗಂಧದ ಸೌರಭ ಸೂಸುವ ತಂಗಾಳಿ, ಎಲೆಬಳ್ಳಿ, ಜಾಜಿ, ಸಂಪಿಗೆ, ಹಾಡುವ ತುಂಬಿ, ಸಲ್ಲಾಪಿಸುವ

ಪ್ರಣಯಿಗಳು ಬನವಾಸಿ ನಾಡಿನಲ್ಲಿ ಪಂಪನಿಗೆ ಕಂಡಿದ್ದಾರೆ.

ಚಂದ್ರು : ಸಂಸ್ಕೃತದ ಪ್ರಸಿದ್ಧ ನಾಟಕಕಾರ. ಅಭಿಜ್ಞಾನ ಶಾಕುಂತಲ ಕರ್ತೃ ಕಾಲಿದಾಸನು ರಚಿಸಿದ 'ಋತುಸಂಹಾರ' ಕೃತಿಯು ಆರು ಋತುಗಳನ್ನು ಪರಿಚಯಿತ್ತದೆ. ಆದರಲ್ಲಿ ವಸಂತ ಋತುವಿನ ವರ್ಣನೆಯು ಇಪ್ಪತ್ತೆಂಟು ಶ್ಲೋಕಗಳಲ್ಲಿ ನಿರೂಪಿತವಾಗಿದೆ. ಪ್ರಿಯಕರನು ಪ್ರಿಯಳಿಗೆ ಹೇಳಿದಂತೆ ವಿದಿತವಾಗಿದೆ.

ಚಿಗಿತ ಮಾವಿನ ಅಂಕುರ ರೂಪದ ತೀವ್ರ ಬಾಣಗಳಿಂದ ಭ್ರಮರಗಳ ಮಾಲೆಯ ಬಿಲ್ಲಿನ ಹೆದೆಯಿಂದ ಈ ವಸಂತನು ಸಮಯರೂಪಿ ವೀರ ವಿಲಾಸಿಗಳ ಚಿತ್ತವನ್ನು ಛಿದ್ರಗೊಳಿಸಲು ಬಂದಿದ್ದಾನೆ.

''ವಸಂತದಲ್ಲಿ ಕಾಣುವ ಎಲ್ಲವೂ ಸುಂದರ. ಹೂವಿನಿಂದೊಡಗೂಡಿದ ವೃಕ್ಷ, ಕಮಲಗಳಿಂದ ಕೂಡಿದ ಸರೋವರ, ಕಾಮನೆಯಿಂದ ಕೂಡಿದ ನಾರಿಯರು, ಸುಗಂಧದಿಂದ ಕೂಡಿದ ವಾಯು, ಸುಖಕರ ಸಂಜೆ, ರಮಣೀಯವಾದ ದಿನಗಳು''.

''ಈ ವಸಂತ ಋತು ಬಾವಿಯ ನೀರಿಗೂ, ಮಣಿಕೆಚ್ಚಿದ ಕೈಗಡಗಕ್ಕೂ, ಚಂದ್ರಪ್ರಭೆ ಸೂಸುವ ಅಂಗನೆಗೂ ಮತ್ತು ಹೂಗಳಿಂದ ತುಂಬಿದ ಮಾಮರಕ್ಕೂ ಸುಭಗತೆಯನ್ನು ಕೊಡುತ್ತದೆ''.

''ಕಾಮಿನಿ ಯುವತಿಯರ ನಿತಂಬಗಳನ್ನು ಹೂವಿನ ಬಣ್ಣದ ಬಟ್ಟೆಯಿಂದಲೂ, ಕುಚಮಂಡಲಗಳನ್ನು ಕುಂಕುಮ ವರ್ಣದ ಬಟ್ಟೆಯಿಂದಲೂ ಈ ವಸಂತ ಋತುವಿನಲ್ಲಿ ಅಲಂಕರಿಸಲಾಗುವದು''.

ಅಕ್ಕ : ಕಿವಿಗಳಲ್ಲಿ ಕನ್ನೈದಿಲ ಹೂ, ಕಪ್ಪು ಮುಂಗುರುಳಲ್ಲಿ ಅಶೋಕೆಯ ಹೂಗಳಿಂದ ಅಲಂಕರಿಸಲಾಗುವದು. ಅವರ ಬೆವರ ಹನಿಗಳು ಮುತ್ತಿನಂತೆ ಶೋಭಿಸುತ್ತವೆ.

ಕಾಮದೇವನಿಂದ ಪೀಡಿತ ಈ ಯುವತಿಯರು ಪತಿಯ ಅಪ್ಪುಗೆಯಲ್ಲಿದ್ದರೂ ಕೂಡ ಉತ್ಸುಕರಾಗಿರುತ್ತಾರೆ. ದೇಹಗಳು ಕೃಶವಾಗಿರುತ್ತವೆ. ಬಣ್ಣ ಬಿಳಿಚಿಕೊಂಡಿರುತ್ತದೆ. ಜಡರಾಗಿ ದೇಹಾಲಸ್ಯದಿಂದ ಮೇಲಿಂದ ಮೇಲೆ ಆಕಳಿಸುತ್ತಾರೆ. ತಮ್ಮ ಸೌಂದರ್ಯವನ್ನು ಅಲಂಕರಿಸದೆ

ನಿರ್ಲಕ್ಷಿಸುತ್ತಾರೆ. ಹೀಗೆ ಅವನ ಪೀಡೆಯಿಂದ ಅನೇಕ ಕೆಟ್ಟ ಪರಿಣಾಮಗಳಾಗಿವೆ.

ಕೋಗಿಲೆಯು ಚಿಗುರು ಮಾವಿನ ರಸದಿಂದ ಉನ್ಮತ್ತವಾಗಿ ರಾಗದಿಂದ ಹರ್ಷಗೊಂಡು ತನ್ನ ಪ್ರಿಯಳ ಮುಖ ಚುಂಬಿಸುತ್ತದೆ. ಕಮಲದ ಮೇಲೆ ಕುಳಿತ ಭ್ರಮರಗಣವು ಭ್ರಮರಿಯರ ಜೊತೆ ಆಮೋದ ಪ್ರಮೋದ ಮಾಡುತ್ತಲಿವೆ.

ಮತ್ತ ಭ್ರಮರಗಳಿಂದ ಚುಂಬಿತ, ಮಂದಮಾರುತನಿಂದ ಆಲಿಂಗಿತ ಕೋಮಲವಾದ ಮಾವು ಅದನ್ನು ತಬ್ಬಿದ ಮಲ್ಲಿಗೆ ಬಳ್ಳಿ ಇವುಗಳನ್ನು ನೋಡಿದ ಕಾಮಾತುರ ಪುರುಷನು ಉತ್ಕಂಠಿತನಾಗುತ್ತಾನೆ.

ರಮಣಿಯರ ಮುಖಕಾಂತಿಯನ್ನು ಕದಿಯುವ ಕುರವಕ ಬಳ್ಳಿಯ ಶೊಭೆಯನ್ನು ನೋಡಿ ಯಾವ ಸಹೃದಯನ ಹೃದಯ ಕಾಮಬಾಣಕ್ಕೆ ತುತ್ತಾಗುವದಿಲ್ಲ?

ಅಶೋಕೆ, ಪಲಾಶ, ಮಾವು ಮೊದಲಾದ ಎಲ್ಲ ಮರಗಳು ಎಲ್ಲ ಅಂಗಗಳಿಂದ ಚಿಗಿತು, ಕೊನರಿದ ಗಿಡಗಳಿಂದ ಭೂದೇವಿ ಕೆಂಪು ಬಟ್ಟೆಯನ್ನುಟ್ಟ ಮೊದಲಗಿತ್ತಿಯ ಹಾಗೆ ಕಾಣುತ್ತಿದ್ದಾಳೆ!
ಚಂದ್ರು: ಕೆಂಪು ಚೂಚುಕದಂತೆ ಕಾಣುವ ಕೆಂದಳಿರ ಹೊತ್ತ ಪಲಾಶವನ್ನು ನೋಡಿದರೆ ಅದಾರ ಮನದ ಸಂಯಮ ಒಡೆಯಲಿಕ್ಕಿಲ್ಲ! ಮನೊಹರವಾದ ಕಣಗಿಲೆಯ ಕುಸುಮ ಅದಾರನ್ನು ಮೊಹಪರವಶ ಮಾಡಲಿಕ್ಕಿಲ್ಲ! ಕೋಗಿಲೆಯ ಮಧುರಗಾನ ಕುಲಾಂಗನೆಯರ ಚಿತ್ತ ಹರಣ ಮಾಡುವದು. ದುಂಬಿಯ ಮಧುರ ಗಾನವು ಕೂಡ ಅಷ್ಟೇ ಚಿತ್ತಾಕರ್ಷಕ.

ಸುಂದರಿಯರ ಧವಳ ಹಾಸ್ಯದಂತೆ ಕುಂದಕುಸುಮಗಳ ದೀಪ್ತಿ, ಮನೋಹರ ಉಪವನಗಳಿಂದ ಕೂಡಿದೆ. ವಿರಕ್ತ ಋಷಿಗಳ ಮನವನ್ನು ಆರಕ್ತಗೊಳಿಸುವ ಮೊದಲೇ ಮೋಹಪರವಶವಾದವರ ಬಗೆಗೆ ಮನವನ್ನು ಮತ್ತಷ್ಟು ಹರಣ ಮಾಡಿ ತಂಗಾಳಿ ಬೀಸುತ್ತದೆ.

ಮಾವಿನ ಕೋಮಲ ಚಿಗುರು ಯಾರ ಬಾಣಗಳಾಗಿವೆಯೋ, ಪಲಾಶದ ಸುಂದರ ಹೂಗಳು ಯಾರ ಧನುಸ್ಸು ಆಗಿದೆಯೋ, ದುಂಬಿಗಳು ಯಾರ ಬಿಲ್ಲಿನ ದಾರವಾಗಿದೆಯೋ, ಕಳಂಕರಹಿತ ಚಂದ್ರನು ಯಾರ

ಬೆಳ್ಗೊಡೆಯಾಗಿರುವನೋ, ಮದೋನ್ಮತ್ತ ಆನೆ ಯಾರಿಗೆ ಮಲಯ ಮಾರುತನಾಗಿರುವನೋ, ಕೋಗಿಲೆಯು ಯಾರ ದೂತನಾಗಿರುವನೋ, ಅಂಥ ಅನಂಗನಾದ ಕಾಮದೇವನು ವಸಂತ ಋತುಸಹಿತ ಎಲ್ಲರಿಗೂ ಶುಭವನ್ನುಂಟು ಮಾಡಲಿ.

ಹೀಗೆ ಕಾಳಿದಾಸನು ವಸಂತ ಋತುವಿನ ಎಲ್ಲಾ ಗುಣಧರ್ಮವನ್ನು ವಿಶದೀಕರಿಸಿದ್ದಾನೆ.

ಅಕ್ಕ : ರಾಘವಾಂಕ ಕವಿ ಚಂದ್ರನ ಬಗೆಗೆ ಭಾವದುಂಬಿ ನುಡಿದಿದ್ದಾನೆ. ''ಮದನನು ಸ್ಫಟಿಕದ ಸಾಣೆಹಿಡಿದಿರುವನೋ! ಗಗನ ವನಿತೆಯು ಆಟವಾಡಲು ಹರವಿದ ನಕ್ಷತ್ರಮಾಲೆಯ ನಡುವೆ ಇಟ್ಟ ರಜತದ ಹಲಗೆಯೋ! ರತಿಯು ಪ್ರಿತಿಯಿಂದ ದಿಟ್ಟಿಸಿ ನೋಡುವ ಕನ್ನಡಿಯೋ!, ಮನ್ಮಥನ ಕೈಯಲ್ಲಿ ಹೊಳೆಯುವ ಚಕ್ರವೋ, ವಸುಧೆಗೆ ಖಚರರು ಪ್ರಿತಿಯಿಂದ ಸುರಿಯಲು ಹಿಡಿದ ಬೆಳ್ಳಿ ಪಾತ್ರೆಯೋ ಎಂದು ಸೊಬಗಿನ ಸೋನೆಯಾದ ತಿಂಗಳನ ಬಗೆಗೆ ಹಾಡಿ ಹೊಗಳಿದ್ದಾನೆ.

ಧಾರವಾಡದ ಸಿರಿ ಸೊಬಗಿನ ಕವಿ ಚನ್ನವೀರ ಕಣವಿಯವರು ಋತುಸಂಹಾರದಲ್ಲಿ ಋತುವಿನ ಸೊಬಗನ್ನು ಸೆರೆ ಹಿಡಿದ ಬಗೆಯೇ ಬೇರೆ.

ಮಾವು ಹೂವಿನ ಕೊಡೆ ವಿಮಾನದಿಂದಿಳಿತಂದು
ಬಂದ ಪ್ರೀತಿಯ ಕಂದ.
ಕೂವೂ ಜಗ್ ಜಗ್ ಪುವ್ವೀಟ್ಟುವ್ವಿಟ್ಟು
ಕಾಲೇಜು ಕಟ್ಟೆಯ ಹತ್ತಿ ಮೊದಲ ಸಲ ಊರಿನೆಡೆ
ಕನಸಿನಲ್ಲಿಯೂ ನಡೆದು ಬಂದಿಹನು ಹುಡುಗ
ಎತ್ತರೆತ್ತರದಲ್ಲಿ ಹಾರುತಿದೆ ಗಿಡುಗ
ದಿನದಿನಕು ಕನಸುಗಳು ಬೆಗುರಿ ತೋರಣಗಟ್ಟಿ
ಬರೆದಿಹವು ಸುಸ್ವಾಗತ
ಕಾವ್ಯಕಾದಂಬರಿಯ ನಾಯಕರ ಜೊತೆಯಲ್ಲಿ ನಿತ್ಯ ಸ್ವಾಗತ
ಕೋಗಿಲೆಯ ಧ್ವನಿಗೆದೆಯ ಬಾಗಿಲವೇ ತೆರೆದಿಹುದು
ಮನದ ಮಲಿನ ಮಹಡಿಯಲ್ಲಿ ನಡೆದಿದೆ ಸರಸ ಸಂಗೀತ ಗೋಷ್ಠಿ
ನುಗ್ಗೆ ಹೂವಿಗೂ ಲಗ್ಗೆ ಇಟ್ಟು ಮೊರೆದಿವೆ ದುಂಬಿ
ಕಣ್ಣೆದುರು ಕುಣಿಯುತಿವೆ ಕರ್ಪೂರ ಗೊಂಬಿ
ಹೋಳಿ ಹೊಣ್ಣಮೆ ಬಂತು ತಾಳಿ ಎನುತಿದೆ ಗಾಳಿ
ತಾಳಲಾರದು ಬಿಸಿಯ ರಕ್ತ ನಾಡಿ

ಹೋಳಿ ಹುಣ್ಣಿಮೆಯ ಬರವಿಗೂ, ಕೋಗಿಲೆ ಧ್ವನಿಗೈಯುವದಕ್ಕೂ, ದುಂಬಿಗಳು ನುಗ್ಗೆಹೂವಿಗೆ ಲಗ್ಗೆ ಇಡುವದಕ್ಕೂ, ಎತ್ತರೆತ್ತರಕ್ಕೆ ಹಾರುವ ಗಿಡುಗನಂತೆ ಕನಸು ಕಾಣುವ ಬಿಸಿ ರಕ್ತದ ಹುಡುಗನಿಗೂ ಭಾವನಾತ್ಮಕ ಸಂಬಂಧವನ್ನು ಕವಿ ಕಲ್ಪನೆ ಹೆಣೆದಿದೆ.

ತಿರುಮಲಾರ್ಯರು 'ಚಿಕ್ಕದೇವರಾಜ ವಿಜಯ'ದಲ್ಲಿ ವೇಶ್ಯಾ ವಾಟಿಕೆಯನ್ನು ವರ್ಣಿಸುತ್ತ ಹೆಣ್ಣುಗಳ ಚಲುವನ್ನು ಹೀಗೆ ಶಬ್ದಗಳಲ್ಲಿ ಸೂರೆಗೈದಿದ್ದಾರೆ.

''ಇಹದ ಸುಖ ಸಮೃದ್ಧಿ ಇಲ್ಲಿಂದಲೇ, ಅದು ಬೇಟದ ಬೀಡು, ಬಿಂಕದ ಮಹಾದ್ವಾರ, ವಿನೋದದ ಶಯ್ಯೆ, ಚಲ್ಲಾಟದ ಪೇಟೆ, ಜಾಣ್ಮುಡಿಯ ಚೌಕ, ಶೃಂಗಾರದ ಅಂಗಳ, ಆಟಪಾಟದ ಪಾಳೆಯ, ಪದಪಿನ ಉದ್ಯಾನ, ಕಾಂತಕಾಮಿನಿಯರ ನಾಟಕ ಶಾಲೆ, ಅಲ್ಲಿಯೇ ಸ್ನೆಹಗಳು ನಾಟಿ ಆಶೆ ಮೊಳೆತುದು, ಕೌತುಕ ಚಿಗಿತು ಬಗೆ ಪೊಗರೇರಿದುದು, ಉತ್ಸಾಹ ಬಿಸಿಯೇರಿ ಆವೇಗ ತಳವಳಿಸಿದುದು, ಸುಖ ಹೊರಚೆಲ್ಲಿ ಸೊಕ್ಕು ಮಿಕ್ಕುದು, ಕಾತರ ಕಂಪಿಸಿ ಭಾವ ಬಗೆಬಗೆಯ ಬಣ್ಣವೇರಿದುದು, ಮನ್ಮಥನ ಮಾಟದ ಮನೆಯಲ್ಲವೇ ಅದು''- ಹೀಗೆ ಇಲ್ಲಿ ಬರುವ ಹೆಂಗಳೆಯರ ಶರೀರ ಮಧುರ ,ಪ್ರಸನ್ನ, ಪ್ರಫುಲ್ಲ, ಶೀತಲ, ಸುರಭಿ ಶರೀರ. ಕಾಮಿನಿಯರ ಸೌಂದರ್ಯ ಅಗಾಧ, ಅಸಮಾನ.

ಚಂದ್ರು : ವಸಂತಾಗಮನಕ್ಕೆ ಸ್ಪಂದಿಸಿ ಬರಿದಾದ ಭೂಮಿಯಲ್ಲಿ ಮರಗಿಡ ಬಳ್ಳಿಗಳು ಹಸಿರು ಮುರಿಯತ್ತವೆ. ಜೀವ ತುಂಬಿ ಹೊಸಕಾಂತಿಯಿಂದ ಶೋಭಿಸುತ್ತವೆ. ಎಲೆಯುದುರಿ ಬೊಳಾಗಿದ್ದ ಅತ್ತಿ, ಆಲದ ಮರಗಳು, ಚಿಗುರೆಲೆಯ ಆಭರಣದಿಂದ ಮುಗಿಲಿಗೆ ತೋರಣ ಕಟ್ಟಿದಂತೆ ಶೋಭಿಸಿವೆ. ಮಾವು ಬೇವುಗಳಿಗೆ ಜೀವ ಚಿಗಿತು ಅವುಗಳನ್ನಾಧರಿಸಿದ ಬಳ್ಳಿಗಳಿಗೆ ಸುಳಿದೆಗೆದಿವೆ. ಬರಬರುತ್ತ ಹೂವಾಗಿ ಕಾಯಾಗಿ ಗಿಡಗಳು ತುಂಬಿ ನಿಂತಾಗ ನವಮಾಸ ಹೊತ್ತ ಗರ್ಭಿಣಿಯ ನೆನಪು ತರುತ್ತವೆ.

ಮನುಷ್ಯ ನಿಸರ್ಗದಿಂದ ದೂರ ಹೋಗುವೆನೆಂದರೂ ಅದು ಅವನ ಬೆನ್ನು ಸವರುತ್ತಲೇ ಇರುತ್ತದೆ. ಋತುಗಳ ರೂಪದಲ್ಲಿ ಅದು ಪ್ರಕಟವಾಗುತ್ತಲೇ ಇರುತ್ತದೆ. ನೆಲದ ಮೇಲೆ ಇಡುವ ಒಂದು ಅಡಿ ಮುಗಿಲಿನ ಮೇಲಿಡುವ

ಇನ್ನೊಂದು ಅಡಿಯ ನಡುವೆ ಎಲ್ಲ ಋತುಗಳು ಸಮಾವೇಶಗೊಂಡಿರುತ್ತವೆ.

ಅಕ್ಕ : ಮಾವು ಮಲ್ಲಿಗೆ ಕೋಗಿಲೆ ಚಂದ್ರರಿಲ್ಲದ ಚೈತ್ರ. ಚೈತ್ರ ವೈಶಾಖಗಳಿಲ್ಲದ ವಸಂತ ಋತು, ಋತುವೇ ಆಗಲಾರದು. ಈ ಋತುವಿನಲ್ಲಿ ಮಾವು ವಿಶೇಷ ಸೌಂದರ್ಯದಿಂದ ಮೆರೆಯುವದು. ಗುಂಡುಗುಂಡಾದ ಹಸಿರು ಕಾಯಿಗಳು ತಂಗಾಳಿಗೆ ತೂಗಿತೊನೆಯುವ ದೃಶ್ಯ ಎಂಥವರನ್ನು ಆನಂದಿತಗೊಳಿಸುವದು. ಹಸಿರೆಲೆಯ ಟೊಂಗಲಿನ ಹೊರಗೆ ಬೆಳ್ಳಿ ಕೊಳವಿಯ ತುದಿಗೆ ಹಸಿರು ಗೋಲಗಳು; ಉದ್ದ ಮೊಂಡು, ಚೂಪುಮೂಗಿನಲ್ಲಿ ಅಡಗಿದೆ ಅವುಗಳ ಸೌಂದರ್ಯದ ಗುಟ್ಟು!

ಆಭರಣಗಳಲ್ಲಿಯೂ ನಕಲು ಮಾಡುವಷ್ಟು ಜನಪ್ರಿಯ ಅರಳಿಲೆ. ಮಾಗಾಯಿ ಮಕ್ಕಳ ಮಹಿಳೆಯರ ತೊಡವಿನಲ್ಲಿ ಅವುಗಳಿಗೆ ವಿಶೇಷ ಸ್ಥಾನ. ಸೀರೆಯ ಅಂಚುಗಳಲ್ಲಿ ಎಂದಿನಿಂದಲೂ ಅವು ಮಿಂಚುತ್ತವೆ.

ಅಕ್ಕ : ಹೀಗೆ ತುಂಬಿದ ವನವಿಹಾರವು ಶೃಂಗಾರ ರಸ ಪ್ರೇರಕ, ವಸಂತ ಋತು ಪೋಷಕ. ಪ್ರಕೃತಿ ಇಡಿ ಹೊಸ ಬಾಳಿಗೆ ಸಿದ್ಧವಾಗುವ ಕಾಲ ವಸಂತ ಋತು. ಪಕ್ಷಿಗಳು ಗೂಡು ಕಟ್ಟಿಕೊಂಡು ಹೊಸ ಜೀವನಕ್ಕೆ ನಾಂದಿ ಹಾಡುವ ಕಾಲ. ಗುಬ್ಬಿ, ಕಾಗೆ, ಕೋಗಿಲೆ ಮುಂತಾದ ಪಕ್ಷಿಗಳು ತತ್ತಿ ಇಟ್ಟು ಮರಿಮಾಡಲು ತೊಡಗುವ ಕಾಲ. ಗೋವಿಂದ ಪಕ್ಷಿ ಈ ಕಾಲದಲ್ಲಿ ಕರುಣ ರಮ್ಯ ಹಾಡು ಹೇಳುತ್ತದೆ. ಸ್ವರ್ಣ ಪಕ್ಷಿಯು ಇದೇ ದಿನಗಳಲ್ಲಿ ಕಾಣಿಸಿಗುತ್ತದೆ. ಸೂರ್ಯನ ಬೆಂಬಿಸಿಲಿನಲಿ ಬೆಂದು ಹೊರ ಬಂದರೂ ಈ ಕಾಲವು ಸರ್ವಾಂಗ ಸುಂದರ ರೂಪ, ನಾದ ಮಾಧುರ್ಯ, ತನಿಗಂಪು, ತಂಗಾಳಿಗಳಿಂದ ಮನಮೋಹಕವಾಗಿ ಚೈತ್ರ ಸಖ ವೈಶಾಖನು ಶೋಭಿಸುವನು.

ಚೈತ್ರ ವೈಶಾಖಗಳೆರಡು ಸೇರಿ ವಸಂತ ಋತುವನರಳಿಸಿ ಜೀವನ ಚೈತ್ರ ಯಾತ್ರೆಗೆ ಚಾಲನೆ ಕೊಡುತ್ತವೆ.



ಸೊಗದ ನವಿಲು ಎರಳೆಯಳಿಲು ಶುಕ ಪಿಕದ ಹಿಂಡು । ಬಕುಳ ಜಾಜಿ ಪಾರಿಜಾತ ಮಲ್ಲಿಗೆಯ ಕಂಪು । ಪಾತರಗಿತ್ತಿಗಳ ಹಿಂಡು ದುಂಬಿಗಳ ದಂಡು ॥
ಬಿಗಿತ ಆಸುಗೆ ಮಾಮರದೊಡನೆ ಚೈತ್ರ ದಿಬ್ಬಣ । ಹಸಿರು ಒಡಮುರಿವ ನೆಲ, ನೀಲಿ ಬಾನಿನ ನಡುವೆ । ಋತುರಾಜ ವಸಂತಗೆ ಸೊಗದ ಬರವ ನೀಡಿವೆ ॥

ಬಿಡುಗಡೆಗಾಗಿ ದುಡಿದವರು

ಬಿಡುಗಡೆಗಾಗಿ ದುಡಿದವರು

ಹೆಣ್ಣುಧ್ವನಿ: ಜಾಲಿಯನ್‌ವಾಲಾಬಾಗದ ಹತ್ಯಾಕಾಂಡ ನಡೆದು ಸುಮಾರು ಎಪ್ಪತ್ತೈದು ವರ್ಷಗಳು ಗತಿಸಿದವು. ೧೯೧೯ರ ಹತ್ಯಾಕಾಂಡದ ಸ್ಮರಣೆ ಭಾರತೀಯರ ಮನಾಂಗಣದಲ್ಲಿ ಅಚ್ಚೊತ್ತಿದೆ. ೧೯೨೦ರಲ್ಲಿ ಕಾಂಗ್ರೆಸ್ ಅಧಿವೇಶನ ನಡೆಯಿತು. ಕಲ್ಕತ್ತಾ ಮತ್ತು ನಾಗಪುರಗಳಲ್ಲಿ ನಡೆದ ಹತ್ಯಾಕಾಂಡದ ನೆನಪಿಗಾಗಿ ಜನಜಾಗೃತಿ ಉಂಟು ಮಾಡುವ ಉದ್ದೇಶದಿಂದ ಪ್ರತಿ ವರ್ಷ ಏಪ್ರಿಲ್‌ದಲ್ಲಿ ಧ್ವಜಸಪ್ತಾಹವನ್ನು ದೇಶದಾದ್ಯಂತ ಆಚರಿಸುವದರ ಜೊತೆಗೆ ಸತ್ಯಾಗ್ರಹದ ಕಾರ್ಯಕ್ರಮ ನೇರವೇರಿಸಬೇಕೆಂದು ಮುಖಂಡರು ನಿರ್ಣಯಿಸಿದರು.

ಗಂಡು ಧ್ವನಿ : ಭಗತ್ ಸಿಂಗ, ಚಂದ್ರಶೇಖರ ಆಜಾದರ ಉಗ್ರವಾದಿ ಗುಂಪು ಮಾಡಿದ ಚಳುವಳಿಯ ಚುರುಕು ದೇಶವಾಸಿಗಳನ್ನು ಎಚ್ಚರಿಸಿತ್ತು. ಇವರ ಪ್ರಭಾವಕ್ಕೆ ಒಳಗಾದ ಶ್ರೀ ವಿರುಪಾಕ್ಷಪ್ಪ ಅಂಗಡಿಯವರು ಹಾವೇರಿಯಿಂದ ಪ್ರಯಾಗದವರೆಗೆ ಸೈಕಲ್ ಸವಾರರಾಗಿ ಚಳುವಳಿಯಲ್ಲಿ ಭಾಗವಹಿಸಿದರು.

(ಅವರ ಅನುಭವ ಅವರದೇ ಧ್ವನಿಯಲ್ಲಿ)

ವಿರುಪಾಕ್ಷಪ್ಪಾ ಅಂಗಡಿ : ೧೯೩೨ನೇ ಇಸ್ವಿಯಲ್ಲಿ ಮಥುರಾ ಜಿಲ್ಲೆಯಲ್ಲಿ ಬೃಂದಾವನ ಪ್ರೇಮಮಹಾವಿದ್ಯಾಲಯದಲ್ಲಿ ನಾನು ಕಲಿಯುತ್ತಿರುವಾಗ ಎರಡನೆ ಚಳುವಳಿ ಶುರುವಾಯಿತು. ಆ ಕಾಲಕ್ಕೆ ನನ್ನನ್ನು ಬಂಧಿಸಿ ಮಥುರಾ ಜೈಲಿನಲ್ಲಿ ಮೂರು ತಿಂಗಳು ಶಿಕ್ಷಾ ವಿಧಿಸಿ ಇಟ್ಟಿದ್ದರು. ಆಗ ಭಗತ್ ಸಿಂಗನ ಪಾರ್ಟಿಯ ಸಂಗಾತಿಗಳ ಸಂಪರ್ಕವಾಗಿ, ನಾನು ಪ್ರಭಾವಿತನಾಗಿ ಕ್ರಾಂತಿಕಾರಿಗಳ ಪಾರ್ಟಿಯಲ್ಲಿ ಸೇರಿಬಿಟ್ಟೆ. ಅವರ ನಂತರ ಆ ಸಂಘಟನೆಗೆ ನಾನು ಅಧ್ಯಕ್ಷನಾಗಿ ಸಾಕಷ್ಟು ಪ್ರಚಾರ ಮಾಡಿದ್ದೆನು. ಕೊನೆಗೆ ಅಲ್ಲಿ ಒಂದು ಪ್ರಕರಣ ನಡೆಯಿತು. ಅದು ಹೀಗಿದೆ- ಉತ್ತರ ಪ್ರದೇಶದ ಪಿಪ್ರಿಡೀಹ ರೇಲ್ವೆ ಸ್ಟೇಶನ್‌ದಲ್ಲಿ ೧೯೩೮ನೇ ಇಸ್ವಿಯಲ್ಲಿ ಒಂದು

ಮೇಲ್‌ಗಾಡಿ ತರುಬಿ ಅದರಲ್ಲಿನ ಸರಕಾರಿ ಖಜಾನೆಯನ್ನು ನಾವು ಲೂಟಿ ಮಾಡಿಬಿಟ್ಟೆವು. ಆ ಹೊತ್ತಿನಲ್ಲಿ ಜನರಿಗೆಲ್ಲ ತಿಳಿಯುವಂತೆ ಹೀಗೆ ಘೋಷಣೆ ಮಾಡಿ ಹೇಳಿದೆವು- 'ನಾವು ದರೋಡೆಖೋರರಲ್ಲ, ಕ್ರಾಂತಿಕಾರಕರಿದ್ದೇವೆ. ಸರ್ಕಾರೀ ಖಜಾನೆಗೆ ಕೈ ಹಾಕುತ್ತೇವೆ. ನಿಮ್ಮ ಯಾವ ವಸ್ತುವನ್ನೂ ಮುಟ್ಟುವದಿಲ್ಲ, ನೀವೇನು ಚಿಂತೆ ಮಾಡಬೇಡಿರಿ'!

ನಮ್ಮ ಘೋಷಣೆಯನ್ನು ಕೇಳಿ ಯಾರೂ ವಿರೋಧ ಮಾಡಲಿಲ್ಲ. ಮುಂದೆ ಈ ಪ್ರಕರಣದಲ್ಲಿ ನಮ್ಮನ್ನು ಹಿಡಿದು ಹದಿನಾಲ್ಕು ವರ್ಷ ಶಿಕ್ಷೆ ವಿಧಿಸಿದರು. ಕ್ರಾಂತಿಕಾರಿಗಳನ್ನೆಲ್ಲ ಬರೇಲಿ ಕೇಂದ್ರ ಜೈಲಿನಲ್ಲಿಟ್ಟಿದ್ದರು. ಅಲ್ಲಿ ನಮಗೆ ಎರಡು ಸಲ ಫಟಕೀ ಶಿಕ್ಷೆಯಾಯಿತು. ಒಂದೊಂದು ಸಲಕ್ಕೆ ಮೂವತ್ತು ಏಟು ಕೊಡುತ್ತಿದ್ದರು. ಒಂದೊಂದು ಏಟು ಕೊಡುವಾಗಲೂ ನಾವು ಯಾವುದಕ್ಕೂ ಅಂಜದೇ ''ಇನ್‌ಕ್ವಿಲಾಬ ಜಿಂದಾಬಾದ'' ಎಂದೂ, 'ಕ್ರಾಂತಿಚಿರಾಯುವಾಗಲಿ' ಎಂದೂ ಘೋಷಣೆ ಹಾಕುತ್ತಿದ್ದೆವು.

ಶಿಕ್ಷೆಗೊಳಗಾದ ನಮ್ಮ ಗುಂಪಿನಲ್ಲಿ ಒಬ್ಬರು ಬಹಳ ನಾಜೂಕು ಪ್ರಕೃತಿಯವರಿದ್ದರು. ಅವನನ್ನು ನೋಡಿದರೆ ಯಾವಾಗ ಸಾಯುವನೋ ಎನ್ನುವಂತಿದ್ದನು. ಅಧಿಕಾರಿಗಳು ಅವನಿಗೂ ಮೂವತ್ತು ಫಟಕೀ ಶಿಕ್ಷೆಯನ್ನು ಕೊಟ್ಟರು. ಅವನು ಮೂವತ್ತು ಫಟಕೀ ಹೊಡೆಸಿಕೊಂಡು ತಿರುಗಿ ನಿಂತು ಜೈಲ್ ಸುಪರಿಂಟೆಂಡೆಂಟನಿಗೆ ''ರಸ್ಕೊಗಿ, ಎಲೋ ರಸ್ಕೊಗಿ, ನನ್ನ ಕಟ್ಟಿ ಎನ್ ಹೊಡಿತಿಯೋ, ಖುಲ್ಲಾ ಬಿಚ್ಚಿ ಹೊಡಿ'' ಎಂದು ಸೆಡ್ಡು ಹೊಡೆದು ಹೇಳಿದನು. ಆ ಹುಡುಗನ ದಿಟ್ಟತನ ನಮಗೆ ಧೈರ್ಯವನ್ನು ತುಂಬಿತು. ನಾವೆಲ್ಲರೂ ಧೈರ್ಯದಿಂದ ಜೈಲ್ ಶಿಕ್ಷೆಯನ್ನು ಅನುಭವಿಸಿದೆವು.

ನನ್ನ ಅಭಿಪ್ರಾಯದಲ್ಲಿ ಕ್ರಾಂತಿಕಾರರು ತ್ಯಾಗ, ಬಲಿದಾನ, ತಪಸ್ಸು ಮಾಡಿ ಹೋರಾಡಿದ್ದರು. ಅದರ ಪರಿಣಾಮವಾಗಿ ೧೯೪೨ರ ಕ್ರಾಂತಿ ಉತ್ತರ ಪ್ರದೇಶದಲ್ಲಿ ಆಯಿತು. ದೇಶದಲ್ಲಿನ ಎಲ್ಲ ಭಾಗಗಳಿಗಿಂತಲೂ ತೀವ್ರವಾಗಿ ಈ ಉತ್ತರ ಪ್ರದೇಶದ ಪೂರ್ವ ಜಿಲ್ಲೆಗಳಲ್ಲಿ ನಡೆಯಿತು. ಆಜಮ್‌ಗಡದ ಬಲಿಯಾ ಜಿಲ್ಲೆ ಬಹಳ ಹುಂಬ ಜಿಲ್ಲೆ ಎಂದು ಹೆಸರಾಗಿತ್ತು. ಆ ಜಿಲ್ಲೆಯಲ್ಲಿ 'ಬಾಗಿ'ಗಳು ಗುಂಪು ಕಟ್ಟಿಕೊಂಡು ದಾಳಿ ಮಾಡಿದ್ದರು. ಹತ್ತುಸಾವಿರ ರೈತರು ಒಂದು ನಿಟ್ಟಿನಿಂದ ಮತ್ತೊಂದು ನಿಟ್ಟಿಗೆ ಹೋಗಿ ಆ ಭಾಗದಲ್ಲಿ ಒಂದೂ

ಸ್ಟೇಶನ್ ಉಳಿಯದಂತೆ, ರೈಲುಗಳು ಉಳಿಯದಂತೆ ದಾಳಿಯಿಟ್ಟು ಹಾಳು ಮಾಡಿದರು. ಅವರ ಗುಂಪು ಎದುರಿಗೆ ಬಂದರೆ ಪೋಲಿಸರು ಕೂಡ ''ಇನ್‌ಕ್ವಿಲಾಬ ಜಿಂದಾಬಾದ' 'ಮಹಾತ್ಮಾ ಗಾಂಧೀಕೀ ಜೈ' ಎಂದು ಘೋಷಣೆ ಹಾಕಿ 'ನಾವೂ ನಿಮ್ಮ ಜೊತೆಯಲ್ಲೇ ಇದ್ದೇವೆ' ಎಂದು ನಮ್ಮ ದೇಶದ ನಿಶಾನಿ ಏರಿಸಿ ಬಿಡುತ್ತಿದ್ದರು. ಇಂಥ ಮಹತ್ ಘಟನೆ ಜನಕ್ರಾಂತಿಯಾಗಲು ಕ್ರಾಂತಿಕಾರರ ತ್ಯಾಗ ಬಲಿದಾನಗಳೇ ಕಾರಣವೆಂದು ನನ್ನ ನಂಬಿಕೆ.

ಹೆಣ್ಣುಧ್ವನಿ : ಆಗ ಆಜಾದ ಹಿಂದ ಸೇನೆಯಲ್ಲಿ ಕಾರ್ಯಕರ್ತರಾಗಿದ್ದ ಅದರಗುಂಚಿಯ ಶಂಕರಗೌಡಾ ಪಾಟೀಲರು ಅಂದಿನ ದಿನಗಳನ್ನು ಹೀಗೆ ನೆನಪಿಸಿಕೊಳ್ಳುತ್ತಾರೆ:

(ಅವರ ಅನುಭವ ಅವರದೇ ಧ್ವನಿಯಲ್ಲಿ)

ಅದರಗುಂಚಿ ಶಂಕರಗೌಡರು: ನಾನು ಹುಬ್ಬಳ್ಳಿಯ ಸಿಟಿ ಹೈಸ್ಕೂಲನಲ್ಲಿದ್ದಾಗ ಸುಭಾಷ್ ಚಂದ್ರ ಬೋಸ್ ರು ಬಂದಿದ್ದರು. ಅವರು ಕಾಂಗ್ರೆಸ್ ಗೆ ರಾಜೀನಾಮೆ ಕೊಟ್ಟು 'ಫಾರ್ವರ್ಡ ಬ್ಲಾಕ್' ಎಂಬ ಸಂಸ್ಥೆ ಸ್ಥಾಪನೆ ಮಾಡಿಕೊಂಡು ಅದರ ಪ್ರಚಾರಕ್ಕಾಗಿ ಭಾರತದ ತುಂಬೆಲ್ಲ ಪ್ರವಾಸ ಮಾಡಿದರು. ಹುಬ್ಬಳ್ಳಿಗೆ ಬಂದಾಗ ಕೊರವಿ ಸಂಗಪ್ಪನವರ ಅಧ್ಯಕ್ಷತೆಯಲ್ಲಿ ಹಳೆಯ ಕಾಟನ್ ಮಾರ್ಕೆಟಿನೊಳಗ ಒಂದ ಸಭೆ ಕರೆದಿದ್ರ. ಆವಾಗ ನಾನು ಸಿಟಿ ಹಾಯಸ್ಕೂಲಿನಿಂದ ಗುರುಗಳಿಗೆ ಹೇಳದೆ ಆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೆ.

ಭಾಷಣ ಮುಗಿದ ಮೇಲೆ ನಾನು ಅವರ ಮಗ್ಗಲಿನಲ್ಲಿ ಮೆಟ್ಟಗಟ್ಟಿ ಹತ್ತಿರ ನಿಂತಿದ್ದು ಅವರು ನೋಡಿದರು. ಆ ಪರಿಣಾಮದಿಂದಲೇ ನನಗೆ ಹುರುಪು, ಹುಮ್ಮಸ ಅನಿಸಿ ಅವತ್ತಿನಿಂದ ನಾನು ಹಾಯಸ್ಕೂಲ್ ಬಿಟ್ಟು ಈ ಚಳುವಳಿ ಕಾರ್ಯಕ್ರಮದಲ್ಲಿ ಎಲ್ಲೆಲ್ಲಿ ಜನರು ಕೂಡುತ್ತಾರೆ, ಯಾರ್ಯಾರು ಏನೇನು ಮಾಡುತ್ತಾರೆಂದು ತಿಳಿಯಲು ಮುಂದಾದೆನು. ಇದರೊಳಗ ನಮ್ಮ ಪೈಕೀನ ಒಬ್ಬರು ಉಳ್ಳಿಗೇರಿ ಚೆನ್ನಪ್ಪನವರು ನರಗುಂದ, ಇವರು ನಮ್ಮ ಸಂಬಂಧಿಕರು, ಇವರು ತಮ್ಮ ಮೇಲೆ ವಾರಂಟ ಇದ್ದಾಗ ಅದನ್ನು ತಪ್ಪಿಸಿಕೊಳ್ಳಲು ಅದರಗುಂಚಿಗೆ ಬಂದಿದ್ದರು. ಬಂದಾಗ ಅವರ ಕಾರ್ಯಕ್ರಮ ಏನೇನು ಅನ್ನುವದನ್ನು ಅವರಿಗೆ ಗೋವಿಂದರಡ್ಡಿ ಅವರು ಪತ್ರ ಬರೆಯುತ್ತಿದ್ದರು. ಆ ಸಂದರ್ಭದೊಳಗೆ ನನ್ನನ್ನೂ ಕರೆದುಕೊಂಡು ಹೋಗಿ ನಾಲ್ಕಾರು

ಕಾರ್ಯಕ್ರಮದೊಳಗ ಭಾಗವಹಿಸಿದರು. ಆವಾಗ ಹೆಬಸೂರ, ಕಿರೆಸೂರ ಹೀಗೆ ಎಂಟ್ಹತ್ತು ಚಾವಡೀ ಸುಡುವ ಕಾರ್ಯಕ್ರಮದಲ್ಲಿ ನಾನು ಭಾಗವಹಿಸಿದ್ದೆ.

(ಗೀಗೀಪದ) : ಎಂಥವೀರ ಕ್ರಾಂತಿಕಾರ। ಶೂರ ಸುಭಾಷ್‌ಚಂದ್ರ ಧೀರಾ
೧೯೯೭ನೇ ಇಸ್ವಿಯಲ್ಲಿ। ಜನಸಿಬಂದ ಬಂಗಾಲ ಪ್ರಾಂತದಲ್ಲಿ
ಪ್ರೆಸಿಡೆನ್ಸಿ ಕಾಲೇಜಿನ ವಿದ್ಯಾರ್ಥಿಯಾಗಿದ್ದಾ । ಜಾನಕಿನಾಥನ ಜಾಣ ಕುವರ
ಯೋಗೆಂದ್ರ ಪ್ರಿನ್ಸಿಪಾಲ ಬೋಸನ ಹೆಸರಿನವ । ಮಹಾಸಜ್ಜನರೊಳಗ ಪೂರನೋಡಿ
ಭಾರಿ ಸಿಟ್ಟಿಗೆದ್ದ ಸ್ತಬ್ಧ ಭಾವದಿಂದ । ಜೋರಿನಿಂದ ಮಾರಿಗೆ ಹೊಡೆದ ।
I.C.S. ಆಗಿ ಆಧಿಕಾರ ವಹಿಸಲಿಲ್ಲ। ತಾಯ್ನಾಡಿಗೆ ಸೇವೆ ಮಾಡಿದ ।
ಶೂರ ಸುಭಾಷ್‌ಚಂದ್ರ ಧೀರ । ಎಂಥ ವೀರ ಕ್ರಾಂತಿಕಾರ ।

ಗಂಡು ಧ್ವನಿ : ೧೯೨೮ರಲ್ಲಿ 'ಗೋ ಬ್ಯಾಕ್ ಸೈಮನ್' ಎಂಬ ಚಳುವಳಿಯು ದೇಶದ ತುಂಬೆಲ್ಲ ಹರಡಿತು. ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಆಗಿನ ಪರಿಸ್ಥಿತಿಯಲ್ಲಿ ಎದೆಗುಂದದೆ ಚಳುವಳಿಯಲ್ಲಿ ಭಾಗವಹಿಸಿದ್ದರು. ಅವರಲ್ಲಿ ಶ್ರೀ ಫಕೀರಯ್ಯ ಶಿರಹಟ್ಟಿಮಠರು ಒಬ್ಬರು.

(ಅವರ ಅನುಭವ ಅವರದೇ ಧ್ವನಿಯಲ್ಲಿ)

ಶ್ರೀ ಫಕೀರಯ್ಯ ಶಿರಹಟ್ಟಿಮಠ : ನನ್ನ ಶಿಕ್ಷಣ ಹುಬ್ಬಳ್ಳಿಯ ಬಾಶೆಲ್ ಮಿಷನ್ ಹೈಸ್ಕೂಲ್‌ನಲ್ಲಿ ಆರಂಭವಾಯಿತು. 'ಸೈಮನ್ ಕಮಿಷನ್', 'ಗೋ ಬ್ಯಾಕ್', ಎನ್ನುವ ಕಾರ್ಯಕ್ರಮದ ಮೆರವಣಿಗೆಯು ಹೊರಟಿತ್ತು. ನಾವು ಕ್ಲಾಸ ಬಿಟ್ಟು ಓಡಿ ಹೋಗಿ ಅದರೊಳಗ ಭಾಗ ತೆಗೆದುಕೊಂಡಿವರು ತಿರುಗಿ ಶಾಲೆಗೆ ಹೋಗಲೇ ಇಲ್ಲ. ಮತ್ತೆ ೧೯೩೮ರಲ್ಲಿ ಗಾಂಧೀಜಿ ವೈಯಕ್ತಿಕ ಸತ್ಯಾಗ್ರಹದ ತರಬೇತಿ ಶಿಬಿರ ಹುಬ್ಬಳ್ಳಿಯಲ್ಲಿ ತೆಗೆದಿದ್ದರು. ಆದರಲ್ಲಿ ನಾನೂ ಭಾಗಿಯಾಗಿದ್ದೆ. ಕರ್ನಾಟಕದ ಎಲ್ಲಾ ಪ್ರಮುಖರು ಮುಂದಾಳುಗಳು ಭಾಗವಹಿಸಿದ್ದರು. ಸ್ಪರ್ಧೆಯಲ್ಲಿ ನಾನು ನಂಬರ ಸಹಿತ ಬಂದೆ. ಹೀಗಾಗಿ ಅವತ್ತಿನಿಂದ ಹಿಡಿದು ಈ ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸಲಿಕ್ಕೆ ನಮ್ಮ ವಿಶೇಷ ತರಬೇತಿದಾರರಾದ ಶಿರಹಟ್ಟಿಮಠ ಮಾಸ್ತರರು ಮಹಾದೇವಪ್ಪಾ ಮುರಗೋಡ ಇವರೂ ಕಾರಣರಾದರು.

ಹೆಣ್ಣುಧ್ವನಿ : ಮೊರಬದ ಶ್ರೀ ಇಮಾಮ್‌ಸಾಹೇಬ ತಮ್ಮ ಚಳುವಳಿಯ ಅನುಭವ ಹೀಗೆ ಹೇಳುತ್ತಾರೆ :

(ಅವರ ಅನುಭವ ಅವರದೇ ಧ್ವನಿಯಲ್ಲಿ)

ಇಮಾಮ್ ಸಾಹೇಬ : ಸುರೇಬಾನ್‌ದಲ್ಲಿ (ರಾಮದುರ್ಗ ಹತ್ತಿರ) ಒಂದು ಐದನೂರ ಚೀಲ ಕಾಳ ಲೂಟಿ ಮಾಡಿಕೊಂಡು ಬಂದೆವು. ಮುಂದೆ ಚಿಕ್ಕುಂಬಿ, ಚುಳಕಿ ಹೀಗೆ ಅನೇಕ ಕಡೆ ೩೦೦ ಚಕ್ಕಡಿ ತೆಗೆದುಕೊಂಡು ಹೋಗಿ ಅವನ್ನೆಲ್ಲ ಲೂಟ ಮಾಡಿಕೊಂಡು ಬಂದು ಮೊರಬದಲ್ಲಿ ದಾನ ಮಾಡಿದೆವು. ಆ ಪೊಲೀಸ್ ಗೌಡನ ರಾಜಿನಾಮೆ ಕೊಡಿಸಿದೆವು. ಆ ನಂತರ ವಾರಂಟ ಹುಟ್ಟಿದ ಮೇಲೆ ಜಾವುರ ಚಾವಡಿ ಸುಟ್ಟೆವು. ಹೆಬ್ಬಾಳದ ಕಚೇರಿಯಿಂದ ಬಂದೂಕ, ರೈಫಲ್ ಕಸಿದುಕೊಂಡೆವು. ಆದಕ್ಕಾಗಿ ಪುನಃ ನಮ್ಮ ಮೇಲೆ ವಾರಂಟು ಹುಟ್ಟಿ ಕಂಡಲ್ಲಿ ಗುಂಡು ಹಾಕಬೇಕೆಂದು ಪರಮಿಷನ್ ತೆಗೆದುಕೊಂಡರು. ಆಗ ನಾವು ಬಂದು ಹಾಜರಾದೆವು. ಆಗ ನಮ್ಮನ್ನ ಜೈಲಿಗೆ ಹಾಕಿದಾಗ ದೇವರು (ಮಹಾದೇವರು) ನಮಗ ಸಿಕ್ಕರು. ಆ ನಂತರ ಮುಂದ ನಿಮ್ಮ ನಿಮ್ಮ ಎಲ್ಲಾ ಕೇಸ ಬಿಡ್ತಾವಪ್ಪ. ನೀನು ಆಶ್ರಮಕ್ಕೆ ಬಾ ಅಂತಾ ಹೇಳಿದರು. ಜೈಲಿನಲ್ಲಿ ಹನ್ನೊಂದು ತಿಂಗಳು ಇದ್ದು ಆನಂತರ ಆಶ್ರಮಕ್ಕೆ ಹೋದೆ. ಆ ಪ್ರಕಾರ ಗುರುವಿನ್ನ ನಂಬಿದೆ. 'ಇವ ಸದ್ಗುರು ಖರೆ ಅದಾನ, ಇವ ಈಶ್ವರ ಖರೆ ಅದಾನ ಇವ ಅಲ್ಲಾ ಖರೆ ಅದಾನ ಅಂತಾ ನಂಬಿಕೊಂಡು ಅಲ್ಲಿಗೆ ಹೋದೆವು. ದೇವರ (ಮಹಾದೇವರು) ಮೇಲೆ ವಾರಂಟ ಹುಟ್ಟಿತು. ದೇವರನ್ನು ತಂದು ಜೈಲಿಗೆ ಇಡಾಕ ಇವರು ಅಲ್ಲೆ ಎಲ್ಲೊ ವಾರಂಟ ಹುಟ್ಟಿಸಿದರು, ಪೋಲಿಸರು ಕೆಲವೊಂದು ಕಡೆ ಹೋದರು, ಅಥಣಿ, ವಿಜಾಪುರ ಜಿಲ್ಲೆಯ ಊರುಗಳಲ್ಲಿ ಫರಾರಿಯಾಗಿ ಉಳಿದು ದೇವರು ಸಿಗಲಿಲ್ಲ. ಆನಂತರ ಅವರನ್ನು (ದೇವರನ್ನ) ಹಿಡ್ಯಾಕ ಪ್ರಯತ್ನ ಮಾಡಿದರು. ಅವರ ತಂದೆಯಾದ ಶಿವಪ್ಪ ಮಹಾರಾಜರನ್ನು ಹಿಡಿದರು.

ಗಂಡು ಧ್ವನಿ: ಅಂದು ಧಾರ್ಮಿಕ ಹಬ್ಬಗಳು ಪುರಾಣ ಕೀರ್ತನಗಳು ದೇಶಭಕ್ತಿ ಬಗೆಗೆ ಜಾಗೃತಿ ಜನರಲ್ಲಿ ಒಡಮೂಡುವಂತೆ ಮಾಡಿದವು.

ಹೆಣ್ಣು ಧ್ವನಿ: ಬೆಳಗಾವಿ ಹತ್ತಿರದ ಹುದಲಿ ಹಾಗೂ ಕುಂದರನಾಡೆಂದು ಪ್ರಸಿದ್ಧಿ ಪಡೆದ ಪ್ರದೇಶಕ್ಕೊಳಪಟ್ಟಂತೆ ಕುಮರಿ ಆಶ್ರಮವಿತ್ತು. ಅಲ್ಲಿ ಒಂದು ವಾರದ ಶಿಬಿರ ನೆರವೇರಿತ್ತು. ಆಗ ಗಾಂಧೀಜಿಯವರು ಭೇಟಿ ಕೊಟ್ಟ ಬಗೆಗೆ ಸೋಮಲಿಂಗಪ್ಪ ಹೀಗೆ ಹೇಳುತ್ತಾರೆ:

(ಅವರ ಅನುಭವ ಅವರದೇ ಧ್ವನಿಯಲ್ಲಿ)

ಸೋಮಲಿಂಗಪ್ಪ ಮಳಗಲಿ : ಹುದಲಿ ತಾ. ಬೆಳಗಾಂವ ಮ್ಯಾನೇಜರ ಅಂತಾ ನನ್ನ ಕರೀತಾರ. ಪೂಜ್ಯ ಗಂಗಾಧರರಾವ ದೇಶಪಾಂಡೆ, ಪುಂಡಲಿಕಜಿ, ರಾಮಚಂದ್ರ ವಡವಿ- ಇವರ ಆಶ್ರಯದಲ್ಲಿ ನಾವು ಬೆಳದೇವಿ. ೧೯೩೭ರಲ್ಲಿ ಗಾಂಧೀ ಸೇವಾ ಸಂಘದ ಪ್ರಭಾವ ನಮ್ಮ ಮೇಲೆ ಬಿದ್ದಿದ್ದರಿಂದ ಹುದ್ಲಿಗೆ ಗಾಂಧೀಜಿಯವರು ಬಂದು ಏಳು ದಿವಸ ವಾಸ ಮಾಡಿದರು. ೧೯೩೮ನೇ ಇಸ್ವಿಯಲ್ಲಿ ಖೇರ್ ಮಂತ್ರಿಗಳಾದಾಗ ನಾವು ಸ್ವಯಂಸೇವಕರಾಗಿ ಕೆಲಸ ಮಾಡಿದೆವು. ೧೯೪೧ರಲ್ಲಿ ಜಮುನಾಲಾಲ ಖಾದಿ ವಿದ್ಯಾಲಯದಲ್ಲಿ ಟ್ರೈನಿಂಗ ಮುಗಿಸಿ ಅಲ್ಲೆ ಶಿಕ್ಷಕನಾದೆ. ೧೯೪೨ನೇ ಆಕ್ಟೊಬರ್ ೨ಕ್ಕೆ ಅಲ್ಲಿ ಇರುವಂಥ ಹದಿನಾರು ಜನರಿಂದ ಪ್ರಭಾತ್ ಫೇರಿ ತೆಗೀಬೇಕಂತ ಒಂದು ಪ್ಲಾನ ಮಾಡಿದ್ದೆವು. ಆಗ ನಮ್ಮಲ್ಲಿ ಕೆಲವೊಂದು ಮಂದಿ ಫಿತೂರಿ ಮಾಡಿ ಬಿಟ್ಟರು. ನಾವು ನಾಲ್ಕು ಜನ ಮಾತ್ರ ಉಳಿದೆವು. ಭವಾನಿಬಾಯಿ ಕಾನಗೀಡ, ಕಾರವಾರ, ಜಿ, ನಾರಾಯಣ (ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರು) ಹಾಗೂ ಈರಪ್ಪ ಮಾವಿನಮಟ್ಟಿ, ನಾವು ನಾಲ್ಕು ಜನ ಪ್ರಭಾತ ಫೇರಿ ತೆಗೆದಿದ್ದಕ್ಕೆ ೩ತಿಂಗಳ ಶಿಕ್ಷೆಯಾಯಿತು. ಆ ಶಿಕ್ಷೆಯೊಳಗ ನಾನು ಸಣ್ಣವನಿದ್ದ ಮೂಲಕ ಶಿಕ್ಷೆ ಕಡಿಮೆಯಾಯಿತು. ಉಳಿದವರಿಗೆ ಜಾಸ್ತಿ ಶಿಕ್ಷೆ ಆಯಿತು. ಫೋಜದಾರರು ನನಗೆ ಹೇಳಿದರು ''ನೀನು ಚಿಕ್ಕವನಿದ್ದಿ ಕ್ಷಮಾ ಬೇಡು'' ಅಂತಾ. ನಾನು ಪ್ರಾಣ ಹೋದರೂ ಸಹಿತ ಕ್ಷಮಾ ಬೇಡುವದಿಲ್ಲ ಅಂತ ಹೇಳಿದ್ದರ ಸಲುವಾಗಿ ಅವನಿಗೆ ಬಹಳ ಸಿಟ್ಟು ಬಂದು ಏನೇನೋ ಮಾತಾಡಿದ. ಮಾತಾಡಿಸಿಕೊಂಡು ಸಹನೆಮಾಡಿಕೊಂಡೆ. ಜೈಲಿನಲ್ಲಿ ನಾನಿದ್ದಾಗ ಕಾಲರಾ ಶುರು ಆಯಿತು. ಅವತ್ತೆ ಕಾಲರಾದಿಂದ ಒಬ್ಬರು ಸತ್ತರು. ಅದೇ ದಿವಸ ನನ್ನ ಬಿಡುಗಡೆಯಾಯಿತು. ಬಿಡುಗಡೆ ಆಗಿ ಹೊರಗೆ ಬಂದ ಮೇಲೆ ಭೂಗತರಾದಂಥ ರಾಮಚಂದ್ರ ವಡವಿ ಇವರ ಗುಂಪು ಹಿಡಿದವರಿಗೆ ಸರಕಾರ ೩೦೦೦ದಿಂದ ೫೦೦೦ ಬಹುಮಾನ ಇಟ್ಟಿದ್ದರು. ಆ ಗುಂಪಿನವರಿಗೆ ನಾನು ಕೆಲವೊಂದು ಸಹಾಯ ಮಾಡುತ್ತಲಿದ್ದೆ. ಮುಂದೆ ೧೯೪೩ನೇ ಇಸ್ವಿಯಲ್ಲಿ ಮಾರ್ಚದಲ್ಲಿ ಐದನೂರ ಜನ ಬ್ರಿಟಿಷರು ಬಂದು ನಮ್ಮಲ್ಲಿಯ ಬಹಳ ಜನರನ್ನು ಅರೆಸ್ಟ ಮಾಡಿದರು. ಅವರ ಜೊತೆ ನನ್ನನ್ನೂ ಅರೆಸ್ಟ ಮಾಡಿದರು. ಆ ಕಾಲಕ್ಕ ನನ್ನನ್ನ ಡೆಟೆನ್ಯೂ ಅಂತಾ ಕೆಲ್ಲಾ ಜೈಲ್‌ನಲ್ಲಿ ಇಟ್ಟರು.

ಭೂಗತರಾದಂಥ ''ವಡವಿಯವರು ಎಲ್ಲಿ ಇರುತ್ತಾರೆ ಹೇಳು'' ಎಂದು ತಿಳಿದುಕೊಳ್ಳಲು ಜೀಲಿನ ಅಧಿಕಾರಿಗಳು ನನಗ ಬಹಳ ಹಿಂಸೆ ಕೊಟ್ಟರು. ಸಾಕಷ್ಟು ಹೊಡೆದರು. ಅವರಲ್ಲಿ ಒಬ್ಬರು ನನಗ ಒಂದು ಪ್ರಶ್ನೆ ಮಾಡಿದರು, 'ಏನ್ ತಮ್ಮಾ ನೀನು ಏನು ಊಟ ಮಾಡುತ್ತಿ?'' ಎಂದರು. ನಾನು ''ಭಕ್ಕರಿ, ಅನ್ನ ಉಣ್ಣುತ್ತೇನೆ'' ಎಂದೆ. ಅವರು '''ಭಕ್ಕರಿ' ಅನ್ನು ಬ್ರಾಹ್ಮಣರ ಶಬ್ದ ನಿನ್ನ ಬಾಯಿಯಿಂದ ಬಂದ ಮೇಲೆ ವಡವಿಯವರು ಎಲ್ಲಿದ್ದಾರೆ ಎನ್ನುವದು ನಿನಗೆ ಗೋತ್ತಿರಲೇ ಬೇಕು. ಎಲ್ಲಿದ್ದಾರೆ ಹೇಳು'' ಎಂದು ಮತ್ತೆ ನನ್ನನ್ನು ಬಡಿದರು. ನನಗೆ ಅಳು ಬರಲಿಲ್ಲ. ಕಣ್ಣಿನೊಳಗೆ ಒಂದು ಹನಿ ನೀರು ಸಹ ಬರಲಿಲ್ಲ. 'ನನಗೆ ಗೊತ್ತಿಲ್ಲ' ಎಂಬ ಒಂದೇ ಶಬ್ದವನ್ನು ಅನ್ನುತ್ತಿದ್ದೆನು. ಮುಂದೆ ನನ್ನನ್ನು ೧೯೪೩ ನೇ ಇಸ್ವಿಯಲ್ಲಿ ಒಂದು ಸಣ್ಣ ಕ್ಯಾಂಪಿನಲ್ಲಿಟ್ಟಿದ್ದರು. ಅಲ್ಲಿ ಎರಡುನೂರು ಜನರು ಒಂದೊಂದು ಬರಾಕಿನಲ್ಲಿದ್ದರು. ಅಡಿಗೆ ಊಟದ ಮ್ಯಾನೇಜಮೆಂಟ ಮಾಡುವ ಸಲುವಾಗಿ ಮನೆಗೆ ಹೋಗಲು ನನಗೆ ಪರವಾನಗಿ ಇತ್ತು. ಎಲ್ಲಾ ಸಾಮಗ್ರಿ ತಂದು ಆಹಾರ ಪೂರೈಕೆ ಮಾಡಲು ನಾನು ಮ್ಯಾನೇಜರ ಆಗಿದ್ದೆ. ಈಗಲೂ ನನ್ನನ್ನು ಮ್ಯಾನೇಜರ ಎಂದೇ ಕರೆಯುತ್ತಾರೆ.

ಹೆಣ್ಣುಧ್ವನಿ : ಹುದಲಿಯ ಕುಮರಿ ಆಶ್ರಮದ ೮೬ವರ್ಷದ ಕಾರ್ಯಕರ್ತ, ಗಾಂಧಿಯವರು ಈ ಆಶ್ರಮಕ್ಕೆ ಬಂದಾಗ ಯುವಕನಾಗಿದ್ದ ಶ್ರೀ ಗಂಗಪ್ಪ ಯಮಕನಮರಡಿ ಹೀಗೆ ಹೇಳುತ್ತಾರೆ:

(ಅವರ ಅನುಭವ ಅವರದೇ ಧ್ವನಿಯಲ್ಲಿ)

ಗಂಗಪ್ಪ ಯಮಕನಮರಡಿ : ಅಲ್ಲಿಸಾಬ ಹುಸೇನಸಾಬ ವಾರಿಮನಿ, ವಿರುಪಾಕ್ಷ ದೊಡ್ಡಪ್ಪ ಬೆಲ್ಲದ ಮತ್ತು ನಾನು ಮೂವರು ಕೂಡಿ ಸತ್ಯಾಗ್ರಹ ಮಾಡಿದ್ದಕ್ಕಾಗಿ ಪೊಲಿಸರು ನಮ್ಮನ್ನು ಬಂಧಿಸಿದರು. ಊರಿನ ಜನರೆಲ್ಲ ನಮ್ಮನ್ನು ಕುದುರೆಯ ಮೇಲೆ ಕೂಡ್ರಿಸಿ ಮೆರವಣಿಗೆ ಮಾಡಿ ಕಳಿಸಿ ಕೊಟ್ಟಿದ್ದರು. ಜೈಲ್ ಶಿಕ್ಷೆ ಅನುಭವಿಸಿ ತಿರುಗಿ ಬಂದ ಮೇಲೆ ಹರಿಜನ ಸೇವಾ ಕಾರ್ಯ ಆರಂಭ ಮಾಡಿದ್ದರಿಂದ ಜನರು ನನಗೆ ಬಹಿಷ್ಕಾರ ಹಾಕಿದ್ದರು. ಆಗ ಗಂಗಾಧರರಾವ ದೇಶಪಾಂಡೆಯವರು ನನಗೆ ಬೆಂಬಲ ಕೊಟ್ಟಿದ್ದರು.

ಹೆಣ್ಣು ಧ್ವನಿ : ಸ್ವಾತಂತ್ರ್ಯ ಚಳುವಳಿಯ ಚಟುವಟಿಕೆ ಎಲ್ಲ ಕಡೆಗಳಂತೆ ಕುಂದರನಾಡಿಗೆ ಸೇರಿದ ಪಾಚ್ಛಾಪುರ, ಅಕ್ಕತಂಗೇರಹಾಳ,

ಅಂಕಲಗಿಯಲ್ಲಿ ಜೋರಾಗಿ ನಡೆದವು. ಮಹಿಳೆಯರಿಗೂ ಕೂಡ ದೇಶಾಭಿಮಾನದ ಜ್ವಾಲೆ ತಾಗಿತ್ತು.

ಗಂಡು ಧ್ವನಿ : ಶ್ರೀಮತಿ ಪದ್ಮಾಬಾಯಿ, ಕೃಷ್ಣಾಬಾಯಿ ಪಣಜೀಕರ ಇವರು ಮಹಿಳೆಯರನ್ನು ಹುರಿದುಂಬಿಸಿ ಕಾರ್ಯತತ್ಪರರಾಗುವಂತೆ ಮಾರ್ಗದರ್ಶನ ಮಾಡುತ್ತಿದ್ದರು.

ಹೆಣ್ಣು ಧ್ವನಿ : ಹುಬ್ಬಳ್ಳಿಯ ಈರಮ್ಮಾ ಶಿರಹಟ್ಟಿಮಠ ಇವರು ಚಳುವಳಿಯ ಹಾಡನ್ನು ನೆನಪಿಸಿಕೊಳ್ಳುತ್ತಾ ಹೀಗೆ ಹೇಳುತ್ತಾರೆ :

(ಅವರ ಅನುಭವ ಅವರದೇ ಧ್ವನಿಯಲ್ಲಿ)

ಈರಮ್ಮಾ ಶಿರಹಟ್ಟಿಮಠ : *(ಹಾಡು)*

ತರುಣರೆಲ್ಲ ಸೇರಿರೀಗ ಶಾಂತಿಯ ಸೇನಾ। ರಾಷ್ಟ್ರೀಯ ಸೇನಾ॥
ಸೇರಿ ಮಾಡಿರೀಗ ನೀವು ಜನದ ರಕ್ಷಣ । ಸ್ತ್ರೀ ಮಾನ ರಕ್ಷಣಾ॥
ದಾಳಿ ನಮ್ಮ ಮೇಲೆ ಒಮ್ಮೆ ಸಾಗಿ ಬಂದರೆ ।
ಮೇಳಗೂಡಿ ಧೈರ್ಯದಿಂದ ಜೀವ ಉಳಿಸುವ ॥
ಮೇಳಿಗಾಗಿ ಸೇರಿರೀಗ ಶಾಂತಿಯ ಸೇನಾ । ರಾಷ್ಟ್ರಿಯ ಸೇನಾ ॥
ಇಂಥ ಸೇವೆ ಮುಂದೆ ನಿಮಗೆ ದೊರೆಯಲಾರದು।
ಬಂತು ಯುದ್ಧ ನಮ್ಮ ದೇಶ ಬಾಗಿಲಿಗೆ ಅದು ॥
ಸಂತೋಷದಿಂದ ಸೇರಿರೀಗ ನೀವು ಶಾಂತಿಯ ಸೇನಾ। ರಾಷ್ಟ್ರೀಯ ಸೇನಾ ॥
ಶಿಸ್ತು ತಪ್ಪಲಾಗ ದೇಶದೊಳಗೆ ಪುಂಡರು ।
ವಸ್ತು ಒಡವೆಗಳನ್ನು ಕದ್ದು ಒಯ್ಯಲು ಬಹುದು ॥
ಶಿಸ್ತಿಗಾಗಿ ಸೇರಿರೀಗ ಶಾಂತಿಯ ಸೇನಾ । ರಾಷ್ಟ್ರೀಯ ಸೇನಾ ॥
ಸೇರಿ ಮಾಡಿರೀಗ ನೀವು ಜನದ ರಕ್ಷಣ । ಸ್ತ್ರೀ ಮಾನ ರಕ್ಷಣಾ ॥

ಮಹಾದೇವಪ್ಪ ಮುರಗೋಡ ಇವರು ತಮ್ಮ ಆಶ್ರಮದಲ್ಲಿಯೇ ಎಲ್ಲಾ ಜನರಿಗೂ ಚಳುವಳಿಗಳಿಗಾಗಿ ಸತ್ಯಾಗ್ರಹ ಮಾಡಲು ಹುರಿದುಂಬಿಸಿ ಕಾರ್ಯಕರ್ತರನ್ನು ತಯಾರ ಮಾಡಿದರು. ನಾನು ಗಿರಿಜಮ್ಮಾ ವಿರುಪಾಕ್ಷಪ್ಪಾ ಅಂಗಡಿ ಮತ್ತು ಮಹಾದೇವಿ ಬಾಪು ಮಸಳಿ ಇವರು ಕೂಡಿಕೊಂಡು ನಿಂಬಾಳ ಗ್ರಾಮದಲ್ಲಿ ಬ್ರಿಟೀಷ ಕಾಲದಲ್ಲಿ ರೇಲ್ವೆ ಮಾಲಗಾಡಿ ಉರುಳಿಸಿದೆವು. ನಾವು ಇದ್ದಲಿ ಆರಿಸುವವರಂತೆ ಬುಟ್ಟಿಯಲ್ಲಿ ಪಾನಾ ಪಕ್ಕಡ ಮುಚ್ಚಿಟ್ಟುಕೊಂಡು ರೇಲ್ವೆ ಹಳಿಗುಂಟ ಹೋಗುತ್ತಿದ್ದೆವು. ಅಲ್ಲಿ ಅತ್ತಿತ್ತ ನೋಡಿ ಹಳಿಯ

ಬೋಲ್ಟಗಳನ್ನು ಸಡಿಲುಮಾಡುತ್ತಿದ್ದೆವು. ನಂತರ ಮಾಲಗಾಡಿ ಉರುಳಿ ಬಿತ್ತು. ಜನರು ಕೂಡಿದರು. ಅಕ್ಕಿ, ಜೋಳ, ಆಹಾರ ಧಾನ್ಯ ಲೂಟಿ ಮಾಡಿ ತೆಗೆದುಕೊಂಡು ಹೋದರು. ಮತ್ತೊಮ್ಮೆ ನಾವು ಪ್ರವಾಸ ಮಾಡಲು ಪಂಢರಪೂರಕ್ಕೆ ಚಕ್ಕಡಿಯನ್ನು ತೆಗೆದುಕೊಂಡು ಹೋಗಿದ್ದೆವು. ಮರಳಿ ಬರಬೇಕಾದರೆ ರಾತ್ರಿ ಬೆಳದಿಂಗಳ ಬೆಳಕಿನಲ್ಲಿ ಎಕಲಾಸಪೂರ, ಸಿದ್ಧವಾಡಿ, ಮಲ್ಲವಾಡಿ ಎಂಬ ಹಳ್ಳಿಗಳ ಹತ್ತಿರ ಊಟಕ್ಕೆಂದು ಚಕಡಿ ನಿಲ್ಲಿಸಿದೆವು. ಆಗ ನಮಗೊಂದು ವಿಚಾರ ಹೊಳೆಯಿತು. ನಾನು ಗಿರಿಜಮ್ಮಾ, ಮಹಾದೇವಿ ಮೂವರು ಹಾದಿಯ ಬದಿಯ ಟೆಲಿಫೋನ್ ವಾಯರ ಇದ್ದ ಕಂಬಗಳನ್ನು ಹತ್ತಿ ತಂತಿ ಕತ್ತರಿಸಿದೆವು. ಮೂರು ಮೈಲುಗಳವರೆಗೆ ಹೀಗೆ ಮಾಡಿದೆವು. ತಿರುಗಿ ಊರ ಮುಟ್ಟುವದರಲ್ಲಿ ಪೋಲಿಸರು ನಮ್ಮನ್ನು ಹಿಡಿದು ಜತ್ ಜೈಲಿಗೆ ಒಯ್ದರು.

ಗಂಡು ಧ್ವನಿ : ಹುಬ್ಬಳ್ಳಿ ಅಂದ ಕೂಡಲೆ ಡಾ. ನಾ. ಸು. ಹರ್ಡೀಕರರ ಸೇವಾದಳದ ಕಾರ್ಯ, ಸರದಾರ ವೀರನಗೌಡರ ಹರಿಜನ ಬಾಲಿಕಾಶ್ರಮದ ನೆನಪು ತಟ್ಟನೆ ಬರುತ್ತದೆ.

ಹೆಣ್ಣು ಧ್ವನಿ : ಸರದಾರ ವೀರನಗೌಡರ ಪತ್ನಿ ನಾಗಮ್ಮ ಪಾಟೀಲರು ಆಗಿನ ಸಂಗತಿಗಳನ್ನು ನೆನಪಿಸಿಕೊಳ್ಳುತ್ತಾರೆ :

(ಅವರ ಅನುಭವ ಅವರದೇ ಧ್ವನಿಯಲ್ಲಿ)

ನಾಗಮ್ಮ ಪಾಟೀಲ: ೧೯೩೪ರಲ್ಲಿ ಗಾಂಧೀಜಿಯವರು ಹೇಳಿದ ಪ್ರಕಾರ ನಾನು ನನ್ನ ಮನೆಯವರು ಹರಿಜನ ಬಾಲಿಕಾಶ್ರಮವನ್ನು ಹುಬ್ಬಳ್ಳಿಯಲ್ಲಿ ತೆರೆದೆವು. ಹರಿಜನ ರಾಧಾ, ಮಥುರಾ ಎಂಬ ಇಬ್ಬರು ಹುಡುಗಿಯರನ್ನು ಕರೆದು ಕೊಂಡು ಬಂದು ಒಂದು ವರ್ಷ ಆದ ಮೇಲೆ ಇನ್ನೊಂದು ಹುಡುಗಿಯನ್ನು ಗಾಂಧೀಜಿ ಕಳಿಸಿಕೊಟ್ಟಿದ್ದರು. ರಾಜೇಂದ್ರಪ್ರಸಾದರು ಈ ಆಶ್ರಮಕ್ಕೆ ಬಂದಿದ್ದರು. ಆವರೇ ನಮ್ಮ ಈಗಿನ ಮಹಿಳಾ ವಿದ್ಯಾಪೀಠದ ಪ್ರಾರ್ಥನಾ ಮಂದಿರದ ಅಡಿಗಲ್ಲು ಇಟ್ಟವರು. ಹರಿಜನ ಹುಡುಗಿಯರಿಗೆ ಸ್ನಾನ ಮಾಡಿಸುವದು ಅಭ್ಯಾಸ ಮಾಡಿಸುವದು ಬಹಳ ಕಷ್ಟವಾಗುತ್ತಿತ್ತು. ಈ ಆಶ್ರಮ ತೆರೆದಿದ್ದರಿಂದ ನಮ್ಮ ತಂದೆ ತಾಯಿಗಳು, ಬಂಧು ಬಳಗದವರು ಯಾರೂ ಮನೆಗೆ ಬರುತ್ತಿರಲಿಲ್ಲ. ಕೆಲವು ವರ್ಷಗಳ ನಂತರ ನಾನು M.L.A. ಆದ ಮೇಲೆ

ಎಲ್ಲರೂ ಬರಹತ್ತಿದರು; ಲಗ್ನ ಮೂಹೂರ್ತಕ್ಕೂ ಕರೆಯಹತ್ತಿದರು. ಆ ಹುಡುಗಿಯರಿಗೆ ಬಟ್ಟೆ ಬರೆ ನಾನೇ ಸ್ವತ: ಹೊಲಿದು ಕೊಡುತ್ತಿದ್ದೆನು. ನಾನೇ ಅವರಿಗೆ ಅಡಿಗೆ ಮಾಡಲು, ಓದಿ, ಬರೆಯಲು ಕಲಿಸುತ್ತಿದ್ದೆನು. ಮುಂದೊಮ್ಮೆ ನೆಹರು ಅವರು ಈ ಆಶ್ರಮಕ್ಕೆ 'ಮಹಿಳಾ ವಿದ್ಯಾಪೀಠ' ಎಂದು ಹೆಸರಿಟ್ಟರು.

ಗಂಡು ಧ್ವನಿ: ಫರದಾರ ವೀರನಗೌಡರ ಮಗಳು ಲೀಲಾವತಿ ಮಾಗಡಿಯವರು ತಮ್ಮ ಅನುಭವ ಹೀಗೆ ಹೇಳುತ್ತಾರೆ:

(ಅವರ ಅನುಭವ ಅವರದೇ ಧ್ವನಿಯಲ್ಲಿ)

ಲೀಲಾವತಿ ಮಾಗಡಿ: ೧೯೩೨ರಲ್ಲಿ ನಮ್ಮ ತಂದೆ ಜೈಲಿನಲ್ಲಿದ್ದರು. ಅವರನ್ನು ಕಾಣಲಿಕ್ಕೆ ಶಾಂತಿನಿಕೇತನದಿಂದ ಬಂದಿದ್ದೆನು. ಆವರ ಭೆಟ್ಟಿಗೆ ಹೋದ ಕಾಲಕ್ಕೆ ಎಲ್ಲ ರಾಜಕೀಯ ಕೈದಿಗಳು ಜೈಲಿನಲ್ಲಿ ಸತ್ಯಾಗ್ರಹ ಮಾಡಿದ್ದರು. ನೆಕ್ ನೊಳಗಿಂದ ಇಂಟರವ್ಯು ಕೊಡುವದನ್ನು ನಿಷೇಧಿಸಿದ್ದರಿಂದ ಅವರು ಪ್ರತಿಭಟಿಸುತ್ತಿದ್ದರು. ನಾನು ಮರಳಿ ಬಂದೆನು. ಮೂರು ವರ್ಷದ ಮೇಲೆ ತಿರುಗಿ ತಂಧೆಯವರನ್ನು ಕಾಣಬೇಕೆಂದು ಹೋದೆನು. ಹೆದರಿಕೆ ಇದ್ದರೂ ಕೂಡ ನೀನು ಪುನಃ ಕಲಿಯಲು ಹೊಗಲೇಬೇಕು ಎಂದು ತಂದೆಯವರು ನನ್ನನ್ನು ಕಳಿಸಿಕೊಟ್ಟರು. ೧೯೩೩ರಲ್ಲಿ ನಮ್ಮ ತಂದೆಯವರು ಹರಿಜನ ಸೇವಾ ಸಂಘದ ಪ್ರೆಸಿಡೆಂಟರಾಗಿದ್ದರು. ಆಗ ಹರಿಜನ ಯಾತ್ರೆಯೊಳಗೆ ಕೆಲವು ದಿನ ಭಾಗ ತೆಗೆದುಕೊಳ್ಳುವ ಪ್ರಸಂಗ ನನಗೆ ಸಿಕ್ಕಿತು. ಆದಕ್ಕೂ ಮೊದಲು ೧೯೨೮ರೊಳಗೆ ಕಲ್ಕತ್ತಾದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ ಹೋಗುವಾಗ ತಂದೆಯವರು ನನ್ನನ್ನು ಜೊತೆಗೆ ಕರೆದುಕೊಂಡು ಹೋಗಿದ್ದರು. ಆ ಅಧಿವೇಶನದಲ್ಲಿ ಪಂಡಿತ ನೆಹರು, ಮತ್ತು ದೇಶದ ಎಲ್ಲಾ ಗಣ್ಯವ್ಯಕ್ತಿಗಳು ಇದ್ದರು. ಆವರ ಪ್ರಭಾವ ನನ್ನ ಮೇಲೆ ಆಯಿತು. ಹರಿಜನ ಬಾಲಿಕಾಶ್ರಮವನ್ನು ನಮ್ಮ ತಂದೆ ನಡೆಸುತ್ತಿದ್ದಾಗ ನಾನು ಜಲಂಧರದಲ್ಲಿ ಓದುತ್ತಿದ್ದೆನು. ರಜೆಯ ಕಾಲಕ್ಕೆ ಬಂದಾಗ ಮನೆಯಲ್ಲಿ ಬಾಲಿಕಾಶ್ರಮದ ಸಂಪರ್ಕ ನನಗೆ ಬಂದಿತು. ನಾವೆಲ್ಲ ಒಂದು ಎನ್ನುವ ಭಾವನೆ ನನ್ನಲ್ಲಿ ಬೆಳೆಯಿತು. ೧೯೪೨ರಲ್ಲಿ ನಾನು ಗಾಂಧೀಜಿಯ ಸೇವಾಗ್ರಾಮಕ್ಕೆ ಹೋಗಿದ್ದೆನು. ಆಗ ಆವರು ಜೈಲಿಗೆ ಹೋಗಿದ್ದರೆಂದು ತಿಳಿಯಿತು. ಮುಂದೆ ನಾನು ಕೂಡ ಚಳುವಳಿಯಲ್ಲಿ ಭಾಗವಹಿಸಿ ಬಂಧಿತಳಾಗಿ ಹಿಂಡಲಗಾ ಜೈಲಿನಲ್ಲಿದ್ದಾಗ ರಾಜಕೀಯ

ಕೈದಿಗಳಾದ ಮೃದುಲಾ ಬೆನ್, ಸಾರಾಭಾಯಿ, ಇಂದುಮತಿ ಗುಣಾದಿ, (ವಲ್ಲಭ ಭಾಯಿ ಪಟೇಲರ ಮಗಳು) ಅವರ ಸಂಪರ್ಕ ಬಂದಿತು.

(ಹಾಡು) *ಕಸ್ತೂರಿ ಬಾಯಿಯವರ ಕಮಲಾದೇವಿಯವರ*
ಸರೋಜಿನಿ ನಾಯಿಡು ಇವರ್ಯಾರ ನಾವು ಚಳುವಳಿ ಮಾಡುವವರ
ಸಿಂದಿಗಿಡ ಕಡಿವವರ, ಸೇರೆದಂಗಡಿ ಸುಡುವವರ
ಪೊಲಿಸರನ್ನ ಸದೆಬಡುವವರ, ನಾವು ಚಳುವಳಿ ಮಾಡುವವರ
ದಂಡ ಕೊಡದವರ, ಝಿಂಡಾ ಮೆರೆಸವರ,
ಬಂಡೆದ್ದ ಸರಕಾರ ಓಡಿಸುವವರ ನಾವು ಚಳುವಳಿ ಮಾಡುವವರ

ಹೆಣ್ಣು ಧ್ವನಿ: ಬೈಲುಹೊಂಗಲದ ಶ್ರೀ ಪದ್ಮರಾಜ ಬೋಗಾರ ಅವರ ಸ್ವಾತಂತ್ರ್ಯ ಚಳುವಳಿಗೆ ನಾಂದಿ ಎನಿಸಿದ ವೀರರಾಣಿ ಚನ್ನಮ್ಮನನ್ನು ಸ್ಮರಿಸುತ್ತಾ, ತಮ್ಮ ಚಳುವಳಿಯ ಅನುಭವ ಹೇಳುತ್ತಾರೆ.

(ಅವರ ಅನುಭವ ಅವರದೇ ಧ್ವನಿಯಲ್ಲಿ)

ಪದ್ಮರಾಜ ಬೋಗಾರ : ೧೯೨೪ರೊಳಗೆ ನನಗೆ ಬೆಳಗಾಂವ ಕಾಂಗ್ರೆಸ್ ಅಧಿವೇಶನದಲ್ಲಿ ಗಾಂಧೀಜಿಯವರ ದರ್ಶನವಾಯಿತು. ನಮ್ಮ ಊರಿಗೆ ಇದರಿಂದ ಆದರ್ಶ ಚೈತನ್ಯ ಶಕ್ತಿ ಬಂತು. ಅದರ ನಂತರ ೧೯೨೯ರಲ್ಲಿ ಸರದಾರ ವಲ್ಲಭಭಾಯಿ ಪಟೇಲರು ಬಂದು ''ನೀವೆಲ್ಲಾ ಒಕ್ಕಟ್ಟಾಗಿ ಈ ಬ್ರಿಟಿಷ ಸರಕಾರವನ್ನ ಹೊಡೆದೋಡಿಸಬೇಕು'' ಅಂತಾ ಅಂದಾಗ ನಮ್ಮ ಊರಿನ ಜನರಿಗೆ ಹೆಚ್ಚಿನ ಸ್ಫೂರ್ತಿ ದೊರಕಿತು. ೧೯೪೨ರಲ್ಲಿ ನಾವು ಮುಂಬೈಗೆ ಆಗಸ್ಟ್ ೮ರ ಚಲೇಜಾವ ಚಳವಳಿ ನೋಡುವ ಸಲುವಾಗಿ A.I.C.C.ಗೆ ಹೋದೆವು. ಚನ್ನಪ್ಪ ವಾಲಿ, ನಾನು, ಈರಪ್ಪ ಸುತಗಟ್ಟಿ, ಈರಪ್ಪ ರೇಶ್ಮಿ, ಹನುಮಣ್ಣ ಇತ್ಯಾದಿ ಅನೇಕರು ಅಲ್ಲಿಗೆ ಚಳುವಳಿ ನೋಡಲು ಹೋಗಿದ್ದೆವು. ಆಗ ಆ ಚಳುವಳಿಯಿಂದ ಸ್ಫೂರ್ತಿ ಪಡೆದುಕೊಂಡು ನಾವು ಬೈಲಹೊಂಗಲಕ್ಕೆ ಬರುವದರೊಳಗೆ ಏಳು ಜನರು ಬ್ರಿಟೀಷರ ಗುಂಡಿಗೆ ಆಹುತಿಯಾಗಿದ್ದರು. ನಾವೆಲ್ಲರೂ ಈ ಸೇಡು ತೀರಿಸಿಕೊಳ್ಳಬೇಕೆಂದು ಪ್ರತಿಜ್ಞೆ ಮಾಡಿ ಅಂಡರಗ್ರೌಂಡ ಇದ್ದು ಕೆಲಸ ಪ್ರಾರಂಭ ಮಾಡಿದೆವು. ಚಳುವಳಿಗೆ ತೊಡಗಿದಾಗ (೧೯೪೨ರಲ್ಲಿ) ಒಂದು ದಿನ ನಾವು ಹೊಸೂರಲ್ಲಿ ರಾತ್ರಿ ಮಲಗಿದ್ದೆವು. ನಾನು ಈರಪ್ಪ ಸುತಗಟ್ಟಿ, ಮತ್ತೆಪ್ಪ ಹಪ್ಪಳಿ, ಮಾದಪ್ಪ ಎಲಿಗಾರ, ಮಲ್ಲಪ್ಪಾ ಸುಸಲಾರ, ಶಿವಪುತ್ರಪ್ಪಾ ಚಿಕ್ಕೊಪ್ಪ, ಶಿವಪ್ಪಾ ಶರಣ್ಣನವರ

ಬಸವಣ್ಣೆಪ್ಪಾ ಡಿವ್ಹೂಡಿ, ಮಲ್ಲಪ್ಪಾ ಬೋಳಜಿ, ಶಿವಬಸಪ್ಪಾ ಬೊಳಪ್ಪನವರ ಇವರೆಲ್ಲರೂ ಜೊತೆಗೆ ಇದ್ದೆವು. ಆಗ ಒಮ್ಮಿಂದೊಮ್ಮೆಲೆ ಮಿಲಿಟ್ರಿ ನಮ್ಮ ಮೇಲೆ ಘೇರಾವ ಹಾಕಿತು. ಆಗ ಎಲ್ಲರೂ ಓಡಲು ತೊಡಗಿದರು. ಓಡುವಾಗ ನಾನು ಸೊಗಲದ ಹತ್ತಿರ ಒಂದು ದೊಡ್ಡ ಕಂದಕದಲ್ಲಿ ಬಿದ್ದೆನು. ಹಿಂದೆಯೇ ಗುಂಡು ಹಾರಿತು. ನನಗೆ ಗುಂಡು ಬಡಿದಿರಲಿಲ್ಲ. ಕಂದಕದಲ್ಲಿ ಮುಳ್ಳಿನ ಕೊಂಪೆಯ ಮೇಲೆ ಬಿದ್ದದ್ದರಿಂದ ಮೈತುಂಬ ಮುಳ್ಳು ಚುಚ್ಚಿ ಘಾಯವಾಗಿದ್ದವು. ಅದರಲ್ಲೇ ಬಿದ್ದಿದ್ದೆನು. ನಮ್ಮ ಜನ ''ಅಯ್ಯೋ ನಮ್ಮ ಪದ್ಮರಾಜ ಬೋಗಾರ ಅವರಿಗೆ ಗುಂಡು ಬಡಿಯಿತು.'' ಎಂದು ಅನ್ನುತ್ತ ಹೊರಟಿದ್ದು ನನಗೆ ಕೇಳಿಸಿತು. ಆಗ ನಾನು, ''ಇಲ್ಲಿ ಕಂದಕದಾಗ ಅದೇನಿ ನಾನು ಇನ್ನೂ ಜೀವಂತ ಇದ್ದೀನಿ ಬರ್ರಿ'' ಅಂದೆನು. ಆಗ ಎಲ್ಲರೂ ಸೇರಿ ನನ್ನನ್ನು ಹೊರಗೆ ತೆಗೆದು ಹೆಗಲಮೇಲೆ ಕೂಡ್ರಿಸಿಕೊಂಡು ಹೊರಟರು. ಆಗ ಮತ್ತೆ ಮಿಲಿಟ್ರಿಯವರು ಬೆನ್ನು ಹತ್ತಿದರು. ಆವಾಗ ನಾವು ಅಮಟೂರಲ್ಲಿ ಶಿವಲಿಂಗಪ್ಪ ಸಾತನವರ ತೋಟದಲ್ಲಿ ಆಶ್ರಯಪಡೆದೆವು. ಅಲ್ಲಿ ಬನ್ನೂರ ಲಮಾಣಿಯವರಿದ್ದರು. ಅವರು ಒಳಗೆ ಒಂದು ಬಗದೆ ತೆಗೆದು ಅಲ್ಲಿ ನಮ್ಮನ್ನಿಟ್ಟು ಜೋಪಾನ ಮಾಡಿದರು. ನನ್ನ ಕಾಲು ಕೈ ಬಾತಕೊಂಡವು. ಮುಳ್ಳು ಚುಚ್ಚಿ ಪೆಟ್ಟು ಹತ್ತಿದ್ದು ತೊಂದರೆ ಆಗಿತ್ತು. ಸಂಕನಗೌಡರು ನನ್ನನ್ನು ಕರೆದುಕೊಂಡು ಹೋಗಿ ಜಾಲಾಪುರದಲ್ಲಿ ಇಟ್ಟು ಗಿಡದ ಹುಬ್ಬಳ್ಳಿಯ ಡಾಕ್ಟರರನ್ನು ಕರೆತಂದು ಆರೈಕೆ ಮಾಡಿಸಿ ಗುಣಪಡಿಸಿದರು. ನಾನು ಮತ್ತೆ ಚಳುವಳಿಗೆ ತೊಡಗಿದೆನು. ೧೮೨೪ರಲ್ಲಿ ಕಿತ್ತೂರ ಚೆನ್ನಮ್ಮ ಮಾಡಿದ ಚಲೆಜಾವ್ ಆಂದೋಲನ ನಮಗ ಮುಖ್ಯವಾಗಿ ಬೈಲಹೊಂಗಲ ತಾಲೂಕಿಗೆ ಬೆಳಗಾಂವ ಜಿಲ್ಲೆಗೆ ಕಿತ್ತೂರ ನಾಡಿಗೆ ಆದರ್ಶಪ್ರಾಯವಾದದ್ದು. ನಮ್ಮ ಚಳುವಳಿಗೆ ಆ ತಾಯಿಯದೇ ನಮಗೆ ಪ್ರೇರಣೆ.

ಕಾಡಪ್ಪಣ್ಣಾ ಹೊಸೂರ : *(ಹಾಡು)*

ಎತ್ತರ ಕನ್ನಡ ನಾಡಿನ ಅಧಿಕಾರ ಕನ್ನಡತಿ ಮಾಡತ್ತಿದ್ದರ
ಫಿರಂಗ್ಯಾರದೇನ ಹೋಗತ್ತಿತ್ತ ಗಂಟಾ ಗೀ ಗೀ ಗೀ
ಕನ್ನಡ ಸಂಸ್ಥಾದ ಮೇಲೆ ಕಾರ್ಭಾರ ಮಾಡುತ್ತಿದ್ರ
ಥ್ಯಾಕರೆ ಸಾಹೇಬ ಇವ ಹೊಡೆದ ಲಗಾಟ ಹರ ಗೀ ಗೀ ಗೀ

ಗಂಡು ಧ್ವನಿ : ಇದೇ ಕಿತ್ತೂರಿನಲ್ಲಿ ಹುಟ್ಟಿದ ನಾಗನೂರಿಗೆ ಸೊಸೆಯಾಗಿ ಹೋದ ಶ್ರೀಮತಿ ನಾಗಮ್ಮನವರ ಇತಿಹಾಸ ನೆನಪಿಸಿಕೊಂಡಾಗ

ಮೈನವಿರೇಳುತ್ತದೆ. ಆ ಪ್ರಸಂಗ ಹೀಗಿದೆ :

(ಇಂಗ್ಲೀಷರ ವಾಹವವೊಂದು ನಾಗನೂರಿನ ಮನೆಯೊಂದರ ಮುಂದೆ ಬಂದುನಿಂತಿದೆ)

ಇಂಗ್ಲೀಷರ ಅಧಿಕಾರಿ : ಯಾರಲ್ಲಿ? ಶಿವನಾಯಕ, ದುಂಡಪ್ಪ ಹೊರಗೆ ಬಾ. ಮನೆಯೊಳಗೆ ಯಾಕೆ ಅಡಗಿಕೊಂಡಿದ್ದಿ ? ಹೊರಗೆ ಬಾ. ಓಹೊ ಬಾಗಿಲಿಗೆ ಗಾಂಧೀ ಫೊಟೋ ಹಾಕೀದಿ?

(ಆಸ್ಥತ್ತ ಫೊಟೋ ಕಿತ್ತುಕೊಂಡು ಒಗೆದು ಕಾಲಿನಿಂದ ತುಳಿಯುತ್ತಾನೆ.)

ನಾಗಮ್ಮ : ಮನ್ಯಾಗ ಗಂಡಸುರ ಯಾರ ಇಲ್ಲಾ. ಹೊಲಕ್ಕೆ ಹೋಗ್ಯಾರ ಮತ್ತ ನಮ್ಮ ಮನಿಯೊಳಗ ಕಾಲಿಡಬೇಡ.

ಇಂಗ್ಲೀಷರವನು : ಗಾಂಧೀ ಫೊಟೋ ಯಾಕೆ ಹಾಕಬೇಕು? ನೀವು ಚಳುವಳಿ ಮಾಡವರ ಇದ್ದೀರಿ.

ನಾಗಮ್ಮ : ಏ ತಂಗಿ ನೀಲವ್ವ ಮಲ್ಲವ್ವ ಆ ಕಾಲ್ಮರಿ ಗೂಡಿನೊಳಗಿನ ತಟ್ಟಲಿ ತಗೊಂಡು ಬಾ ಇಲ್ಲಿ, ಈ ಕೆಂಪ ಮಾರಿಯವ್ನ ಚಲೋತಂಗ ಬುದ್ಧಿ ಕಲಿಸೂನ ನಮ್ಮಪ್ಪ ಗಾಂಧೀಗೆ ಅವಮಾನ ಮಾಡ್ತಾನ.

ಮಲ್ಲವ್ವಾ : ''ತಗೊ ಯಕ್ಕಾ! ಹಳೆ ತಟ್ಟಲೀನs ತಂದೇನಿ ನೋಡು, ಹಾಕವ್ನ, ಹಣಿ ಅವ್ನ.

(ಬ್ರಿಟೀಷ ಅಧಿಕಾರಿಯನ್ನು ಬಡಿಯುತ್ತಾರೆ)

(ಇಬ್ಬರ ನಡುವಿನ ಗಲಾಟೆಯ ಶಬ್ದ ಆಷ್ಟರೊಳಗೆ ಓಣಿಯ ಜನರೆಲ್ಲ ಕೊಡುತ್ತಾರೆ. ಆವನಿಗೆ ಅಪಮಾನವಾಗಿ ಹಿಂತಿರುಗಿ ಹೊರಟನು.)

ನಾಗಮ್ಮ : ಸಾಹೇಬ ನಿನಗ ಹಂಗs ಹೇಳಿದ್ರ ತಿಳಿಯಲಿಲ್ಲ ಅಂತ ಕಾಣತೈತಿ. ನಮ್ಮಪ್ಪ ಗಾಂಧೀ ಫೊಟೋ ತುಳಿದು ನಮ್ಮ ಮಾನಾ ಕಳದಿ, ಅದಕ್ಕೆ ಹಿಡಿ ಇನ್ನೊಮ್ಮೆ ಈ ಹರಕ ತಟ್ಟಲಿಯ ಪೆಟ್ಟಾ *(ಎಂದು ಮತ್ತೆ ಹೊಡೆಯುತ್ತಾಳೆ)*

ಗಂಡು ಧ್ವನಿ : ಆಗ ಬ್ರಿಟೀಷ ವೈಸ್ ರಾಯನು ಅಪಮಾನವಾಗಿ ಇಂಗು ತಿಂದ ಮಂಗನಂತೆ ಹೇಳದೆ ಕೇಳದೇ ಗಾಡಿ ಹತ್ತಿ ಹೊರಟು ಹೋದ ಘಟನೆಯನ್ನು ಅವಿಸ್ಮರಣೀಯವೆಂದು ಹೇಳಬಹುದು.

ಹೆಣ್ಣು ಧ್ವನಿ : ಈ ಪ್ರಕಾರವಾಗಿ ಬೈಲಹೊಂಗಲ ತಾಲ್ಲೂಕ್ಕಿನಲ್ಲಿ ಆಗಿ ಹೋದ ವೀರ ಸಂಗೊಳ್ಳಿ ರಾಯಣ್ಣನನ್ನು ನೆನಪಿಸಿಕೊಳ್ಳಬಹುದು. ಸ್ವಾತಂತ್ರ್ಯ

ಚಳುವಳಿಯಲ್ಲಿ ಭಾಗವಹಿಸಿದ ಸಂಪಗಾವಿಯ ಶ್ರೀ ವಾಲಿ ಚನ್ನಪ್ಪನವರ ಹೆಸರನ್ನು ಕೇಳದ ಜನರೇ ಇಲ್ಲವೆಂದು ಹೇಳಬಹುದು. ಮೂಗಬಸವದ ಹುದ್ದಾರ ಅವರು ಶಾಲಾಬಾಲಕನಾಗಿ ಚಳುವಳಿಗೆ ಇಳಿದವರು.

(ಆವರ ಅನುಭವ ಅವರದೇ ಧ್ವನಿಯಲ್ಲಿ)

ಸುಬ್ಬರಾವ ಹುದ್ದಾರ : ನಮ್ಮ ದೇಶದಲ್ಲಿ ಆಗ ಕ್ವಿಟ್ ಇಂಡಿಯಾ ಚಳುವಳಿ ಒಳ್ಳೆ ಜೋರಿನಿಂದ ನಡೆದಿತ್ತು. ಆಗ ನಾನು ಶಾಲೆಯ ವಿದ್ಯಾರ್ಥಿ ಇದ್ದೆ. ಏಳನೆಯ ಇಯತ್ತೆ ಕಲಿಯುತ್ತಿದ್ದೆ. ಬೆಳವಡಿಯಲ್ಲಿ ನಮ್ಮ ಗುರುಗಳು ಶಿವಯ್ಯ ಕಾರಿಮನಿ ಮತ್ತು ಗಂಗಪ್ಪ ಬೆಳವಡಿ ಗುರುಗಳು ಮಹಾತ್ಮಾ ಗಾಂಧೀಜೀ ಮತ್ತು ನೆಹರು ಅವರ ಅನೇಕ ಸ್ವಾತಂತ್ರ್ಯವೀರರ ಕಥೆಗಳನ್ನು ಹೇಳುತ್ತಿದ್ದರು. ಅದರಿಂದ ನಾವು ಸ್ಫೂರ್ತಿಗೊಂಡು ಚಳುವಳಿ ನಡೆದ ಕಾಲಕ್ಕೆ ನಾವು ಭಾಗವಹಿಸಬೇಕೆಂದು ಹೇಳಿ ನನ್ನ ಗೆಳೆಯ ಚನ್ನಮಲ್ಲಯ್ಯ ಕಾರಿಮನಿ, ಮೂರುಸಾಬ ನದಾಫ್ ಎಲ್ಲರೂ ಕೂಡಿಕೊಂಡು ಮಾತಾಡಿಕೊಂಡು ನಾವು ಚಳುವಳಿಯಲ್ಲಿ ಭಾಗವಹಿಸಿದ್ದೆವು.

(ಮಧ್ಯಂತರ ವಾದ್ಯ)

(ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಹೊಸೂರ ಎಂಬ ಒಂದು ಹಳ್ಳಿಯ ರಸ್ತೆಯ ಮೇಲೆ ಪೋಲಿಸನೊಬ್ಬ ಕೈಯಲ್ಲಿ ಕೋಲು ಹಿಡಿದು ನಿಂತು ಒಂದು ಕಟ್ಟೆಯ ಮೇಲೆ ಕೂತವನನ್ನು ಮಾತನಾಡಿಸುತ್ತಿರುವಾಗ)

ಗಂಡು ಧ್ವನಿ : ಏ ನಿನ್ನ ಹೆಸರ ಏನ ? ಏನ ಮಾಡಾಕತ್ತಿ ?

ಉತ್ತರ : ನನ್ನ ಹೆಸರ ಬಸ್ಸಪ್ಪರಿ. ನನಗ ಮುತವಾಡ ಶರಣ ಅಂತಾರರಿ. ನಾನು ನಾರ ಹೊಸ್ಯಾಕ ಹತ್ತೀನಿ, ಪೋಲಿಸಪ್ಪ.

ಪೋಲಿಸ : ಏ ಬಸ್ಯಾ, ಎದ್ದು ಬಾರಲೇ, ನಮ್ಮ ಸಾಹೇಬ್ರು ಬಿಟ್ಟಿಗೆ ಕರ್ಯಾಕತ್ತಾರ. ಗುಡಾರ, ಚಕ್ಕಡಿ, ಹಾಲು, ಮೊಸರು ತಂದು ಕೊಡು ನಮ್ಮ ಸಾಹೇಬ್ರಿಗೆ.

ಬಸ್ಸಪ್ಪಾ : ಏ ಇಲ್ಲಿ ಬಿಡ್ರಿ ಯಪ್ಪಾ. ನಾ ಬಿಟ್ಟಿಗ ಬರುದಿಲ್ಲಾ ಬಿಡ್ರಿ. ಹಂಗ ನೇಮದ ಕಾಯಕ ಬಿಟ್ಟು ಬೇರೇದ ಮಾಡುದಿಲ್ಲಾ ಬಿಡ್ರಿ.

ಪೋಲಿಸ : ಏನಂದೀ? ಸಾಹೇಬ್ರ ಕರದ್ರ ಬರುದಿಲ್ಲs ನೀ. ಹೇಂಗ ಬರುದಿಲ್ಲ ನೋಡೇ ಬಿಡ್ತಿನಿ, ಒಂದು ಕೈ ಬಾರಲೆ ಸುಮ್ಮನೆ ಏನ್ಮಾಡತ್ತಿದಿ.

ಬಸ್ಸಪ್ಪ : ನನ್ನ ಕೈ ಹಿಡಿಬೇಡಾ ದೂರಕ ಇರ್ರಿ''ಏ ಬಾಳಪ್ಪ, ಏ ರಾಚಪ್ಪ, ಏ ದ್ಯಾಮಣ್ಣ'' *(ಎಂದು ಗೆಳೆಯರನ್ನು ಕೂಗುವನು.)*

ಚೆನ್ನಣ್ಣಾ : ಏ ಬರ್ರೊ ೀ ಲಗು ಬರ್ರೊ ೀ
(ಎಂದು ಗಲಾಟೆ ಮಾಡುವನು. ಬಂದೆ ಬಂದೆ ಎಂದು ಎಲ್ಲರೂ ಬರುವರು.)

''ವಂದೇ ಮಾತರಂ'' *(ಜಯಘೋಷ ಮಾಡಿದರು.)*

ಗಂಡು ಧ್ವನಿ: ಪೋಲಿಸರು ಬಸಪ್ಪನನ್ನು ಎಳೆದುಕೊಂಡು ಹೊರಟಾಗ ಊರ ಜನ ಒಬ್ಬೊಬ್ಬರಾಗಿ ಕೂಡಿಕೊಂಡು ಹೋಗುವಷ್ಟರಲ್ಲಿ ದೊಡ್ಡ ಗುಂಪು ಆಯಿತು. ಜನಜಂಗುಳಿ ಕಲ್ಲು ತೂರಾಟಕ್ಕೆ ಅಣಿಯಾದಾಗ ಪೋಲಿಸರು ಹುಸಿಗುಂಡು ಹಾರಿಸಬೇಕಾಯಿತು.
(ಗುಂಡು ಹಾರಿಸುವ ಶಬ್ದ)

ಹೆಣ್ಣು ಧ್ವನಿ: ಇನ್ನೂ ಧಾರವಾಡ ಜಿಲ್ಲೆಯಲ್ಲಿ ತಿಪ್ಪಣ್ಣ ಶಾಸ್ತ್ರಿಗಳಿಂದ ದೇಶಭಕ್ತಿಗೆ ಪ್ರೇರಣೆ ನೀಡುವ ಭಾಷಣ ಪ್ರವಚನ ಕಾರ್ಯ ಅವಿರತವಾಗಿ ನಡೆದೇ ಇತ್ತು. ಹಳ್ಳಿಕೇರಿ ಗುದ್ಲೆಪ್ಪ ದೊಡ್ಡಮೇಟಿ ಅಂದಾನಪ್ಪ, ಮೈಲಾರ ಗುಂಪು ಎಡೆಬಿಡದೆ ಕಾರ್ಯನಿರ್ವಹಿಸುತ್ತಿದ್ದವು.

ಗಂಡು ಧ್ವನಿ : ಲಕ್ಷ್ಮೇಶ್ವರ ತಾಲ್ಲೂಕಿನ ಶಿಗ್ಲಿಯಲ್ಲಿ ಚಳುವಳಿಯ ಬಗ್ಗೆ ಶ್ರೀ ಬಸವಕುಮಾರ ಮುಳಗುಂದಮಠರು ಆಗಿನ ಸಂಗತಿಗಳನ್ನು ನೆನಪಿಸಿಕೊಳ್ಳುತ್ತಿದ್ದಾರೆ.

(ಅವರ ಅನುಭವ ಅವರದೇ ಧ್ವನಿಯಲ್ಲಿ)

ಶ್ರೀ ಬಸವಕುಮಾರ : ನಾನು ೧೯೩೬ನೇ ಇಸ್ವಿಯಲ್ಲಿ ಶಿಕ್ಷಣ ಮುಗಿದ ಕೂಡಲೇ ಈ ಸ್ವಾತಂತ್ರ್ಯ ಹೋರಾಟ ಮತ್ತು ರಾಷ್ಟ್ರೀಯ ಕಾರ್ಯಕ್ಷೇತ್ರದೊಳಗ ಬಂದೆ. ಕಳ್ಳಿ ತಿಪ್ಪಣ್ಣಶಾಸ್ತ್ರಿಗಳನ್ನು ಕರೆದುಕೊಂಡು ಹೋಗಿ ಊರೊಳಗ ರಾಷ್ಟ್ರೀಯ ಜಾಗೃತಿಯನ್ನು ಮಾಡಿ, ಯುವಕರ ಸಂಘಟನೆ ಮಾಡಿ ಅಲ್ಲೆಲ್ಲ ಈ ಹೋರಾಟದ ಒಂದು ಭೂಮಿಕೆಯನ್ನು ನಿರ್ಮಾಣ ಮಾಡಿದ್ದೆನು. ಯುವಕರಿಗೆ ಸೇವಾದಲದ ಮುಖಾಂತರ ಮತ್ತು ಬಾಕಿಯವರಿಗೆಲ್ಲ ರಾಷ್ಟ್ರೀಯ ಕಾರ್ಯಕ್ಕೆ ಜಾಗೃತಗೊಳಿಸಿ ಇಡೀ ಊರಿಗೆ ಗ್ರಾಮ ಸ್ವರಾಜ್ಯದ ದೃಷ್ಟಿಯಿಂದ ಒಂದೂ ನ್ಯಾಯ ಹೊರಗೆ ಹೋಗದಂತೆ ಮಾಡಿದೆನು. ಪೋಲಿಸರು ನಮ್ಮ

ಊರೊಳಗ ಕಾಲಿಡದಂತೆ, ಸರಕಾರದ ಯಾವುದೂ ಪ್ರತ್ಯಕ್ಷ ಸಂಬಂಧ ಇರದಂತೆ ವ್ಯವಸ್ಥಿತ ಸಂಘಟನೆಯನ್ನು ನಡೆಸಿಕೊಂಡು ಬಂದೆವು. ಮೊದಲು ಸಿಗ್ಲಿಗೆ ಬಂದೆ. ಒಂದೇ ಒಂದು ಗ್ರಾಮ ಇತ್ತು. ಆಮೇಲೆ ಅದು ಲಕ್ಷ್ಮೇಶ್ವರ ತಾಲ್ಲೂಕು ಪೂರ್ಣವ್ಯಾಪಿಸಬೇಕೆಂಬ ದೃಷ್ಟಿಯಿಂದ ಲಕ್ಷ್ಮೇಶ್ವರಕ್ಕೂ ಕೂಡ ಒಂದು ಸಾರ್ವಜನಿಕ ಸಭೆಯನ್ನು ಮಾಡಿ ತಾಲ್ಲೂಕಾ ಮಟ್ಟದ ಚಳುವಳಿಯ ಸ್ವರೂಪವನ್ನು ಕೊಡುವದಕ್ಕಾಗಿ ರಾಯಪ್ಪನವರು ಭರಗಾಲಿ ಇವರ ನೇತೃತ್ವದೊಳಗೆ ಒಂದು ಸಾರ್ವಜನಿಕ ಸಭೆಯನ್ನು ಮಾಡಿದೆವು. ಅಲ್ಲಿ ವಕೀಲರೆಲ್ಲರು ಕೂಡಿ ಘೋಷಣೆ ಮಾಡಿದರು. ಅದರ ಪರಿಣಾಮವಾಗಿ ಸರಕಾರಕ್ಕೆ ಬಹಳ ತೊಂದರೆಯಾಗಿ ನಮ್ಮ ಊರಿನ ಸಿದ್ಧಯ್ಯ ಕೂಡಲಿಮಠ ಎಂಬ ಒಳ್ಳೆಯ ಪ್ರಖ್ಯಾತ ನೀತಿವಂತ ಮನುಷ್ಯರಾಗಿದ್ದವರ ಅಂಗಡಿಯಿಂದ ಮೂವತ್ತೆರಡು ಚಿಮಣಿ ಎಣ್ಣೆ ಡಬ್ಬಿಗಳನ್ನು ಜಪ್ತು ಮಾಡಲಿಕ್ಕೆ ಪೋಲಿಸರು ಬಂದರು ಆಗ ಇಡೀ ಊರು ಮೂಕ ಪ್ರತಿಭಟನೆಯನ್ನು ಮಾಡಿತು. *(ನಿಂತು ನೋಡುವದಷ್ಟೆ ಏನು ಮಾಡುವದಿಲ್ಲ)* ಅದರಿಂದ ಸರಕಾರದ ಮೇಲೆ ಹೆಚ್ಚಿನ ಪರಿಣಾಮವಾಯಿತು. ಯಾರೂ ಯಾವುದೂ ಪ್ರತಿಕಾರ ಮಾಡಲಿಲ್ಲಾ. ಅಹಿಂಸಾತ್ಮಕ ಹೋರಾಟವೇ ನಮ್ಮದು ಎಂಬುದನ್ನು ವ್ಯಕ್ತ ಮಾಡಿದರು.

ಈ ದೃಷ್ಟಿಯಿಂದ ಸಂಸ್ಥಾನದ ದಿವಾಣರೇ ಸ್ವತಃ ಸಿಗ್ಲಿಗೆ ಬಂದಾಗ ನಮ್ಮ ಊರವರೆಲ್ಲರೂ ಕೂಡಿ ನಿರ್ಣಯ ಮಾಡಿದ ಪ್ರಕಾರ ಗ್ರಾಮದ ಅಧಿಕಾರಿಗಳು ಗೌಡರು, ಶಾನಭೋಗರು ಕೂಡಿ ದಫ್ತರ ಕಟ್ಟಿದ ಒಂದ ಪೆಂಡಿಯನ್ನು ಒಂದು ಜಮಕಾನೆ ಹಾಸಿ ಅದರ ಮೇಲೆ ಇಟ್ಟಿದ್ದರು. ಹತ್ತಿರದಲ್ಲಿ ಕೊಡ ನೀರು, ಒಂದು ತಂಬಿಗೆ, ಒಂದು ವಾಟಿ. ದಿವಾನ ಸಾಹೇಬರು ಬಂದ ಕೂಡಲೆ ಊರಿನ ಗೌಡರಾದ ಯಶವಂತರಾವ ಪಾಟೀಲರು ಹೇಳಿದರು. ''ನಾವು ನಿಮ್ಮ ನೌಕರರು ಹೇಗೋ ಹಾಗೆಯೇ ಊರಿನ ಪ್ರಜೆಗಳು. ನಮಗ ನಿಮ್ಮ ನೌಕರಿ ಬಿಟ್ಟರ ನಡಿತೈತಿ, ಊರಿನವರ ಮಾತು ಮಾತ್ರ ಮೀರಾಕ ನಮಗ ಆಗುವದಿಲ್ಲ. ಈ ದೃಷ್ಟಿಯಿಂದ ನಾವು ಈಗ ಇನ್ನೊಂದು ವಾಟಗ ನೀರ ಕೊಡ್ರಿ ಅಂತ ಅಂದರ ನಮ್ಮಿಂದ ಸಾಧ್ಯವಿಲ್ಲ ನೋಡಿರಿ. ಇಷ್ಟಕ್ಕ ನೀವು ಇರಲಿ ಅಂದ್ರ ಇಟಕೋಬಹುದು. ಬ್ಯಾಡ ಅಂದರೆ ನಿಮ್ಮ ದಫ್ತರ ಇಲ್ಲಿ ಗಂಟಕಟ್ಟಿ ತಯಾರಿ ಇಟ್ಟೇವಿ. ನೀವು ತಗೊಂಡು ಹೋಗಬಹುದು'' ಅಂತ ಹೇಳಿದರು. ಆಗ ದಿವಾನ ಸಾಹೇಬರಿಗೆ ಏನು ಮಾಡಬೇಕೆಂದು ದಿಕ್ಕು ತಿಳಿಯಲಿಲ್ಲ. ಸುಮ್ಮನೇ

ಎದ್ದು ಹೊರಟರು. ಹುಡುಗರು ನುಸಗುನ್ನಿ ಪುಡಿಯನ್ನು ದಿವಾಣರ ಕಾರಿನೊಳಗೆಲ್ಲಾ ಸಿಂಪಡಿಸಿ ಬಿಟ್ಟಿದ್ದರು. ಊರ ಆಗಸಿಗೆ ಬೇಲಿ ಹಚ್ಚಿದ್ದರು. ದಿವಾನ ಸಾಹೇಬರಿಗೆ ಲಕ್ಷ್ಮೀಶ್ವರ ಮುಟ್ಟುವದು ಬಹಳ ದುಸ್ತರ ಆಯಿತು. ಈ ರೀತಿ ೧೯೪೨ರ ಚಳುವಳಿಯಲ್ಲಿ ಮಹಾದೇವಪ್ಪಾ ಮೈಲಾರ ಅವರು - ಹಿಂಸೆ, ಅಹಿಂಸೆ, ಈ ಗೊಂದಲದೊಳಗ ನಾನು ಬಿದ್ದಾಗ ಅವರು ಬಂದು ಒಂದು ದಿವಸ ಕೂತು ನನ್ನ ತಲೆಯೊಳಗಿನ ಗೊಂದಲವನ್ನೆಲ್ಲ ತೆಗೆದು ''ಹೋರಾಟದ ಸ್ವರೂಪ ಇದೇ'', ಅಂತ ಹೇಳಿ ಎಲ್ಲರೂ ಒಪ್ಪಿದ್ದಾರೆ, ನಾವು ಹಾಗೇಯೇ ಮಾಡೋಣವೆಂದು ಅಂದಾಗ ಒಪ್ಪಿ ಗೆಳೆಯರೆಲ್ಲರೂ ಹೊರಟೆವು. ಮಾತಾಡಿಕೊಂಡು ಆ ಹೋರಾಟದೊಳಗ ಭಾಗತೆಗೆದುಕೊಂಡೆವು. ಸಿಗ್ನಿಯ ಟಪಾಲ ಅಪಹರಣ ಮಾಡಿದೆವು. ಸವಣೂರ ಸ್ಟೇಶನ್ ಸುಟ್ಟೆವು. ನಂತರ ನಾವು ಇನ್ನು ಒಂದಿಷ್ಟು ಕಾರ್ಯಕ್ರಮ ಮಾಡಿ ಪ್ರತ್ಯಕ್ಷ ಆ ಗುಂಪಿನೊಳಗೆ ಹೋಗ ಬೇಕೆಂದು ನಾವು ವಿಚಾರ ಮಾಡಿದ್ದೆವು. ನಮ್ಮನ್ನು ನಮ್ಮ ಮಿತ್ರರನ್ನು ಬಂಧಿಸುವ ಪ್ರಸಂಗ ಬಂದು, ಬಂಧನ ಆಯಿತು.

ಆಲ್ಲಿ ಕಾರಾಗೃಹದೊಳಗೆ ನಾವು ಅತ್ಯಂತ ಸೌಮ್ಯ ರೀತಿಯಲ್ಲಿದ್ದೆವು. ಸವಣೂರು ಸ್ಟೇಷನ್ ಸುಟ್ಟಿದ್ದ ಪ್ರಕರಣ ಧಾರವಾಡ ಜಿಲ್ಲೆಯೊಳಗಷ್ಟೇ ಆಲ್ಲ ಕರ್ನಾಟಕದೊಳಗ ಮೊಟ್ಟ ಮೊದಲನೆಯ ಪ್ರಕರಣ. ಅದಕ್ಕಾಗಿ ಸ್ಪೇಶಲ್ ಜಜ್ಞ್ ಕೋರ್ಟ ಮಾಡಿದರು. ನಾವೆಲ್ಲರೂ ಖರೇ ಹೇಳುವದನ್ನು ಅವರು ನೋಡಿ ಜಜ್‌ಮೆಂಟಿದೊಳಗ ಬರೆದರು. ''ನೀವೇನು ಇಷ್ಟು ಖರೆ ಮತ್ತು ಸ್ಪಷ್ಟವಾದ ಮಾತುಗಳನ್ನೇ ಹೇಳ್ತೀರಿ. ಅದಕ್ಕಾಗಿ ಸರಕಾರ ಏನೂ ಮಾಡಬಾರದಾಗಿತ್ತು. ಆದರ ಇವತ್ತಿನ ಸನ್ನಿವೇಶದಲ್ಲಿ ಇದು ಅನಿವಾರ್ಯ ಐತಿ, ಮಾಡಬೇಕಾಗುತ್ತದೆ.'' ಎಂದು ಶಿಕ್ಷಾ ಮಾಡಿದರು. ನಮ್ಮನ್ನು ಬೇರೆಬೇರೆ ಜೇಲಿನೊಳಗ ಐದು ವರ್ಷದ ಶಿಕ್ಷೆ ವಿಧಿಸಿ ಇಟ್ಟಿದ್ದರು. ಮೂರುವರಿ ವರ್ಷ ಜೇಲ ಅನುಭೋಗಿಸಿ ನಾವು ಹೊರಗೆ ಬಂದೆವು. ಹೀಗೆ ಈ ಸ್ವಾತಂತ್ರ್ಯ ಸಂಗ್ರಾಮದೊಳಗ ಸಿಗ್ಲಿ ಉತ್ತಮವಾದ ಪಾತ್ರ ನಿರ್ವಹಿಸಿದೆ.

ಹೆಣ್ಣುಧ್ವನಿ : ಮಹಾದೇವ ಮೈಲಾರರ ಜೊತೆಗೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮಕಿದ ಶ್ರೀ ವೀರಣ್ಣಾ ಗುರುಬಸಪ್ಪಾ ಅಂಗಡಿ ಅವರು ಅಂದಿನ ಚಿರ ಸ್ಮರಣೆಯ ಘಟನೆಗಳನ್ನು ಮೆಲಕು ಹಾಕುತ್ತಾರೆ.

(ಅವರ ಅನುಭವ ಅವರದೇ ಮಾತಿನಲ್ಲಿ)

ವೀರಣ್ಣಾ ಅಂಗಡಿ : ನಾನು ೧೯೪೨ರಲ್ಲಿ ಹೆಬ್ಬಾಳದೊಳಗ ಮುಲ್ಕೀ ಪರೀಕ್ಷಾ ಅಭ್ಯಾಸ ಮಾಡುತ್ತಿದ್ದೆ. ಆವಾಗ ಅನೇಕ ಜನ ರಾಷ್ಟ್ರೀಯ ಮುಖಂಡರು ಬಂದು ಅಲ್ಲಿ ಭಾಷಣಾ ಮಾಡುತ್ತಿದ್ದರು. ಅದರ ಪರಿಣಾಮ ನನ್ನ ಮೇಲೆ ಆಗಿ ರಾಷ್ಟ್ರೀಯ ಭಾವನಾ ಉಕ್ಕೇರುತ್ತಿತ್ತು. ಆಗ ಮಹಾದೇವ ಮೈಲಾರರ ೧೯೪೨ರ ಚಳುವಳಿಯ ಕೆಲಸ ಸುರುವಾಗಿತ್ತು. ಅದರೊಳಗ ನಾನೂ ಕೂಡಾ ಭಾಗವಹಿಸಿದ್ದೆ. ಆ ಗುಂಪಿನೊಳಗ ಅನೇಕ ಜನ ನಮ್ಮ ಮಿತ್ರರೂ ಕೂಡಾ ಚೆನ್ನೂರಿನಿಂದ ಗೋಣೆಪ್ಪಾ ಕಮತಗಿ, ಗುಡ್ಡಪ್ಪ ಬೆಳ್ಳಿಪ್ಪನವರ, ಆರ್. ಬಿ. ಕುರಗುಂದ, ನಿಂಗಪ್ಪಾ ಕುರುಗುಂದ, ಹೊಳಿಯಪ್ಪಾ ತಾಂಬೆ ಇನ್ನೂ ಅನೇಕ ಜನ ನಮ್ಮ ಮಿತ್ರರು ಆ ಗುಂಪಿನಲ್ಲಿ ಕೆಲಸ ಮಾಡಿದೆವು. ಮೊದಲನೇ ಕೆಲಸವೆಂದರೆ ಹೆಬ್ಬಾಳ ದಫ್ತರ ಸುಟ್ಟಿದ್ದು. ಎರಡನೆಯದು ರಾಣೆಬೆನ್ನೂರ ತಾಲ್ಲೂಕಿನ ಹೊನ್ನತ್ತಿ ಒಳಗ ಐದು ಜನ ಪೊಲೀಸರು ಸಶಸ್ತ್ರಧಾರಿಗಳಾಗಿ ಹಪ್ತೆ ವಸೂಲಿ ಮಾಡ್ತಿದ್ರು. ನಾವು ಮುತ್ತಿಗೆ ಹಾಕಿ ಅವರನ್ನು ನಿಶ್ಶಸ್ತ್ರ ಮಾಡಿ ಬಂದೂಕು ಕಸಿದುಕೊಂಡು ಅಲ್ಲಿಯ ಹಪ್ತೆಯೆಲ್ಲ ವಸೂಲಿ ಮಾಡಿಕೊಂಡು ಬಂದೆವು. ಆ ಮೇಲೆ ನೆಗಳೂರ ಒಳಗ ಒಬ್ಬ ಸರ್ಕಲ್ ಇನ್ಸ್‌ಪೆಕ್ಟರ ಕಾರ ತೆಗೆದುಕೊಂಡು ಬಂದು ಹಪ್ತೆ ವಸೂಲ ಮಾಡುತ್ತಿದ್ದನು. ಅವನನ್ನು ನಾವು ಬಂಧಿಸಿ ವಸೂಲ ಮಾಡಿದ್ದ ಹಪ್ತೆಯನ್ನು ಲೂಟಿ ಮಾಡಿ ಅವನ ಕಾರು ಸುಟ್ಟುಹಾಕಿದೆವು. ಚಾವಡಿ ಸುಡುವದು, ದಫ್ತರ ಸುಡುವದು, ಸಿಂದೀ ಕಪಾಲಿ ಹರಿಯುವದು, ತಾರ ತಂತಿಗಳನ್ನು ಕಡಿಯುವದು ಇಂತಹ ಅನೇಕ ಕಾರ್ಯಕ್ರಮಗಳನ್ನು ಮಾಡಿದೆವು. ನಮ್ಮ ಕೊನೆಯ ಕಾರ್ಯಕ್ರಮ ಹೊಸರಿತ್ತಿಯ ಹತ್ಯಾಕಾಂಡ. ಅಲ್ಲಿ ಮಹಾದೇವಪ್ಪನವರ ಗುಂಪನ್ನು ಹಿಡಿಯಬೇಕು. ಇಲ್ಲಾ ಹಣವನ್ನಾದರೂ ತೆಗೆದುಕೊಂಡು ಬರಬೇಕೆಂದು ಸರಕಾರದವರು ಆಜ್ಞೆ ಮಾಡಿ ಪೊಲೀಸ್ ಗುಂಪು ಕಳಿಸಿ ಕೊಟ್ಟಿದ್ದರು. ನಮ್ಮ ಗುಂಪನ್ನು ಹಿಡಿಯುವದಕ್ಕಾಗಿ ಅವರು ಹೊಸರಿತ್ತಿಗೆ, ಆವಾಗಿನ ಕಾಲಕ್ಕ ಅದು ಕಾಂಗ್ರೆಸ್ಸಿನ ಗಂಡುಮೆಟ್ಟಿನ ಸ್ಥಾನ, ನಮ್ಮ ಮಹಾದೇವಪ್ಪಾ ಮೈಲಾರರ ಪ್ರತಿಷ್ಠಿತ ಸ್ಥಾನ, ಅಲ್ಲಿ ಹಪ್ತೆ ವಸೂಲ ಮಾಡಲಿಕ್ಕೆ ಬಂದಿದ್ದರು. ''ಮಹಾದೇವಪ್ಪನವರ ಗುಂಪು ಬಂದೆ ಬರುತ್ತದೆ. ಅವರು ನಮ್ಮ ಕೈಗೆ ಸಿಗುತ್ತಾರೆ. ನಾವು ಸುಸಜ್ಜಿತ ಪಡೆ ಅವರ ಗ್ಯಾಂಗ ಹಿಡಿಯಬೇಕು'' ಎಂದು ಸಿದ್ಧರಾಗಿ ಬಂದಿದ್ದರು. ನಮ್ಮ

ಗುಂಪಿಗೆ ಇದು ಪ್ರತಿಷ್ಠೆಯ ಕೆಲಸ. ನಾವು ಮಾಡೇತೀರಬೇಕು. ಎನ್ನುವ ಹುಮ್ಮಸ್ಸಿನಿಂದ ನಮ್ಮ ಮಹದೇವಪ್ಪನವರೂ ಕೂಡ ಆ ಕೆಲಸಕ್ಕೆ ಕಂಕಣಬದ್ಧರಾಗಿದ್ದರು. ೩೦ನೇ ತಾರೀಖು ಮೂರನೇ ತಿಂಗಳು ೧೯೪೩ರಲ್ಲಿ ಕೊಗನೂರ ಒಳಗ ನಾವು ಮಿಟಿಂಗ ಮಾಡಿದೆವು. ''ಈ ಕೆಲಸ ನಮಗ ಪ್ರತಿಷ್ಠೆಯ ಕೆಲಸ ಇದನ್ನ ನಮ್ಮ ಒಂದು ಪ್ರತಿಷ್ಠೆಯ ಸ್ಥಾನದೊಳಗ ಅವರು ಹಪ್ತೆ ವಸೂಲ ಮಾಡಾಕ ಹತ್ಯಾರ ಅಂದಮ್ಯಾಲ ನಾವು ಲೂಟ ಮಾಡಲೇ ಬೇಕು. ಈ ಕೆಲಸ ಆಗಲೇಬೇಕು. ಈ ಕೆಲಸದಲ್ಲಿ ನಾವು ಸತ್ತರೂ ಚಿಂತೆ ಇಲ್ಲ'' ಎಂದು ಮಹಾದೇವಪ್ಪನವರು ನಮ್ಮೆಲ್ಲರನ್ನು ಸೇರಿಸಿ ಪ್ರತಿಜ್ಞಾಮಾಡಿಸಿ ಒಪ್ಪಿಸಿಕೊಂಡರು. ಅವತ್ತಿಂದಿವಸ ನಾವು ಕೊಗನೂರಿನಿಂದ ನಿಬ್ಬಣಕ್ಕ ಹೋಗುವವರಂತೆ. ಚಕ್ಕಡಿಗೆ ಕೊಲ್ಲಾರಿ ಕಟ್ಟಿಕೊಂಡು ಎತ್ತಿಗೆ ಹುಲಗೆಜ್ಜಿ ಸರಾ, ಝೂಲು ಹಾಕಿಸಿಕೊಂಡು ಶೃಂಗಾರದಿಂದ ಹೊರಟೆವು. ಆವತ್ತು ಒಂದನೆಯ ತಾರಿಖು ನಾಲ್ಕನೆಯ ತಿಂಗಳು ೧೯೪೩ನೇ ಇಸ್ವಿ ಹೊಸರಿತ್ತಿಯ ವೀರಭದ್ರೇಶ್ವರ ಗುಡಿಯೊಳಗ ೨೧ ಮಂದಿ ಸಶಸ್ತ್ರ ಪೊಲೀಸರ ಕ್ಯಾಂಪ ಇತ್ತು. ಅವರು ನಮ್ಮ ಕರ್ನಾಟಕದವರಲ್ಲ. ಅವರು ಮಹಾರಾಷ್ಟ್ರದವರನ್ನ ಆರಿಸಿಕೊಂಡು ತಗೊಂಡು ಬಂದಿದ್ದರು. ಒಳ್ಳೆಗುರಿ ಹೊಡೆಯುವಂಥ ಪೋಲಿಸರ ಸಿಬ್ಬಂದಿ ಅಲ್ಲಿತ್ತು. ಹಪ್ತೆ ಕೆಲಸ ವಸೂಲಿ ಆರಂಭವಾಯಿತು.

ನಾವು ನಾಲ್ಕು ಗುಂಪುಗಳಾಗಿ ಆ ಕೇಂದ್ರಕ್ಕೆ ಮುತ್ತಿಗೆ ಹಾಕಿದ್ದೆವು. ಗೋಣೆಪ್ಪಾ ಕಮತಗಿ, ಈರಯ್ಯಾ ಹಿರೇಮಠ ಇವರು ವಸೂಲ ಮಾಡಿಟ್ಟ ಹಪ್ತೆಯನ್ನು, ಶಸ್ತ್ರಾಸ್ತ್ರಗಳನ್ನು ತೆಗೆದುಕೊಂಡು ಬರಬೇಕು ಎಂದು ಹೇಳಿದರು. ಒಳಗಿನ ಕಟ್ಟಿ ಹತ್ತಿರ ಒಬ್ಬ ಪೋಲಿಸ ಇದ್ದ. ಅದು ನಮಗೆ ಮೊದಲು ಗೊತ್ತಾಗಲಿಲ್ಲ. ಅವನು ಬಂದು ಮಹಾದೇವಪ್ಪನವರ ಹೊಟ್ಟಿಗೆ ಚಂಗು ಒಗೆದಾಗ ಚಂಗು ಅವರ ಹೊಟ್ಟೆಗೆ ನಟ್ಟಿತು. ಆವಾಗ ಗೋಣೆಪ್ಪ, ಮಹಾದೇವಪ್ಪಾ ಇಬ್ಬರು ಕೂಡಿ ಇವರ ಹೊಟ್ಟೆಯೊಳಗಿನ ಚಂಗು ಕಿತ್ತಿದರು. ಆವಾಗ ಕಿತ್ತಿದ ಕೂಡಲೇ ಪೋಲಿಸ ಗುಂಡು ಹಾರಿಸಿದನು. ಗುಂಡು ಅವರಿಗೆ ಬಡಿಯಿತು. ಹೊಟ್ಟೆಯೊಳಗೆ ಚಂಗುನು ಹೊಕ್ಕಿತ್ತು. ಹೀಗಾಗಿ ನಮ್ಮ ಮಹಾದೇವಪ್ಪನವರು ಭಾರತ ಮಾತಾ ಕೀ ಜೈ ಅಂತಾ ಅಲ್ಲೆ ಕುಸಿದು ಕುಳಿತರು. ಉಸಿರು ಎಳೆದರು.

(ಹಿನ್ನೆಲೆಯಲ್ಲಿ ದುಃಖ ಸೂಚಿಸುವ ಸಂಗೀತ)

ನಮ್ಮ ಮುಖಂಡರಾದ ಮೈಲಾರ ಮಹದೇವಪ್ಪನವರು ಯಾವುದೇ ಕೆಲಸಕ್ಕೆ ಹೋದರೂ ಕೂಡ ತಾವೇ ಮುಂಚೂಣಿಯಲ್ಲಿ ನಿಂತುಕೊಂಡು ನಮ್ಮನ್ನ ಹಿಂದ ಇಟ್ಟಕೊಂಡು ಕೆಲಸ ಮಾಡುತ್ತಿದ್ದರು. ಪ್ರತಿಯೊಂದಕ್ಕೂ ಅವರೇ ಮುಂದೆ ಹೋಗುತ್ತಿದ್ದರು. ಆವಾಗ ಸಾಧಾರಣ ನನಗ ೧೮-೧೯ ವರ್ಷ. ನನ್ನನ್ನು ಅವರು ತೊಡಿ ಮೇಲೆ ಕೂಡ್ರಿಸಿಕೊಂಡು ಊಟಾ ಮಾಡಿಸ್ತಿದ್ದರು. ಮಕ್ಕಳ ಮೇಲೆ ಅಷ್ಟೊಂದ ಪ್ರೇಮ ಇಡುತ್ತಿದ್ದರು. ಮತ್ತಾ ಅಜಾನುಬಾಹು ದೇಹ ಅವರದು. ಅವರು ಅಗಲಿ ಹೋದರು.

ಗಂಡು ಧ್ವನಿ : ಮೈಲಾರ ಮಹಾದೇವರ ಜೊತೆಗೆ ಒಡನಾಟವಿದ್ದ ಇನ್ನೊಬ್ಬರು ಪಂಚಾಕ್ಷರಿ ಒಳಸಂಗ ಹೀಗೆ ಹೇಳುತ್ತಾರೆ :

(ಅವರ ಅನುಭವ ಅವರದೇ ಧ್ವನಿಯಲ್ಲಿ)

ಶ್ರೀ ಪಂಚಾಕ್ಷರಿ : ಧಾರವಾಡ ಜಿಲ್ಲೆಯಲ್ಲಿ ಬಹಳ ಜವಾಬ್ದಾರಿ ಹೊತ್ತವರು ಮೈಲಾರ ಮಹಾದೇವರು ಇನ್ನೊಬ್ಬರು ಮುರುಗೋಡ ಮಹಾದೇವರು. ಅವರಿಗೆ ನಾವು ದೇವರಂತಾ ಕರೀತಾ ಇದ್ದೆವು. ಅವರ ಹೆಸರಗೊಂಡು ಯಾರೂ ಕರೀತಿದ್ದಿಲ್ಲ. ಎಲ್ಲರೂ ಬರೇ 'ದೇವರು, ದೇವರು' ಅಂತಾ ಕರಿತಾ ಇದ್ದರು. ಯಾಕೆಂದರೆ, ಅವರು ಯಾವಾಗಲೂ ದೇವರ ಸ್ವರೂಪಿಗಳಾಗಿ ನಮ್ಮ ದೇಶಭಕ್ತರನ್ನು ನಿರ್ಮಾಣ ಮಾಡತಕ್ಕಂತಾ ದೊಡ್ಡ ಮಿಶನರಿ ಮಾಡಿದಂಗ ನಮ್ಮ ಗಿರಿಮಲ್ಲೇಶ್ವರ ಆಶ್ರಮವನ್ನು ಕಟ್ಟಿ ಇಡೀ ದೇಶಕ್ಕಾಗಿ ಕಾರ್ಯಕರ್ತರನ್ನು ಕೊಟ್ಟರು. ಅವರು ಯಾವತ್ತೂ ಜನರಲ್ಲಿ ಒಂದು ಕ್ರಾಂತಿಶಕ್ತಿಯನ್ನು ತುಂಬಿ ನಮ್ಮನ್ನು ತಯಾರ ಮಾಡಿದರು. ಅವರಿಗೆ ಜಾತಿ, ಮತ, ಪಂಥ ಯಾವುದು ಇರಲಿಲ್ಲ. ಮನುಷ್ಯ ಜಾತಿ ಒಂದೇ ಎಂದು ದೇವನೊಬ್ಬ ನಾಮ ಹಲವು ಎಂದು ತಿಳಿದವರಾಗಿದ್ದರು. ಏನಾದರೂ ಮಾಡು ಸುಮ್ಮನೆ ಕೂಡಬೇಡಾ. ಎಂದು ಒಂದು ಸಂದೇಶವನ್ನು ಕೊಟ್ಟು ಒಂದು ಶಕ್ತಿಯನ್ನು ಕೊಟ್ಟ ಮಹಾಶಕ್ತಿ ಪುರುಷರೆಂದರೆ ನಮ್ಮ ಮಹಾದೇವರು.

ಹೆಣ್ಣುಧ್ವನಿ : ''ಮಾಡು ಇಲ್ಲವೇ ಮಡಿ'' ಎನ್ನುವ ಚಳುವಳಿಯು ೧೯೪೨ರಲ್ಲಿ ಉಗ್ರರೂಪ ತಾಳಿ, ರೈಲು, ಕಂಬ, ಕೀಳುವದು, ತಾರು, ತಂತಿ ಕತ್ತರಿಸುವದು, ಪೋಸ್ಟ ಲೂಟಿ ಮಾಡಿಸುವದು. ಹಪ್ತೆ ಸೂಟ ಮಾಡಿಸುವದು, ಶಾಲೆ

ಸುಡುವದು, ಸ್ಟೇಷನ್ ಸುಡುವದು. ಇಂಥ ಕಾರ್ಯಗಳು ದೇಶದಾದ್ಯಂತ ಹೊಸ ರೂಪ ತಳೆದವು. ಶ್ರೀ ಕ್ಷೇತ್ರ ಇಂಚಗೇರಿ ಮಠದ ಶ್ರೀ ಮಹದೇವರು ಮುರಗೋಡ ಇವರು ಆಗಿನ ವಿಚಿತ್ರ ಘಟನೆಗಳನ್ನು ಹೀಗೆ ಹೇಳುತ್ತಿದ್ದರು.

(ಆವರದೇ ಧ್ವನಿ ಮುದ್ರಣ)

ಶ್ರೀ ಮಹಾದೇವರು : ಗಾಂಧೀಜೀ ಹೇಳತಾರಲ್ಲಾ ''ಡು ಆರ್ ಡೈ'' ಅಂತ ಹೇಳಿ, ಯಾವ ಗಾಂಧೀಜೀ ಘೋರ ಯುದ್ಧದೊಳಗ ಕಂಪೌಂಡರ ಆಗಿ ಸೇವಾ ಮಾಡುತ್ತಿದ್ದಾ, ಅದೇ ಗಾಂಧೀಜೀ ಈ ಸರಕಾರ ಸುಟ್ಟು ಒಗೆಯಿರಿ ಅಂತಾ ಹೇಳಿದಾ. ಅವನ ಮಾತು ನಡೀತಿಲ್ಲಾ? ಆ ಕಾಲಕ್ಕ ೮೦೦ ಸಂಸ್ಥಾನಾಧಿಪತಿಗಳಿದ್ದರು. ನಮ್ಮಂಥಳಲಿ ಜನ ವೇದಾಂತಿಗಳು ವೇದಾಂತ ಹೇಳುವವರಿದ್ದರು, ಕೇಳುವವರಿದ್ದರು. ಆದರ ಪೂರ್ಣ ಮನೋರ್ಲ್ಯವಾದವರು ಯಾರಿದ್ದರು? ಗಾಂಧೀಯವರ ಪೂರ್ಣ ಮನೋರ್ಲ್ಯ ಆಗಿತ್ತು ಅಂತಾ ತಿಳಿದುಕೊಂಡು ಅವನ ಮಾತು ನಡೆಯಿತು. ನಾನು ಮೊನ್ನೆ ನೋಡಿದೆನಲ್ಲಾ ಧಾರವಾಡದಲ್ಲಿ ೧೯೪೪ನೇ ಇಸ್ವಿಯೊಳಗ ರೇಲ್ವೆ ಲೈನ್ ಹಾಕತಿದ್ದರಲ್ಲಾ. ಇದನ್ನ ಹುಡುಗುರು ಎಲ್ಲಾ ಮುರಿದು ಬಿಟ್ಟಿದ್ದರು. ಕೇವಲ ಹುಡುಗರು ಇಂಥ ಸಾವಿರಾರ ಕಂಬಗಳನ್ನು ಮುರಿದು ಬಿಟ್ಟಿದ್ದರು. ಧಾರವಾಡ ಹುಬ್ಬಳ್ಳಿ ಗದಗ ಒಳಗ ಆ ಶಕ್ತಿ ಯಾರ ಕೊಟ್ಟರು, ''ಡು ಆರ್ ಡೈ'' ಎಂದು ಹೇಳಿದ ಗಾಂಧೀ ಕೊಟ್ಟರು.

ಗಂಡು ಧ್ವನಿ : ಸ್ವಾತಂತ್ರ್ಯದ ಫಲವೆಂದರೆ ಕೋಟಿ ಕೋಟಿ ಜನ ನಾಡಿಗಾಗಿ ದುಡಿದವರ, ಬಡದಾಡಿದವರ ತ್ಯಾಗ ಬಲಿದಾನವಲ್ಲದೇ ಮತ್ತೇನು ? ಭಾರತ ಬಿಟ್ಟು ತೊಲಗಿರಿ ಚಳುವಳಿಯ ಮುಖ್ಯ ಉದ್ದೇಶ. ಅಹಿಂಸಾವ್ರತವೇ ಆಗಿತ್ತು. ಆದಾಗ್ಯೂ ನದಿಗಳ ಪ್ರವಾಹದಂತೆ ಸ್ವಾತಂತ್ರ್ಯ ಸೇನಾನಿಗಳ ರಕ್ತ ಹರಿದದ್ದು ಸತ್ಯ ಸಂಗತಿ.

ಹೆಣ್ಣು ಧ್ವನಿ : ಅಂದ್ಹಾಂಗ ಅಂದಿನ ಇತಿಹಾಸ ಚಿರಸ್ಮರಣೀಯ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿದವರೆಲ್ಲರ ಜೀವನಾದರ್ಶಗಳನ್ನು ನೆನಪಿಸಿಕೊಂಡು ನಡೆಯುವದೇ ನಾವು ಅವರಿಗೆಲ್ಲ ಸಲ್ಲಿಸಬೇಕಾದ ಗೌರವ

(ಸಂಗೀತವಾದ್ಯ ಕಹಳೆ)

ಲೇಖಕರ ಇತರ ಕೃತಿಗಳು

೧.	ಪಾಶ್ಚಾತ್ಯ ವಿಮರ್ಶೆಯ ರೂಪುರೇಷೆಗಳು (ಕರ್ನಾಟಕ ವಿಶ್ವವಿದ್ಯಾಲಯದ ಪದವಿ ವಿದ್ಯಾರ್ಥಿಗಳಿಗೆ ೧೯೭೯ರಿಂದ ಪಾಂಡಿತ್ಯಕ ಗ್ರಂಥ)	೧೯೭೯
೨.	ಪಾಶ್ಚಾತ್ಯ ಕಾವ್ಯಾವಲೋಕನ	೧೯೮೧
೩.	ಕ್ರಿಯಾತೀಲ ತಿವಿಶರಗೆಯಯು (ಕಿರು ಪ್ರಬಂಧ)	೧೯೮೩
೪.	ಸಮಾಹಿತ (ಲೇಖನಗಳ ಸಂಗ್ರಹ)	೧೯೮೫
೫.	ಸ್ಯೆ ತಾಮಲ! (ಕವನಗಳು)	೧೯೮೫
೬.	ನೀಲಮ್ಮನ ವಚನಗಳು (ಸಂಪಾದಿತ)	೧೯೮೬
೭.	ಜಯದೇವಿ ತಾಯಿಯವರು (ಕಿರು ಪ್ರಬಂಧ)	೧೯೮೬
೮.	ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು	೧೯೮೮
೯.	ಬರ ಬೇತನ (ಸಂಪಾದಿತ)	೧೯೮೯
೧೦.	ದಿಗ್ವಿಜಯ (ಸಂಪಾದಿತ) (ಕರ್ನಾಟಕ ವಿಶ್ವವಿದ್ಯಾಲಯ ಪದವಿ ವಿದ್ಯಾರ್ಥಿಗಳಿಗೆ ಸಲ್ಲ)	೧೯೮೯
೧೧.	ಆಂತರ್‌ಜಾತಿ ವಿವಾಹ	೧೯೯೧
೧೨.	ಪಾಶ್ಚಾತ್ಯ ಸಾಹಿತ್ಯ ಮಾರ್ಗ (ಕರ್ನಾಟಕ, ಗುಲಬರ್ಗಾ, ಮೈಸೂರು ಮುಂ. ವಿಶ್ವವಿದ್ಯಾಲಯ ವಿದ್ಯಾರ್ಥಿಗಳಿಗೆ ಪಾಂಡಿತ್ಯಕ ಗ್ರಂಥ)	೧೯೯೧
೧೩.	ಜಯದೇವಿತಾಯಿ ಲಿಗಾಡೆ (ಮಹಾಪ್ರಬಂಧ)	೧೯೯೨
೧೪.	ಸಮರ ಸಮೀರ (ಜೀವನ ಚರಿತ್ರೆ)	೧೯೯೩
೧೫.	ಸನೂತನ (ಸಂಶೋಧನ ಲೇಖನಗಳ ಸಂಗ್ರಹ)	೧೯೯೪
೧೬.	ಸರ್ವೋದಯದ ಹರಿಕಾರ (ಸಂಪಾದಿತ)	೧೯೯೫
೧೭.	ಸನಾತನ (ಪ್ರಬಂಧಗಳ ಸಂಗ್ರಹ)	೧೯೯೫
೧೮.	ಸರಂಗೇಲ್	೧೯೯೭

ವಿವೇಕ ಪ್ರಕಾಶನದ ಪ್ರಕಟಣೆಗಳು :

೧.	ಪಾಶ್ಚಾತ್ಯ ಕಾವ್ಯಾವಲೋಕನ	ಡಾ॥ ಸರೋಜಿನಿ ಬವಲಾರ
೨.	ಮೌಲಿಕ ನೀತಿ ಶಿಕ್ಷಣ	ಶ್ರೀ ಕೆ. ಎಫ್. ಪಾಟೀಲ
೩.	ಕರ್ನಾಟಕ ಏಕೀಕರಣದ ಹಾದಿಯಲ್ಲಿ	ಶ್ರೀ ಕೆ. ಎಫ್. ಪಾಟೀಲ
೪.	ಸಾಗಿ ಬರುತಿದೆ ಬೆಳಗು	ಶ್ರೀ ಕೆ. ಎಫ್. ಪಾಟೀಲ
೫.	ಸಹಾರದ	ಸುಸಂಪೂರ್
೬.	ಪಾಶ್ಚಾತ್ಯ ಸಾಹಿತ್ಯ ಮಾರ್ಗ	ಡಾ॥ ಸರೋಜಿನಿ ಬವಲಾರ
೭.	ನಾನೇನು ಮಾಡಲಿ?	ಶ್ರೀಮತಿ ಸುಧಾ ರಾವ್
೮.	ಗಣಿತದ ಕಾವ್ಯಕ್ಕ ತೀರ್ಪಿಕೆಯಾಗುವ ಆಶೆ	ಶ್ರೀಮತಿ ಭಾರತಿ ಹಿರೇಮಠ
೯.	ಒಳಮುಟ್ಟ	ಶ್ರೀಮತಿ ಅನುಸೂಯಾ ಎಂ.ಕೆ.
೧೦.	ಹುರಕಡ್ಲಿ ಅಜ್ಜ ಮತ್ತು ನಾನು	ಶ್ರೀಮತಿ ಪ್ರಮಿಳಾ ಹಟ್ಟಿಹೊಳಿ
೧೧.	ಸಮರ ಸಮೀರ	ಡಾ॥ ಸರೋಜಿನಿ ಬವಲಾರ
೧೨.	ಸ್ತೋತ್ರಮಾಲಾ	ಶ್ರೀ ಶಂ. ಬಾ. ಮನಗೋಳಿ
೧೩.	ಆಯುಷ್ಮರ್ಮ ವಿದ್ಯಾಪೀಠ	ಶ್ರೀ ಶಂ. ಬಾ. ಮನಗೋಳಿ
೧೪.	ಕನ್ನಡಿಯ ಸಾಕ್ಷಿ	ಶ್ರೀಮತಿ ಶೈಲಜಾ ಹುಲಮನಿ
೧೫.	ಸನೂತನ	ಡಾ॥ ಸರೋಜಿನಿ ಬವಲಾರ
೧೬.	ಹಬ್ಬೀನ ಕಡಲು	ಶ್ರೀಮತಿ ಸೀತಾ ಜಿ. ಗಾಂವಕರ
೧೭.	ಅಕ್ಷರ ಕ್ರಾಂತಿ	ಶ್ರೀಮತಿ ಸೀತಾ ಜಿ. ಗಾಂವಕರ
೧೮.	ಎಲುಮರೆಯ ಹೂ	ಡಾ॥ ಪ್ರಮಿಳಾ ಯಳಮಲಿ
೧೯.	ಬ್ರಹ್ಮಕಮಲ	ಶ್ರೀಮತಿ ಶಾರದಾ ಜಿ.
೨೦.	ಸನಾತನ	ಡಾ॥ ಆರ್. ಸರೋಜಿನಿ (ಬವಲಾರ)
೨೧.	ಸರಂಗೇಲ್	ಡಾ॥ ಆರ್. ಸರೋಜಿನಿ (ಬವಲಾರ)

ಬೆಳಗಾವಿಯ ಲಿಂಗರಾಜ ಕಾಲೇಜಿನ ವಿದ್ಯಾರ್ಥಿನಿಯಾಗಿ ಪದವಿ ೧೯೬೫. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಅಧ್ಯಯನ ೧೯೬೭. ಅದೇ ವಿಶ್ವವಿದ್ಯಾಲಯದಿಂದ ಪಿ.ಎಚ್.ಡಿ. ೧೯೮೨. ಹುಬ್ಬಳ್ಳಿಯ ಮಹಿಳಾ ಕಾಲೇಜಿನಲ್ಲಿ ೧೯೬೮ರಿಂದ ಉಪನ್ಯಾಸಕಿ. ೧೯೭೬ರಿಂದ ಪ್ರವಾಚಕಿ. ೧೯೮೪ರಿಂದ ಪ್ರಾಧ್ಯಾಪಕಿ. ೧೯೯೫ ರಿಂದ ಪ್ರಾಂಶುಪಾಲರು.

ವಿಮರ್ಶೆ, ಕಾವ್ಯ, ಸಂಶೋಧನೆ, ಸಂಪಾದನೆ, ಸಣ್ಣಕಥೆ, ಹರಟೆ, ರೂಪಕಗಳ ಬರವಣಿಗೆ. ಹದಿನೆಂಟು ಕೃತಿಗಳ ಪ್ರಕಟಣೆ.

ಉತ್ತರ ಕರ್ನಾಟಕ ಲೇಖಕಿಯರ ಸಮ್ಮೇಳನ ಮಾಡಿ ಸಂಘ ಸ್ಥಾಪನೆ ೧೯೮೫.

ಭಾಷಾಸಂಗಮ ಅಲಹಾಬಾದಿನ ಕರ್ನಾಟಕ ಶಾಖೆಯನ್ನು ಹುಬ್ಬಳ್ಳಿಯಲ್ಲಿ ಸ್ಥಾಪಿಸಿ, ೧೯೯೩ರಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿ ಚಿತ್ತೋಗಡದ (ರಾಜಸ್ತಾನ) ಮೀರಾ ಪ್ರತಿಷ್ಠಾನ, ೧೯೯೪ರಲ್ಲಿ ತಿರುಪತಿಯ (ಆಂಧ್ರಪ್ರದೇಶ) ಶ್ರೀ ವೆಂಕಟೇಶ್ವರ ವಿಶ್ವವಿದ್ಯಾಲಯ, ೧೯೯೫ ಅಲಹಾಬಾದ (ಉತ್ತರ ಪ್ರದೇಶ)ಗಳಲ್ಲಿ ರಾಷ್ಟ್ರೀಯ ವಿಚಾರ ಸಂಕಿರಣಗಳಲ್ಲಿ ಮತ್ತು ಅನೇಕ ರಾಜ್ಯಮಟ್ಟದ ಸಮ್ಮೇಳನಗಳಲ್ಲಿ ಪ್ರಬಂಧ ಮಂಡನೆ ಕಾವ್ಯವಾಚನ. ದೂರದರ್ಶನದಲ್ಲಿ ಸ್ವಾತಂತ್ರ್ಯ ಹೋರಾಟಗಾರರನ್ನು ಕುರಿತು ಸಂದರ್ಶನ. ದೂರದರ್ಶನದ ಧಾರಾವಾಹಿ ಲೇಖಕಿ.

ಸ್ಪಂದನ ಸಾಂಸ್ಕೃತಿಕ ಆಂದೋಲನ ಸ್ಥಾಪನೆ ೧೯೮೫. ಈ ವೇದಿಕೆಯ ಮೂಲಕ ವಿಚಾರ ಸಂಕಿರಣ, ಸಭೆ, ಸಮ್ಮೇಳನ, ಶಾಶ್ವತಮಟ್ಟ, ಶಿಬಿರ ಪಪ್ತಾಹಗಳ ಆಯೋಜನೆ.

ರಾಜ್ಯಮಟ್ಟದ ಪ್ರಥಮ ಕೇರ್ತವ ಸಾಹಿತ್ಯ ಸಮಾವೇಶದ ಸಂಚಾಲಕಿ.

ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಕುರಿತು ಬೆಂಗಳೂರಿನಲ್ಲಿ ಏರ್ಪಡಿಸಿದ್ದ ರಾಷ್ಟ್ರಮಟ್ಟದ ಶಿಬಿರ (೧೯೮೬), ದಕ್ಷಿಣ ರಾಜ್ಯಗಳ ಶಿಬಿರ (೧೯೯೧)ಗಳಿಗೆ ಆಮಂತ್ರಿತ.

೧೯೯೩ರಿಂದ ಕರ್ನಾಟಕ ರಾಷ್ಟ್ರ ಸಮಾಜ ಕಲ್ಯಾಣ ಸಲಹಾ ಮಂಡಳಿಯ, ಪಠ್ಯ ಪುಸ್ತಕ ರಚನಾ ಸಮಿತಿ ಕರ್ನಾಟಕ ವಿಶ್ವವಿದ್ಯಾಲಯ ಮತ್ತು ಪದವೀ ಪೂರ್ವ ವಿಭಾಗಗಳ ಒಂದು ಅವಧಿಗೆ ಸದಸ್ಯರು.